
ಜನಶಕ್ತಿ

ಕನ್ನಡ ವಾರಪತ್ರಿಕೆ



Blog :janashakthi.wordpress.com e-mail : js_weekly@yahoo.com


ಸಂಪುಟ 7 ಸಂಚಿಕೆ 21
ಮೇ 26, 2013 ಪುಟ 16 ರೂ. 10/-




ಪಾಕಿಸ್ತಾನದಲ್ಲಿ ಪ್ರಜಾಸತ್ತೆಯ ಮುನ್ನಡೆ



ರಾಜ್ಯ ಲೂಟಿ ಹೊಡೆದವರಿಗೆ ದೇಶ ಲೂಟಿ ಹೊಡೆದವರು ಪರ್ಯಾಯವೆ?





ವಚನ ಸಾಹಿತ್ಯ : ಜಾತಿ ವ್ಯವಸ್ಥೆಯ ವಿರೋಧದ ಸ್ಪಷ್ಟ ಪ್ರತಿಪಾದನೆ

ಖಾತೆ ತೆರೆಯದ ಎಡ ಪಕ್ಷಗಳು



ಕಾಂಗ್ರೆಸ್ ಸರ್ಕಾರದ ಪದಗ್ರಹಣ ಮತ್ತು ಜನಚಳುವಳಿಗಳ ಮುಂದಿರುವ ಸವಾಲುಗಳು

ಕೊನೆಗೂ ಇಬ್ಬರು ಮಂತ್ರಿಗಳ ರಾಜೀನಾಮೆ : ಯುಪಿಎ-2 ಗೋಸುಂಬೆತನದ ಪ್ರದರ್ಶನ

ಭಾಗ 2

ಸಿಐಟಿಯು, ಈ ಮೇದಿನ 2013ರಂದು ಕಾರ್ಮಿಕ ವರ್ಗದ ಐಕ್ಯ ಹೋರಾಟವನ್ನು ಇನ್ನಷ್ಟು ಎತ್ತರಿಸಲು ಮತ್ತು ಅದನ್ನು ಜನ-ವಿರೋಧಿ, ಸಾಮ್ರಾಜ್ಯಶಾಹಿ-ಪರ ಧೋರಣೆಯ ವ್ಯವಸ್ಥೆಯನ್ನು ಬದಲಿಸುವ ಹೋರಾಟದ ಮಟ್ಟಕ್ಕೇರಿಸಲು ಶ್ರಮಿಸುವುದಾಗಿ ಪಣ ತೊಡುತ್ತದೆ. ಅದು ಕಾರ್ಮಿಕರ ಐಕ್ಯತೆಯನ್ನು ಬುಡಮಟ್ಟದಲ್ಲಿ ವಿಸ್ತರಿಸುವ ಮತ್ತು ಕ್ರೋಡೀಕರಿಸುವ ಪ್ರತಿಜ್ಞೆ ಮಾಡುತ್ತದೆ, ಹಾಗೂ ಐಕ್ಯತೆಯ ಹರಹನ್ನು ಗ್ರಾಮಾಂತರದ ಜನತೆಯ ವರೆಗೆ ಒಯ್ದು ಅವರನ್ನೂ ಶೋಷಣಾತ್ಮಕ ಧೋರಣೆಗಳ ವಿರುದ್ಧ ಹೋರಾಟದಲ್ಲಿ ಅಣಿನೆರೆಸುವ ಪ್ರತಿಜ್ಞೆಯನ್ನೂ ಮಾಡುತ್ತದೆ.

ಮೇದಿನ ಪ್ರಣಾಳಿಕೆ-2013

ಶ್ರಮಿಕ ವರ್ಗದ ಐಕ್ಯತೆಯ ವಿಶ್ವಾಸ

ಭಾರತದಲ್ಲಿ

ನಮ್ಮ ದೇಶದ ದುಡಿಯುವ ಜನತೆ ಈ ವರ್ಷ ಮೇದಿನವನ್ನು ಖಂಡಿತವಾಗಿಯೂ ಹೆಮ್ಮೆ ಮತ್ತು ಆತ್ಮವಿಶ್ವಾಸದ ಭಾವನೆಯೊಂದಿಗೆ ಆಚರಿಸುತ್ತಾರೆ. ಮೇದಿನ 2013, ಫೆಬ್ರುವರಿ 20-21, 2013ರ ಎರಡು ದಿನಗಳ ದೇಶವ್ಯಾಪಿ ಐತಿಹಾಸಿಕ ಸಾರ್ವತ್ರಿಕ ಮುಷ್ಕರದ ಬೆನ್ನಲ್ಲೇ ಬಂದಿದೆ. ಇದು ದೇಶದ ಎಲ್ಲ ಕಾರ್ಮಿಕ ಸಂಘಟನೆಗಳ ಕೇಂದ್ರಗಳು ಸರ್ವವ್ಯಾಪಿ ಐಕ್ಯ ವೇದಿಕೆಯಿಂದ ನೀಡಿದ ಕ-ರೆಯಾಗಿದ್ದು, ಆಳುವ ರಾಜಕೀಯ ವ್ಯವಸ್ಥೆಯ ಜನ-ವಿರೋಧಿ ಮತ್ತು ಕಾರ್ಪೊರೇಟ್-ಪರ ಧೋರಣೆಗಳು ತಮ್ಮ ಬದುಕು ಮತ್ತು ಜೀವನಾಧಾರಗಳ ಮೇಲೆ ಹೊರಿಸಿರುವ ಸಂಕಟಗಳ ವಿರುದ್ಧ ಎಲ್ಲ ಶ್ರಮಜೀವಿ ಜನಗಳ ಕುದಿಯುತ್ತಿರುವ ಸಿಟ್ಟನ್ನು, ಜತೆಗೇ ಅವುಗಳನ್ನು ಎದುರಿಸಿ ಹೋರಾಡುವ ಒಂದು ದೃಢ ನಿರ್ಧಾರವನ್ನು ಪ್ರದರ್ಶಿಸಿದೆ. ಈ ಎರಡು ದಿನಗಳ ದೇಶವ್ಯಾಪಿ ಮುಷ್ಕರ ಕಾರ್ಯಾಚರಣೆಯಲ್ಲಿ ಕಾರ್ಮಿಕರಷ್ಟೇ ಭಾಗವಹಿಸಿದ್ದಲ್ಲ, ಜೀವನದ ಎಲ್ಲ ರಂಗಗಳ ಜನಗಳು ತಮ್ಮ ಸಂಪೂರ್ಣ ಬೆಂಬಲವನ್ನು ನೀಡಿದರು. ಕಾರ್ಮಿಕ ಸಂಘಗಳ ಮುಷ್ಕರ ಕಾರ್ಯಾಚರಣೆಗೆ ಇಂತಹ ಜನತಾ ಬೆಂಬಲ, ಜನಸಾಮಾನ್ಯರು ದೇಶದ ಸಂಘಟಿತ ಕಾರ್ಮಿಕ ಆಂದೋಲನದಿಂದ, ಒಟ್ಟಾಗಿ ಕಾರ್ಮಿಕ ವರ್ಗದಿಂದ ಉನ್ನತ ನಿರೀಕ್ಷೆ ಇಟ್ಟುಕೊಂಡಿದ್ದಾರೆ ಎಂಬುದನ್ನು ಬಿಂಬಿಸುತ್ತದೆ. ಅವರ ಕಾಳಜಿಗಳು ಮತ್ತು ಸಂಕಟಗಳಿಗೆ, ಕಾರ್ಪೊರೇಟ್‌ಗಳ ಸೆರೆಯಾಳಾಗಿರುವ ಆಳುವ ರಾಜಕೀಯ ವ್ಯವಸ್ಥೆಯ ಲೂಟಿ ಮತ್ತು ಕೊಳ್ಳೆಯ ಜನ-ವಿರೋಧಿ ಧೋರಣೆಗಳು ಉಂಟು ಮಾಡಿರುವ ಅಸಹನೀಯ ಸಂಕಟಗಳು ಮತ್ತು ಕಾರ್ಗತ್ತಲಿನ ಹಿನ್ನೆಲೆಯಲ್ಲಿ, ಮುಂಬರುವ ದಿನಗಳಲ್ಲಿ ಇನ್ನೂ ಗಟ್ಟಿಯಾಗಿ, ಪರಿಣಾಮಕಾರಿಯಾಗಿ ದನಿ ನೀಡಲಾಗುವುದು ಎಂಬ ನಿರೀಕ್ಷೆ ಇದು. ಅದು ಲೂಟಿ-ಕೋರರು ಮತ್ತು ಕೊಳ್ಳೆ ಹೊಡೆಯುವವರು ಹಿಮ್ಮೆಟ್ಟುವಂತೆ ಮಾಡಲಾಗುವುದು ಎಂಬ ನಿರೀಕ್ಷೆ ಕೂಡ.

ಮೇದಿನ 2013, ಕಾರ್ಮಿಕ ಆಂದೋಲನದಲ್ಲಿ ಈ ಹೋರಾಟವನ್ನು



ಉಡುಪಿಯಲ್ಲಿ ಮೇದಿನದ ರ‍್ಯಾಲಿ

ಇನ್ನಷ್ಟು ಎತ್ತರಕ್ಕೆ ಒಯ್ಯುವ ಮತ್ತು ಅದರಲ್ಲಿ ಜನಸಮೂಹಗಳನ್ನು ಅಣಿನೆರೆಸುವ ಇಂತಹ ವಿಶ್ವಾಸವನ್ನು ಉತ್ತೇಜಿಸಲಿ.

ಸನ್ನಿವೇಶ ನಿಸ್ಸಂದೇಹವಾಗಿಯೂ ಸವಾಲುಗಳಿಂದ ಕೂಡಿದೆ. ಕಾರ್ಪೊರೇಟ್‌ಗಳ ಸೆರೆಯಾಳಾಗಿರುವ ಆಳುವ ರಾಜಕೀಯ ವ್ಯವಸ್ಥೆ ಊಹೆಗೂ ನಿಲುಕದ ಅಹಂಕಾರ ಮತ್ತು ಹತಾಶೆಯಿಂದ ಇಡೀ ರಾಷ್ಟ್ರೀಯ ಆರ್ಥಿಕದಲ್ಲಿ ಮತ್ತು ಸಮಾಜದಲ್ಲಿ ತಂದಿರುವ ವಿರೂಪ ಮತ್ತು ವಿಕೃತಿಯನ್ನು ಹಾಗೂ ಸಾಮಾನ್ಯ ಜನಸಮೂಹಗಳ ಬಗ್ಗೆ, ನಿರ್ದಿಷ್ಟವಾಗಿ ಕಾರ್ಮಿಕರ ಬಗ್ಗೆ ಪ್ರದರ್ಶಿಸುತ್ತಿರುವ ಅತೀವ ತಿರಸ್ಕಾರವನ್ನುಬಯಲಿಗೆಳೆಯಬೇಕಾದ ಕಾರ್ಯಭಾರವಿದು. ಹೇಗೆ ಜನತೆಯಿಂದ ಚುನಾಯಿತವಾದ ಒಂದು ಸರಕಾರ ಕೆಲವೇ ದೇಶೀ ಮತ್ತು ವಿದೇಶೀ ಕಾರ್ಪೊರೇಟ್‌ಗಳಿಗೆ ಪ್ರಯೋಜನ ತರುವ ಹಾಗೂ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನಿರ್ದೇಶನಗಳಂತೆ ಕುಣಿಯುವ ಒಂದು ಅಜೆಂಡಾದ ಮೇಲಷ್ಟೇ ಕ್ರಿಯೆ ನಡೆಸುತ್ತದೆ ಎಂಬದನ್ನು ಬಯಲು ಮಾಡುವ ಕಾರ್ಯಭಾರವಿದು.

ನಮ್ಮ ದೇಶ, ಬಂಡವಾಳಶಾಹಿ ಜಗತ್ತಿನಾದ್ಯಂತ ತೀವ್ರ ಬಿಕ್ಕಟ್ಟು ಮತ್ತು ಆರ್ಥಿಕ ಹಿಂಜರಿತ ಆಳಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಒಂದು ಆರ್ಥಿಕ ನಿಧಾನಗತಿಯನ್ನು ಎದುರಿಸುತ್ತಿದೆ. ದೇಶಕ್ಕೆ ಜಿ.ಡಿ.ಪಿ.ಯನ್ನು, ಅಂದರೆ ಒಟ್ಟು ಆಂತರಿಕ ಉತ್ಪನ್ನವನ್ನು ನಿರ್ಮಿಸುತ್ತಿರುವ, ಸರಕಾರದ ಖಜಾನೆಗಳಿಗೆ ಆದಾಯಗಳನ್ನು ಮತ್ತು ಮಾಲಕರಿಗೆ ಲಾಭಗಳನ್ನು ಒದಗಿಸುತ್ತಿರುವ ಕಾರ್ಮಿಕರನ್ನೇ ಇದು ಎಲ್ಲರಿಗಿಂತ ಹೆಚ್ಚಾಗಿ ತಟ್ಟಿರುವುದು; ಅತ್ತ ಲಾಭದ ಮಟ್ಟ ಮತ್ತು ನ್ಯಾಯಬಾಹಿರ ಗಳಿಕೆಗಳು ಏರುತ್ತಲೇ ಇವೆ. ಸಂಬಳಗಳಲ್ಲಿ ತೀವ್ರ ಕಡಿತ ಮತ್ತು ಉದ್ಯೋಗದಲ್ಲಿರುವವರ ಸಾಮಾಜಿಕ ಭದ್ರತೆಯ ಸೌಲಭ್ಯಗಳಲ್ಲಿ



...ರಿನಲ್ಲಿ : ಸಿಐಟಿಯು ಮತ್ತು ಎವಟಿಯುಸಿಯಿಂದ ಮೇದಿನ

ಕಡಿತದೊಂದಿಗೆ ನಿರುದ್ಯೋಗ ಮತ್ತು ಉದ್ಯೋಗನಷ್ಟಗಳು ಉಲ್ಬಣಗೊಳ್ಳುತ್ತಿವೆ. ಸಂಪತ್ತು ಮತ್ತು ಸೇವೆಗಳನ್ನು ಸೃಷ್ಟಿಸುತ್ತಿರುವ ಕಾರ್ಮಿಕರು ಉತ್ಪಾದನೆಯ ಗಳಿಕೆಗಳಲ್ಲಿ ತಮ್ಮ ಪಾಲು ತೀವ್ರವಾಗಿ ಇಳಿಯುತ್ತಿರುವುದನ್ನು ಕಾಣುತ್ತಿರುವಾಗಲೇ, ಅಧಿಕೃತ ಅಂದಾಜುಗಳ ಪ್ರಕಾರ ಲಾಭದ ಪಾಲು ಕಳೆದ ಒಂದೂವರೆ ದಶಕದಲ್ಲಿಯೇ ಮೂರು ಪಟ್ಟಿಗಿಂತ ಹೆಚ್ಚಾಗಿದ ಶ್ರಮಶಕ್ತಿಗೆ ಕನಿಷ್ಠ ರಕ್ಷಣೆಯನ್ನಾದರು ಕೊಡುವ ಕಾರ್ಮಿಕ ಕಾನೂನುಗಳನ್ನೆಲ್ಲ ಅವನ್ನು ಜಾರಿಗೊಳಿಸಬೇಕಾಗಿರುವ ಅಧಿಕಾರಿಗಳ ಕೃಪೆಯಿಂದಲೇ ಕಾಲಕೆಳಗ ತುಳಿದು ಹಾಕಲಾಗುತ್ತಿದೆ. ಕಾರ್ಮಿಕ ಹಕ್ಕುಗ ಮೇಲೆ, ಹೆಚ್ಚಿನ ದುಡಿಮೆಯ ಸ್ಥಳಗಳಲ್ಲಿ ಹೆಚ್ಚಿನ ರಾಜ್ಯಗಳಲ್ಲಿ, ನಿರ್ದಿಷ್ಟವಾಗಿ ದೇಶೀ-ವಿದೇಶೀ ಎರಡೂ ಕ್ಷೇತ್ರಗಳ ಖಾಸಗಿ ಕಾರ್ಪೊರೇಟ್ ವಲಯದಲ್ಲಿ ಮಾಲಕರು ಮತ್ತು ಸರಕಾರ ಸೇರಿಕೊಂಡು ಅಮಾನುಷ ದಾಳಿ ನಡೆಸುತ್ತಿದ್ದಾರೆ.

ಉದ್ದಿಮೆ ವಲಯದಲ್ಲಿ ಹಿಂಜ-ರಿತದ ಕರಿನೆರಳು ಇದ್ದರೂ, ಎಲ್ಲ ಆವಶ್ಯಕ ಸರಕುಗಳ, ಅದರಲ್ಲೂ ಆಹಾರ ವಸ್ತುಗಳ ಬೆಲೆಗಳು ಏರುತ್ತಲೇ ಇವೆ, ಅವಕ್ಕೆ ಆಗಾಗ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಮುಂತಾದ ಇಂಧನಗಳ ಬೆಲೆಗಳನ್ನು ಏರಿಸುತ್ತಿರುವುದು ಇನ್ನಷ್ಟು ತುಪ್ಪ ಸುರಿಯುತ್ತಿದೆ. ಅದರ ಪಕ್ಕ-ಪಕ್ಕದ ಸರಕು ಮಾರುಕಟ್ಟೆಯಲ್ಲಿ ಸಟ್ಟಾ ವ್ಯಾಪಾರ ಪ್ರತಿ ವರ್ಷ ವಿಪರೀತ ಪ್ರಮಾಣದಲ್ಲಿ ಏರುತ್ತಿದೆ. ಬೆಲೆಯೇರಿಕೆ ತಾನಾಗಿಯೇ ಸಂಭವಿಸುತ್ತಿಲ್ಲ, ಆಡಳಿತ ನಡೆಸುತ್ತಿರುವವರು ಬೆಲೆಯೇರಿಕೆ ಆಗುವಂತೆ ಮಾಡುತ್ತಿದ್ದಾರೆ ಎಂಬುದು ಸ್ಪಷ್ಟ-ಇದೆಲ್ಲಾ ಸರಕು ಮಾರುಕಟ್ಟೆಯಲ್ಲಿ ಕಾರ್ಪೊರೇಟ್ ಸಟ್ಟಾಕೋರರಿಗೆ ಅನಿರೀಕ್ಷಿತ ಲಾಭ ಗಿಟ್ಟಿಸಲು ಅನುಕೂಲವಾಗಲಿ ಎಂದು, ಅದರಿಂದಾಗಿ ಜನಗಳಿಗೆ ಹೊಟ್ಟೆಗಿಲ್ಲದಂತಾದರೆ ಏನಂತೆ, ಮಕ್ಕಳಲ್ಲಿ ಅಪೌಷ್ಟಿಕತೆ ಉಂಟಾದರೆ ಏನಂತೆ!

ಇಡೀ ಆರ್ಥಿಕ ನಿರ್ವಹಣೆ ಒಂದು ವಿಕೃತ ಪ್ರವೃತ್ತಿಯನ್ನು ಬಿಂಬಿಸುತ್ತಿದೆ. ಹಣಕಾಸು ಕೊರತೆಯಾಗಿದೆ ಎಂದು ಕೊರಗುತ್ತಲೇ ಸರಕಾರ ಕಾರ್ಪೊರೇಟ್ ವರ್ಗಕ್ಕೆ ಕೊ... ಪೀಡಿತ ಖಜಾನೆಯಿಂದಲೇ ಅಪಾರ ರಿಯಾಯ್ತಿಗಳನ್ನು (2012-13ರಲ್ಲಿ ರೂ. 5.73 ಲಕ್ಷ ಕೋಟಿ) ದಯಪಾಲಿಸುತ್ತಾ ಬಂದಿದೆ; ಅತ್ತ ಅದೇ ವರ್ಗದಿಂದ ರೂ. 4.83 ಲಕ್ಷ ಕೋಟಿಗಳಷ್ಟು ನೇರ ತೆರಿಗೆಗಳನ್ನು ವಸೂಲಿ ಮಾಡದೆ ಹಾಗೇ ಬಾಕಿ ಸಂಗ್ರಹಗೊಳ್ಳಲು ಬಿಟ್ಟಿದೆ. ಹೂಡಿಕೆ ಸನ್ನಿವೇಶ ಮಂದವಾಗಿದ್ದರೂ ಸರಕಾರ ಹಣಕಾಸು ವಲಯದ ಮೇಲೆ ನಿಯಂತ್ರಣವನ್ನು ತೆಗೆದಿದೆ. ಖಾಸಗಿ ಮತ್ತು ವಿದೇಶಿ ಬ್ಯಾಂಕುಗಳು ಭಾರತೀಯ ಜನತೆಯ ಉಳಿತಾಯಗಳನ್ನು ಬಾಚಿ ಅವನ್ನು ಸಟ್ಟಾಕೋರ ಮತ್ತು ಇತರ ಆದ್ಯತೆಯಿಲ್ಲದ ವಲಯದತ್ತ ತಿರುಗಿಸಲು ಹೆಚ್ಚಿನ ಅವಕಾಶ ಕಲ್ಪಿಸಿ ಕೊಟ್ಟಿದೆ. ಉತ್ತಮ ಲಾಭ ಗಳಿಸುತ್ತಿರುವ ಆಯಕಟ್ಟಿನ ... ನೈಸರ್ಗಿಕ ಕ್ಷೇತ್ರಗಳಲ್ಲಿನ ಸಾರ್ವಜನಿಕ

ಪುಟ 12 ಕ್ಕೆ

ಖಾತೆ ತೆರೆಯದ ಎಡ ಪಕ್ಷಗಳು

2013 ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಭ್ರಷ್ಟ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳನ್ನು ತಿರಸ್ಕರಿಸುವಂತೆ ಮತದಾರರಲ್ಲಿ ಮನವಿ ಮಾಡಿಕೊಂಡು ಎಡ ಪಕ್ಷಗಳಾದ ಸಿಪಿಐ(ಎಂ), ಸಿಪಿಐ ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳು ಸುಮಾರು 30 ವಿಧಾನಸಭಾ ಕ್ಷೇತ್ರಗಳಲ್ಲಿ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು. ಆದರೆ ಎಡ ಪಕ್ಷಗಳ ಒಬ್ಬ ಅಭ್ಯರ್ಥಿಯನ್ನೂ ಗೆಲ್ಲಿಸಲು ಸಾಧ್ಯವಾಗಿಲ್ಲ. ಇದರ ಪರಿಣಾಮವಾಗಿ ಈ ಬಾರಿಯೂ ರಾಜ್ಯ ವಿಧಾನಸಭೆಯಲ್ಲಿ ದುಡಿಯುವ ಜನರ ಧ್ವನಿ ಕೇಳಲಾರದು. ರೈತರು ಮತ್ತು ಕಾರ್ಮಿಕರು ಬೀದಿಗಿಳಿದು ತಮ್ಮ ಹೋರಾಟಗಳನ್ನು ತೀವ್ರಗೊಳಿಸುವ ಮೂಲಕವಷ್ಟೇ ತಮ್ಮ ಬೇಡಿಕೆಗಳತ್ತ ಸರ್ಕಾರದ ಗಮನ ಸೆಳೆಯಲು ಪ್ರಯತ್ನಪಡಬೇಕಾಗುವುದು.

ಬಿಜೆಪಿಯ ಬ್ರಹ್ಮಾಂಡ ಭ್ರಷ್ಟಾಚಾರದ ವಿರುದ್ಧ, 5 ವರ್ಷಗಳ ಅದರ ದುರಾಡಳಿತದ ವಿರುದ್ಧ ಎಡಪಕ್ಷಗಳು ನಡೆಸಿದಷ್ಟು ಪ್ರಚಾರ – ಪ್ರಕ್ಷೋಭೆಯನ್ನು ಬೇರೆ ಯಾವ ಪಕ್ಷಗಳೂ ಮಾಡಲಿಲ್ಲ. ಬಳ್ಳಾರಿಯಲ್ಲಿ ನಡೆಯುತ್ತಿದ್ದ ಗಣಿಲೂಟಿಯ ವಿರುದ್ಧ ಮೊದಲು ಧ್ವನಿ ಎತ್ತಿದ್ದು ಸಿಪಿಐ(ಎಂ). ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸಿಗೆ ಬಿಜೆಪಿಯ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಲು ನೈತಿಕ ಬಲವೇ ಇರಲಿಲ್ಲ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಭಾರೀ ದೊಡ್ಡ, ವಿರಾಟ ಸ್ವರೂಪದ ಭ್ರಷ್ಟಾಚಾರದ ಹಗರಣಗಳಲ್ಲಿ ಸಿಕ್ಕಿಹಾಕಿಕೊಂಡಿತ್ತು. ಸಿಪಿಐ(ಎಂ) ಮಾತ್ರ ರಾಜ್ಯದ ಬಿಜೆಪಿ ಸರ್ಕಾರ ಹಾಗೂ ಕೇಂದ್ರ ಕಾಂಗ್ರೆಸ್ ಸರ್ಕಾರಗಳ ಜನ ವಿರೋಧಿ ನೀತಿಗಳ ವಿರುದ್ಧ ನಿರಂತರವಾಗಿ ಹೋರಾಟಗಳನ್ನು ಮಾಡುತ್ತಾ ಬಂದಿತ್ತು. ಆದರೂ ಕೂಡ ಎಡಪಕ್ಷಗಳಿಗೆ ಬಿಜೆಪಿ ವಿರೋಧಿ ಹಾಗೂ ಕಾಂಗ್ರೆಸ್ ವಿರೋಧಿ ಮತಗಳನ್ನು ಸೆಳೆಯಲು ಸಾಧ್ಯವಾಗಿಲ್ಲ. ಈ ವೈಫಲ್ಯವನ್ನು ವಿವರವಾದ ವಿಮರ್ಶೆಗೆ ಒಳಪಡಿಸಿ ಎಡಪಕ್ಷಗಳು ಅಗತ್ಯ ಪಾಠಗಳನ್ನು ಕಲಿಯುವುದು ಆಗಬೇಕಿದೆ.


ಸಿಪಿಐ(ಎಂ) ಈ ಬಾರಿ 16 ಕ್ಷೇತ್ರಗಳಲ್ಲಿ ಸ್ಪರ್ಧೆಗಿಳಿದಿತ್ತು. ಒಂದು ಸ್ಥಾನವನ್ನೂ ಗೆಲ್ಲಲು ಸಾಧ್ಯವಾಗಿಲ್ಲ ಮಾತ್ರವಲ್ಲ, ಸಿಪಿಐ(ಎಂ) ಮತಗಳಿಕೆಯಲ್ಲಿಯೂ ಕುಸಿತ ಕಂಡು ಬಂದಿದೆ. ಕಳೆದಬಾರಿ, 9 ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧೆಮಾಡಿ ಒಟ್ಟು 61,996 ಮತಗಳನ್ನು (ಶೇ. 0.24) ಪಡೆಯಲಾಗಿತ್ತು. ಆದರೆ ಈ ಬಾರಿ 16 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 68,775 ಮತಗಳನ್ನು (ಶೇ. 0.23) ಮಾತ್ರ ಪಡೆಯಲು ಸಾಧ್ಯವಾಗಿದೆ. ಒಟ್ಟು ಮತಗಳೆನೋ ಆರೇಳು ಸಾವಿರ ಹೆಚ್ಚಾಗಿವೆ. ಆದರೆ ಒಟ್ಟು ಮತಗಳ ಶೇಕಡವಾರು ಪ್ರಮಾಣ ಕುಸಿದಿದೆ. ಕಳೆದ ಬಾರಿಯೂ ಸ್ಪರ್ಧಿಸಿದ್ದ ಕೆಲವು ಕ್ಷೇತ್ರಗಳಲ್ಲಿ ಈ ಬಾರಿ ಕಡಿಮೆ ಮತಗಳು ದೊರೆತಿವೆ. ಇದಕ್ಕೇನು ಕಾರಣ ಎಂಬುದನ್ನು ಕಂಡುಕೊಳ್ಳುವುದು ಅಗತ್ಯವಿದೆ.

ಹಿಂದೆ ಎರಡು–ಮೂರು ಬಾರಿ ಗೆದ್ದಿರುವ ಬಾಗೇಪಲ್ಲಿ ಕ್ಷೇತ್ರದಲ್ಲಿ ಈ ಬಾರಿ 35,472 ಮತಗಳನ್ನು ಪಡೆದ ಸಿಪಿಐ(ಎಂ) ಎರಡನೇ ಸ್ಥಾನದಲ್ಲಿದೆ. 66,227 ಮತಗಳನ್ನು ಪಡೆದ ಪಕ್ಷೇತರ ಅಭ್ಯರ್ಥಿ ಜಯಗಳಿಸಿದ್ದಾರೆ. 2008 ರ ಚುನಾವಣೆಗೆ ಹೋಲಿಸಿದರೆ ಈ ಬಾರಿ ಸಿಪಿಐ(ಎಂ) ಮತಗಳು ಹೆಚ್ಚಾಗಿವೆ. ಸಿಪಿಐ(ಎಂ) ನ ಪರಂಪರಾಗತ ಮತಗಳು ಮಾತ್ರ ಬಹುತೇಕವಾಗಿ ಪಕ್ಷಕ್ಕೆ ದೊರೆತಿವೆ. ಆದರೆ ಬಿಜೆಪಿ ವಿರೋಧಿ ಮತಗಳನ್ನಾಗಲಿ ಕಾಂಗ್ರೆಸ್ ವಿರೋಧಿ ಮತಗಳನ್ನಾಗಲಿ ಗಣನೀಯ ಪ್ರಮಾಣದಲ್ಲಿ ಪಕ್ಷಕ್ಕೆ ಸೆಳೆಯಲು ಸಾಧ್ಯವಾಗಿಲ್ಲ. ಪಕ್ಷೇತರ ಅಭ್ಯರ್ಥಿಗೆ ಅದು ಸಾಧ್ಯವಾಗಿದೆ. ಕಳೆದ ಬಾರಿ ಜಯಗಳಿಸಿದ ಕಾಂಗ್ರೆಸ್ ಅಭ್ಯರ್ಥಿಯ ಶೇ. 50 ಕ್ಕೂ ಹೆಚ್ಚು ಮತಗಳನ್ನು, ಜೆಡಿ(ಎಸ್) ನ ಸುಮಾರು ಶೇ. 50 ರಷ್ಟು ಮತಗಳನ್ನು ಮತ್ತು ಬಿಜೆಪಿಯ ಸುಮಾರು ಶೇ. 90 ರಷ್ಟು ಮತಗಳನ್ನು ಬಾಚಿಕೊಂಡು ಪಕ್ಷೇತರ ಅಭ್ಯರ್ಥಿ ಜಯಗಳಿಸಿದ್ದಾರೆ. ಸಿಪಿಐ(ಎಂ) ಪರಂಪರಾಗತ ಮತಗಳು ಮಾರಾಟವಾಗಿಲ್ಲ ಎಂದು ಸಮಾಧಾನ ಪಟ್ಟುಕೊಳ್ಳಬಹುದಾದರೂ ಇತರ ಕೆಲವು ಪ್ರಮುಖ ರಾಜಕೀಯ ಪಕ್ಷಗಳ ಮತಗಳು ಸಾರಸಗಟಾಗಿ ಮಾರಾಟ ಆಗುವುದನ್ನು ತಡೆಯಲು ಸಾಧ್ಯವಾಗಿಲ್ಲ ಎಂಬುದೇ ಖೇದದ ಸಂಗತಿ. ಕಪ್ಪು ಹಣದ ಹೊಳೆ ಹುಚ್ಚೆದ್ದು ಹರಿವಾಗ ಎಚ್ಚರವಿಲ್ಲದ ಬಡಪಾಯಿಗಳ ಮತಗಳು ಕೊಚ್ಚಿಕೊಂಡು ಹೋಗದಿರಲು ಸಾಧ್ಯವೆ?.

ಈ ಸಲ ಮತದಾರರಿಗೆ ಒಳ್ಳೆಯ 'ಬೆಲೆ' ಸಿಕ್ಕಿದೆ ಎಂಬ ವ್ಯಂಗ್ಯದ ಮಾತು ಎಲ್ಲಾ ಕಡೆ ಕೇಳಿಬರುತ್ತಿದೆ. ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿ ಈ ಬಾರಿ 'ಓಟಿಗಾಗಿ ನೋಟು' ಚಲಾವಣೆಯಾಗಿದೆ. ಓಟಿಗಾಗಿ ನೋಟುಗಳನ್ನು ವಿತರಿಸುವ ಮೂಲಕ ಸಮೂಹಗಳಲ್ಲಿ ಕೀಳು ಮನಸ್ಥಿತಿಯನ್ನು (lumpen Mindset) ವ್ಯವಸ್ಥಿತವಾಗಿ ಬೆಳೆಸಲಾಗುತ್ತಿದೆ. ವಿದ್ಯಾವಂತರು, ಅನುಕೂಲಸ್ಥರು ಸಹ ಚುನಾವಣಾ ಸಮಯದಲ್ಲಿ ಹಂಚಲಾಗುತ್ತಿರುವ ದುಡ್ಡಿಗೆ ಕೈವೊಡ್ಡುತ್ತಿದ್ದಾರೆ. ಇನ್ನು ಕೆಲವರು ಮತದಾರರ ಆರ್ಥಿಕ ಅಡಚಣೆಗಳನ್ನು ನಿವಾರಿಸುವ ಮೂಲಕ ಅವರ ಮೇಲೆ ಹಿಡಿತವನ್ನು ಸಾಧಿಸುತ್ತಾರೆ. ಹಣದ ಆಮಿಷದ ಜೊತೆಯಲ್ಲಿ ಮತಗಳನ್ನು ಗೆಲ್ಲಲು ಜಾತಿಯನ್ನು ಹೆಚ್ಚೆಚ್ಚಾಗಿ ಬಳಸಲಾಗುತ್ತಿದೆ. ಬಹುಸಂಖ್ಯಾತ ಜಾತಿಗೆ ಸೇರಿದ ಅಭ್ಯರ್ಥಿ ಸುಲಭವಾಗಿ ಗೆಲ್ಲುತ್ತಾನೆ. ಎಡಪಕ್ಷಗಳ ಕಾರ್ಯಕರ್ತರು ಈ ವಿದ್ಯಾಮಾನಗಳನ್ನು ಸರಿಯಾಗಿ ಅಂದಾಜು ಮಾಡಿಕೊಳ್ಳಬೇಕು.

ಎಡಪಕ್ಷಗಳ ಅಭ್ಯರ್ಥಿಗಳಿಗೆ ಹಣಬಲ ಇರುವುದಿಲ್ಲ. ಜಾತಿ ಬಲವನ್ನು ಅವರು ಅವಲಂಭಿಸುವಂತಿಲ್ಲ. ದುಡಿಯುವ ಜನಸಮೂಹಗಳನ್ನು ವಿಶಾಲವಾಗಿ ಸಂಘಟಿಸುತ್ತಾ, ಅವರ ಆರ್ಥಿಕ ಮತ್ತು ಸಾಮಾಜಿಕ ಬೇಡಿಕೆಗಳಿಗಾಗಿ ಬಲಿಷ್ಠ ಹೋರಾಟಗಳನ್ನು ನಡೆಸುವುದರ ಜತೆಯಲ್ಲೇ ಅವರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸುವ ಕೆಲಸಕ್ಕೆ ಅಷ್ಟೇ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ. ಹಣಬಲ, ಜಾತಿ ಬಲದ ಸೆಳೆತಕ್ಕೆ ಸಿಕ್ಕಿಹಾಕಿಕೊಳ್ಳದೆ ಚುನಾವಣಾ ಹೋರಾಟದಲ್ಲಿಯೂ ದೃಢವಾಗಿ ನಿಲ್ಲುವಂತೆ ಅವರನ್ನು ಸಿದ್ಧಗೊಳಿಸಲು ಬಹಳ ಕಷ್ಟಪಡಬೇಕಾಗಿದೆ. ಎಡಪಕ್ಷಗಳು ಮಾತ್ರ ಪ್ರತಿಪಾದಿಸುವ ಪರ್ಯಾಯ ಧೋರಣೆಗಳಿಗೆ ದುಡಿಯುವ ಜನರ ಒಲವನ್ನು ಗಳಿಸಲು ದಣಿವರಿಯದೆ ಶ್ರಮಿಸಬೇಕಾಗಿದೆ.

ನಿರೀಕ್ಷೆಗಳೆದುರಲ್ಲಿ ನೂತನ ಮುಖ್ಯಮಂತ್ರಿ



ಹದಿನಾಲ್ಕನೆಯ ವಿಧಾನಸಭಾ ಚುನಾವಣೆಯಲ್ಲಿ 121 ಸ್ಥಾನಗಳನ್ನು ಪಡೆದು ಸ್ಪಷ್ಟ ಬಹುಮತದ ಮೂಲಕ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಸರಕಾರವನ್ನು ರಚಿಸಿದೆ. ಮೈಸೂರು ಜಿಲ್ಲೆಯ ಸಿದ್ಧರಾಮನಹುಂಡಿಯ ಸಿದ್ಧರಾಮಯ್ಯನವರೀಗ ರಾಜ್ಯದ 22ನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇದು ತಮ್ಮ ಬಹು ದಿನಗಳ ಆಶೆ ಮತ್ತು ಹಲವು ಬಾರಿ ತಪ್ಪಿಸಲ್ಪಟ್ಟ ಅವಕಾಶವೆಂದು ಅವರು, ಅವರ ಅಭಿಮಾನಿಗಳು ಹರ್ಷಿಸಿದ್ದಾರೆ. ಉತ್ತಮ ಆಡಳಿತ ನೀಡಬೇಕೆಂಬ ದಿಶೆಯಲ್ಲಿ ಹಲವಾರು ಕನಸುಗಳನ್ನು ಬಿಚ್ಚಿಟ್ಟಿದ್ದಾ-ರೆ. ವ್ಯಕ್ತಿಗತ ಕನಸುಗಳು ಕಾಂಗ್ರೆಸ್‌ನಂತಹ ಪಕ್ಷಧಲ್ಲಿ ಅದೆಷ್ಟು ಸಾಕಾರಗೊಳ್ಳುತ್ತವೆಂಬುದನ್ನು ಕಾಲವೇ ಹೇಳಬೇಕಾಗುತ್ತದೆ. 'ನೆಹರೂ ನೀತಿ'ಗಳಿಗೇ ಎಳ್ಳು ನೀರು ಬಿಟ್ಟು, ಜಾಗತೀಕರಣ, ಉದಾರೀಕರಣದ ಪ್ರವರ್ತಕ ಕಾಂಗ್ರೆಸ್‌ಗೆ ಅಹಿಂದ ಚಳುವಳಿ, ಲೋಹಿಯಾವಾದಿಗಳ ನಿಕಟ ಒಡನಾಟವಿರುವ ಸಿದ್ಧರಾಮಯ್ಯನವರು ಎಷ್ಟು ಪಥ್ಯವಾಗಲಿದ್ದಾರೆ, ಪ್ರಸ್ತುತವಾಗಲಿದ್ದಾರೆ, ಯಾರು ಯಾರನ್ನು ಪ್ರಭಾವಿಸುತ್ತಾರೆ ಎಂಬುದು ಕಾದು ನೋಡಬಹುದು.

ಒಡಕು–ಸಂಘರ್ಷ

ಒಂದಂತೂ ನಿಜ, ಸಿದ್ಧರಾಮಯ್ಯನವರು ಒಳಗೆ ಅದೆಷ್ಟೋ ವಿರೋಧವಿದ್ದರೂ ಶಾಸಕರ ಇಂಗಿತ ಮತ್ತು ಸನ್ನಿವೇಶದ ಸಹಾಯದಿಂದ ಮುಖ್ಯಮಂತ್ರಿಯಾಗಿದ್ದಾರೆ. ಬಿಜೆಪಿಯ ವಿರುದ್ಧ ಜನತೆಯ ತೀವ್ರ ಅತೃಪ್ತಿಯ ಪ್ರಮಾಣವನ್ನು ಗ್ರಹಿಸಿದ್ದ ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರಕ್ಕೆ ಬರುವ ನಿರೀಕ್ಷೆಗಳು ಗರಿಗೆದರಿ ಸಿ.ಎಂ.ಸ್ಥಾನಕ್ಕೆ ವಿಪರೀತ ಪೈಪೋಟಿ ಆರಂಭಗೊಂಡಿತ್ತು. ಓಟದಲ್ಲಿ ಪ್ರಧಾನವಾಗಿ ಸಿದ್ಧರಾಮಯ್ಯನವರಲ್ಲದೇ ಕೇಂದ್ರ ಸಚಿವ ಖರ್ಗೆ, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಪರಮೇಶ್ವರ್ ಇದ್ದರು. ಹಿಂದಿನ ಚುನಾವಣೆಯಲ್ಲಿ ಕಂಡಂತೆಯೇ ಈ ಬಾರಿಯೂ ಪರಸ್ಪರ ಸೋಲಿಸುವ ಅನಾರೋಗ್ಯಕರ ಸ್ಪರ್ಧೆ ತಾರಕ-ಕ್ಕೆ ಏರಿತ್ತು. ಇವೆಲ್ಲವುಗಳ ಪರಿಣಾಮ ಸಿಎಂ ಆಯ್ಕೆ ಜಟಿಲವಾಗುವ ಸೂಚನೆಗಳಿದ್ದವು. ಆದರೆ ಫಲಿತಾಂಶದ ನಂತರದ ಸನ್ನಿವೇಶ ಮತ್ತು ಶಾಸಕರ ಬಹುಮತದಿಂದ ಸಿದ್ಧರಾಮಯ್ಯನವರ ಆಯ್ಕೆಯನ್ನು ಖಾತ್ರಿಗೊಳಿಸಿತು. ಶಾಸಕಾಂಗವನ್ನು ಕಡೆಗಣಿಸಿ ಅದರ ನಾಯಕನನ್ನು ಹೈಕಮಾಂಡ್ ನೇಮಿಸುವ ಪರಿಪಾಠವೇ ಕಾಂಗ್ರೆಸ್ ಸಂಸ್ಕೃತಿ. ಆದರೆ ಹಾಲಿ ಸನ್ನಿವೇಶದಲ್ಲಿ ಮುಂದಿನ ಪಾರ್ಲಿಮೆಂಟ್ ಚುನಾವಣೆಯನ್ನು ಗಮನದಲ್ಲಿರಿಸಿ, ಒಳ ಹೊರ ಇಂಗಿತಗಳನ್ನು ಒಡಗೂಡಿಸಿ ಅತೀ ಗೊಂದಲಕ್ಕೆ ಎಡೆ ಮಾಡದಂತೆ ಶಾಸಕಾಂಗ ನಾಯಕನನ್ನು ಆರಿಸಿದ್ದು ವಿಶೇಷ. ಆದರೆ ನಾಯಕನ ಆಯ್ಕೆ ಪ್ರಕಟಿಸುವ ಮೊದಲೇ ಖರ್ಗೆ, ಮೊಯ್ಲಿ ಯವರು ಸಭೆಯಿಂದ ಹೊರಟಿದ್ದು ಕಾಂಗ್ರೆಸ್‌ನೊಳಗಿನ ಒಡಕಿನ ದರ್ಶನ. ಖರ್ಗೆ, ಪರಮೇಶ್ವರ್‌ರವರಿಗೆ ಸಿಎಂ ಸ್ಥಾನ ಸಿಗಲಿಲ್ಲವೆಂದು ಅದು ಮುಂದೆ ಹಲವೆಡೆ ಪ್ರತಿಭಟನೆಗಳು ನಡೆದದ್ದು ಸಂಘರ್ಷದ ಸೂಚಕ.


ಅಸಹ್ಯಕರ ಪ್ರದರ್ಶನ

ಆದರೆ ಸಿಎಂ ಜೊತೆಗೆ ಸಚಿವರ ಪ್ರಮಾಣವಚನ ನಡೆಯದೇ ವಾರದುದ್ದಕ್ಕೂ ಅದು ಹೈಕಮಾಂಡ್ ಬಾಗಿಲ ಬಳಿಯೇ ಸುತ್ತುತ್ತಿರುವುದು, ನೂರರಷ್ಟು ಶಾಸಕರು ತಮ್ಮನ್ನು ಮಂತ್ರಿ ಮಾಡಿರೆಂದು ದೆಹಲಿಯಲ್ಲಿ ಲಾಭಿ ಮಾಡುತ್ತಾ ಬೀಡು ಬಿಟ್ಟಿರುವುದು ಒಂದು ಅಸಹ್ಯಕರ ಪ್ರದರ್ಶನ. ಸಂಪುಟ ರಚನೆ ಮುಖ್ಯಮಂತ್ರಿಯ ಹಕ್ಕು. ಅವರು ಪಕ್ಷದ ನಾಯಕತ್ವದೊಂದಿಗೆ ಸಮಾಲೋಚಿಸಿ ಆಯ್ಕೆ ಮಾಡಬೇಕು. ಆದರೆ ಈಗಿನ ವರಸೆ ಎಲ್ಲದ್ದಕ್ಕೂ ಹೈಕಮಾಂಡ್ ಕೈಗೆ ಜುಟ್ಟು

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್

ಪಿ ಮಹಮ್ಮದ್



ವಿಧಾನಸಭಾ ಚುನಾವಣೆ ಫಲಿತಾಂಶ : ಸಿಪಿಐ(ಎಂ) ವಿಮರ್ಶೆ

ಮೇ.11–2013 ರಂದು ಬಿಡುಗಡೆ ಮಾಡಲಾದ ಪತ್ರಿಕಾ ಹೇಳಿಕೆ

ಕರ್ನಾಟಕದ ಜನಾದೇಶ 2013

ಕಾಂಗ್ರೆಸ್ ಪಕ್ಷಕ್ಕೆ 120 ಸ್ಥಾನಗಳು ಲಭಿಸಿ ಸರಳ ಬಹುಮತ ದೊರೆತಿದೆಯೆಂಬ ಕಾರಣಕ್ಕೆ ಕಾಂಗ್ರೆಸ್‌ನ ರಾಷ್ಟ್ರ ಹಾಗು ರಾಜ್ಯ ನಾಯಕರು ಅದು ಪಕ್ಷದ ವರ್ಚಸ್ಸು, ನೀತಿಗಳನ್ನು ಮೆಚ್ಚಿ ಜನತೆ ನೀಡಿದ ಆದೇಶವೆಂದು ಬೀಗುತ್ತಿದ್ದಾರೆ. ಆದರೆ ಶೇ.6.55ರಷ್ಟು ಮತದಾನ ಏರಿಕೆಯಾಗಿದ್ದರೂ, ಬಿಜೆಪಿಯ ಮತಗಳಿಕೆ ಶೇ.13.89ರಷ್ಟು ಕುಸಿದಿದ್ದರೂ ಕಾಂಗ್ರೆಸ್‌ಗೆ ಏರಿಕೆಯಾದ ಮತಗಳ ಪ್ರಮಾಣ ಕೇವಲ 1.96. ಇದು ಕರ್ನಾಟಕದ ಜನತೆ ಕಾಂಗ್ರೆಸ್ ಪಕ್ಷವನ್ನು ಪುರಸ್ಕರಿಸಿಲ್ಲ ಎಂಬುದನ್ನು ಸ್ಪಷ್ಟವಾಗಿ ಎತ್ತಿ ತೋರಿಸಿದೆ. ಶೇ 63.45 ರಷ್ಟು ಮತದಾರರು ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿದ್ದಾರೆ. ಅವರು ಅಧಿಕಾರದ ಚುಕ್ಕಾಣಿಯನ್ನು ಹಿಡಿದಿದ್ದರೆ ಅದು ಕೇವಲ ನಮ್ಮ ಚುನಾವಣಾ ವ್ಯವಸ್ಥೆಯ ಅತ್ಯಂತ ದೋಷಪೂರ್ಣ ಪದ್ಧತಿಯ ಕೊಡುಗೆ ಎಂದು ಸಿಪಿಐ(ಎಂ) ಪಕ್ಷ ವಿಶ್ಲೇಷಿಸಿದೆ.

ಅಧಿಕಾರ ದಾಹದಿಂದ ಬಿಜೆಪಿ ರಾಜ್ಯವನ್ನು ಹಾಗೂ ತಮ್ಮ ಪಕ್ಷವನ್ನು ವಿವಿಧ ಮಾಫಿಯಾಗಳ ಕೈಗೊಪ್ಪಿಸಿದ ಪರಿಣಾಮ ಸೋಲನ್ನಪ್ಪಿದೆ. ಕರಾವಳಿಯಲ್ಲಿ ಅವರ ಮತ ಗಳಿಕೆ ಹಾಗೂ ಸ್ಥಾನಗಳ ಕುಸಿತ ಕರ್ನಾಟಕದ ಜನತೆ ಅಲ್ಪ ಸಂಖ್ಯಾತರ ಮೇಲೆ ನಿರಂತರ ಧಾಳಿ, ಮಹಿಳೆಯರ ಮೇಲಿನ ಧಾಳಿ, ಒಟ್ಟಿನಲ್ಲಿ ಸಮಾಜದ ಕೋಮುವಾದೀಕರಣವನ್ನು ತಿರಸ್ಕರಿಸುತ್ತಾರೆ ಎಂಬುದನ್ನು ಎತ್ತಿ ತೋರಿಸುತ್ತದೆ. ಇಲ್ಲಿ ಮೋದೀಕರಣಕ್ಕೆ ಎಡೆಯಿಲ್ಲ ಎಂಬುದನ್ನು ಬಿಜೆಪಿ ಹಾಗೂ ಸಂಘ ಪರಿವಾರ ಅರಿತುಕೊಳ್ಳಬೇಕು ಎಂಬುದು ಜನಾದೇಶದ ಸಾರವಾಗಿದೆ.

ಹಣದ ಚೆಲ್ಲಾಟ, ಜಾತೀವಾದದ ಉರವಣಿಗೆ

ಕರ್ನಾಟಕ ಹಿಂದೆಂದೂ ಕಂಡರಿಯದಷ್ಟು ಹಣದ ಹೊಳೆ ಹರಿದಿದೆ. ಪ್ರತಿ ಮತಕ್ಕೂ ಸಾವಿರ, ಎರಡು ಸಾವಿರ, ಪ್ರತಿ ಮನೆಗೂ ರೂ.5,000–10,000, ಸ್ತ್ರೀ ಶಕ್ತಿ ಗುಂಪುಗಳಿಗೆ ರೂ.10,000 – 20,000 ದೇವಸ್ಥಾನಗಳು, ಮಂಡಳಿಗಳು ಇತ್ಯಾದಿಗಳ ಮೂಲಕ ಮತಗಳ ಖರೀದಿ ಅಪರಿಮಿತವಾಗಿ ನಡೆದಿದೆ. ಇದು ಚುನಾವಣಾ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವವನ್ನೇ ಅಪಾಯಕ್ಕೀಡು ಮಾಡಿದೆ. ಇದರಿಂದಾಗಿ ಈಗ 203ಕ್ಕೂ ಹೆಚ್ಚು ಜನ ಶಾಸಕರು ಕೋಟ್ಯಾಧಿಪತಿಗಳಿದ್ದಾರೆ. ಹಲವು ಜನ ಹತ್ತಾರು ಕೋಟಿಗಳ ಒಡೆಯರು ಕಾಂಗ್ರೆಸ್ಸಿನಲ್ಲಿ ತುಂಬಿಕೊಂಡಿದ್ದಾರೆ. ಹೀಗಿರುವಾಗ ಈ ಸರ್ಕಾರದಿಂದ ಮತ್ತು ಈ ವಿಧಾನಸಭೆಯಿಂದ ಭ್ರಷ್ಟಾಚಾರಮುಕ್ತ ಮತ್ತು ಜನಪರ ಆಡಳಿತ ನಿರೀಕ್ಷಿಸಲು ಸಾಧ್ಯವೇ?

ಚುನಾವಣೆಯಿಂದ ಚುನಾವಣೆಗೆ ಜಾತೀವಾದವೂ ಉಲ್ಬಣಿಸುತ್ತಿದೆ. ಭ್ರಷ್ಟಾಚಾರ, ದುರಾಡಳಿತಗಳನ್ನು, ಜನರ ಬದುಕನ್ನು ನಾಶ ಮಾಡುವ ನೀತಿಗಳನ್ನು ಕಡೆಗಣಿಸಿ ಹಣ, ಜಾತಿಗಳಿಗೆ ಪುರಸ್ಕಾರ ಮಾಡುವ ಪ್ರವೃತ್ತಿಯ ವಿರುದ್ಧ ಎಲ್ಲ ಪ್ರಗತಿಪರರೂ, ಪ್ರಜಾಪ್ರಭುತ್ವವಾದಿಗಳೂ ಜನಾಂದೋಲನಕ್ಕೆ ಮುಂದಾಗಬೇಕಿದೆ.

ಮತದಾರರಿಗೆ ಅರಿವು ಮೂಡಿಸಲು ಅವಕಾಶ ನೀಡದ, ಹಣದ ಹೊಳೆಯನ್ನು ನಿಯಂತ್ರಿಸಲಾಗದ ಚುನಾವಣಾ ಆಯೋಗದ ವೈಫಲ್ಯ

ಪೋಲೀಸು, ಅರೆ ಮಿಲಿಟರಿ ಪಡೆಗಳು, ರಾಜ್ಯದ, ಹೊರರಾಜ್ಯಗಳ ಅಧಿಕಾರಿಗಳ ದೊಡ್ಡ ತಂಡವನ್ನೇ ಬಳಸಿದರೂ ಚುನಾವಣಾ ಆಯೋಗ ಹಣದ ಹೊಳೆಯನ್ನು ನಿಯಂತ್ರಿಸಲಾಗಲಿಲ್ಲ. ಅವರು ವಶಪಡಿಸಿಕೊಂಡ ಹಣ ಒಂದು ಕ್ಷೇತ್ರದಲ್ಲಿ ಹರಿದ ಹಣದ ಒಂದು ಸಣ್ಣ ಭಾಗ ಮಾತ್ರ. ಆದರೆ ಆಯೋಗ ವೆಚ್ಚ ನಿಯಂತ್ರಣದ ನೆಪದಲ್ಲಿ ಮಾಡಿದ ಕಟ್ಟಳೆಗಳ ಪರಿಣಾಮವಾಗಿ ಚುನಾವಣಾ ಪದ್ಧತಿಯ ಜೀವ ಜೀವಾಳವಾದ, ಮತದಾರರಲ್ಲಿ ಅರಿವು ಮೂಡಿಸುವ, ವಿವಿಧ ಪಕ್ಷಗಳ ನೀತಿ, ಸಿದ್ಧಾಂತಗಳ ನಡುವಣ ಸಂಘರ್ಷಕ್ಕೆ ತೀವ್ರ ಅಡ್ಡಿಗಳನ್ನು ಒಡ್ಡಲಾಯಿತು. ಕೇಂದ್ರ ಚುನಾವಣಾ ಕಮೀಷನರುಗಳಿಗೆ ಎರಡು ಬಾರಿ ಮಾಡಿದ ಮನವಿಯೂ ವ್ಯರ್ಥವಾಯಿತು. ಹಲವಾರು ಕಡೆ ವಾಹನಗಳ ಮೇಲೆ ಧ್ವನಿವರ್ಧಕಗಳನ್ನು ಏರಿಸಲೂ ಅವಕಾಶ ನೀಡಲಿಲ್ಲ. ಸಭೆಗಳನ್ನು ನಡೆಸಲೂ ತಕರಾರುಗಳನ್ನೊಡ್ಡಲಾಯಿತು. ಅಧಿಕಾರಿಗಳ ಮನಸೋ ಇಚ್ಚೆಯ ದರ್ಬಾರಿಗೆ ಅವಕಾಶವಾಯಿತು.

ಈ ಮೇಲೆ ವಿವರಿಸಿದ ಎಲ್ಲಾ ಕಾರಣಗಳಿಗಾಗಿ ತಕ್ಷಣವೇ ಚುನಾವಣಾ ಸುಧಾರಣೆಗಳಾಗಿ ಪ್ರಜಾಪ್ರಭುತ್ವವನ್ನು ಸಂರಕ್ಷಿಸಲು, ಮತ ಪ್ರಮಾಣಕ್ಕೆ ಅನುಗುಣವಾಗಿ ಸ್ಥಾನ ಎಂಬ–ಪಕ್ಷವೇ ನೇರವಾಗಿ ಚುನಾವಣೆಗೆ ಸ್ಪರ್ಧಿಸುವ 'ಪಕ್ಷ ಪ್ರಧಾನ ಚುನಾವಣಾ ಪದ್ಧತಿ' ಜಾರಿಗೆ ಬರಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯ ಜಾರಿ

ಬಹುಮತ ಪಡೆದು ಸರ್ಕಾರ ರಚಿಸುತ್ತಿರುವ ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯನ್ನು ಜಾರಿ ಮಾಡಲು ತಕ್ಷಣದಿಂದಲೇ ಗಮನ ಹರಿಸಬೇಕೆಂದು ಸಿಪಿಐ(ಎಂ) ಒತ್ತಾಯ ಮಾಡುತ್ತದೆ. ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಬಡ ಜನರಿಗೆ 30 ಕೆಜಿ ಅಕ್ಕಿ ಹಾಗೂ ಬೇಳೆ ಕಾಳುಗಳು, ಕನಿಷ್ಟ ಕೂಲಿಯ ಏರಿಕೆ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಭ್ರಷ್ಟಾಚಾರ ರಹಿತ ಪರಿಣಾಮಕಾರಿ ಜಾರಿ, ರೈತರಿಗೆ ಬಡ್ಡಿರಹಿತ ಸಾಲ, ಬೆಳೆಗಳಿಗೆ ಲಾಭದಾಯಕ ಬೆಲೆ ಇವುಗಳನ್ನು ತಕ್ಷಣವೇ ಜಾರಿಗೊಳಿಸಬೇಕೆಂದು ಒತ್ತಾಯಿಸುತ್ತೇವೆ, ಜೊತೆಗೆ ಶಿಕ್ಷಣ ಪಠ್ಯಗಳನ್ನು ಜಾತ್ಯಾತೀತ ,ಸೌಹಾರ್ದತೆಯ ಬೆಳವಣಿಗೆಗೆ ತಕ್ಕನಾಗಿ ರೂಪಿಸುವುದು, ಶಿಕ್ಷಣದ ಹಕ್ಕಿನ ಜಾರಿಗೆ ಆದಾಯ ಮಿತಿ ಕಡಿಮೆ ಮಾಡುವುದು ಇತ್ಯಾದಿ ಕೆಲವು ತಕ್ಷಣದಿಂದಲೇ ಕೈಗೊಳ್ಳಬೇಕಾದ ಕ್ರಮಗಳಿವೆ.

ಭ್ರಷ್ಟಾಚಾರ ಮುಕ್ತ ಆಡಳಿತ ನೀಡಲು ಹಿಂದಿನ ಲೋಕಾಯುಕ್ತರ ವರದಿಗಳ ಮೇಲೆ ತಕ್ಷಣವೇ ತನಿಖೆ ಹಾಗೂ ಮೊಕದ್ದಮೆಗಳನ್ನು ಹೂಡುವುದು ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸುವುದು, ಪ್ರಾಮಾಣಿಕ ಹಾಗೂ ಸಮರ್ಥರನ್ನು ತಕ್ಷಣವೇ ನೇಮಿಸಲು ಕ್ರಮ ಕೈಗೊಳ್ಳುವುದು, ಖಾಸಗಿ ವಿವಿಗಳನ್ನು ರದ್ದು ಮಾಡುವುದು ಮೊದಲಾದ ಕ್ರಮಗಳನ್ನೂ ಮಾಡುವ ಮೂಲಕ ತಮ್ಮ ಪ್ರಣಾಳಿಕೆಯ ಜಾರಿಯ ಬಗ್ಗೆ ಜನರಲ್ಲಿ ಭರವಸೆ ಮೂಡಿಸ ಬೇಕಾಗಿದೆ.

(ಮಾಧ್ಯಮ ಗೋಷ್ಠಿಯಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ. ಕೆ. ನಾಯರ್, ಜಿ.ಎನ್. ನಾಗರಾಜ್ ಮತ್ತು ಎಸ್. ಪ್ರಸನ್ನ ಕುಮಾರ್ ಉಪಸ್ಥಿತರಿದ್ದು ವಿವರಿಸಿದರು.)

ನಿರೀಕ್ಷೆಗಳೆದುರಲ್ಲಿ.....

ಪುಟ 3 ರಿಂದ

ಕೊಟ್ಟು ಆಟದ ಗೊಂಬೆಗಳನ್ನಾಗಿಸುವ ವಿಧಾನವೇ ಮರೆದಿದೆ. ಸಂಪುಟ ಎಂತಹದ್ದೇ ರಚನೆಯಾದರೂ ಭಿನ್ನಮತ, ಬಡಿದಾಟ ತಪ್ಪಿದ್ದಲ್ಲ. ಈಗಾಗಲೇ ಹಲವು ಹಗರಣ, ಅಕ್ರಮ ಕೇಸ್‌ಗಳಲ್ಲಿರುವ 'ಕಳಂಕಿತ'ರು ಎಲ್ಲಿದ್ದರೂ ಸುಮ್ಮನೆ ಕೂಡುವುದಿಲ್ಲ.

ನಿರೀಕ್ಷೆಗಳು

ನಿಜ, ಇದೀಗ ನೂತನ ಸರಕಾರ ಅಧಿಕಾರಕ್ಕೆ ಬಂದಿದೆ. ಕರ್ನಾಟಕವನ್ನು ಮೋದಿಯ ಗುಜರಾತನ್ನಾಗಿಸಲು ಹೊರಟಿದ್ದ ಫ್ಯಾಸಿಸ್ಟ್ ಮನೋಭಾವದ ಕೋಮುವಾದಿಗಳ ದುರಾಡಳಿತಕ್ಕೆ ಪ್ರಬಲ ಏಟು ನೀಡಿ ಬದಲಾವಣೆ ಬಯಸಿರುವ ಜನತೆಯ ಅಪಾರ ನಿರೀಕ್ಷೆಗಳಿಗೂ ಕಾರಣವಾಗಿದೆ. ಆದರೆ ಕರ್ನಾಟಕದ ಸರಕಾರದ ಮುಂದಿನ ಜಾತಕ ಹೈಕಮಾಂಡ್‌ನ ಕೈಯ್ಯಲ್ಲಿದೆ!

ಬಿಜೆಪಿಯ ಆತ್ಮಾವಲೋಕನ!

ಸೋತು ಹೋಗಿರುವ ಬಿಜೆಪಿ ಆತ್ಮಾವಲೋಕನವೆಂಬ ಶಾಸ್ತ್ರವನ್ನು ಅಖಿಲ ಭಾರತ ನಾಯಕರ ಸಮ್ಮುಖದಲ್ಲಿ ನಡೆಸಿದೆ. ಮುಖಭಂಗಕ್ಕೀಡಾಗಿರುವ ನಾಯಕರು ಸಾರ್ವಜನಿಕರೆದುರಿನಲ್ಲಿ ಮುಖ ಹೊರ ಚಾಚಲು ಇದು ಒಂದು ಆರಂಭಿಕ ವಿಧಾನವಷ್ಟೇ.

ತಾವು ಸೋಲಲು ತಮ್ಮ ದುರಾಡಳಿತ, ಅಕ್ರಮ ಹಗರಣಗಳು, ಜನರನ್ನು ತಿಕ್ಕಿ ಮುಕ್ಕಿದ ನೀತಿಗಳು ಕಾರಣವೇನಲ್ಲವಂತೆ. ಬದಲಾಗಿ ನಾಯಕರ ನಡುವಿನ ಸಮನ್ವಯದ ಕೊರತೆ ಹಾಗೂ ಪಕ್ಷದಲ್ಲಿನ ಒಡಕು ಕಾರಣವಂತೆ. ಒಡಕಿಲ್ಲದಿದ್ದರೆ ಮತ್ತೆ ಅಧಿಕಾರಕ್ಕೆ ಬರುತ್ತಿದ್ದೆವು ಎಂಬ ಭ್ರಮೆ ಹುಟ್ಟಿಸುವ ಕುತಂತ್ರ! ಮುಂದೆ ಅಧಿಕಾರಕ್ಕೆ ಬರುವುದಿದ್ದರೂ ಈ ನೀತಿಗಳನ್ನು ಖಂಡಿತ ಕೈ ಬಿಡುವುದಿಲ್ಲವೆಂಬ ಭಂಡತನ.

ಕಳೆದ ಚುನಾವಣೆಯಲ್ಲಿ 110 ಸ್ಥಾನಗಳನ್ನು ನೀಡಿದ್ದ ಜನತೆಯೇ ಈ ಬಾರಿ 110 ಕ್ಷೇತ್ರಗಳಲ್ಲಿ 'ಇಡುಗಂಟು' ಕಳೆದು ಅದು ಜಪ್ತಾಗುವಂತೆ ಮಾಡಿದ್ದಾರೆ. ಬುದ್ಧಿ ಕಲಿಯಲು ಇಷ್ಟೂ ಸಾಲದೇ? ಆದರೆ ಈ ನಾಯಕರು ಸೋಲಿನಿಂದ ವಿಚಲಿತರಾಗದೇ ಮೈಕೊಡವಿ ಮುಂದಿನ ಸಂಸತ್ ಚುನಾವಣೆಗೆ ಸನ್ನದ್ಧರಾಗಬೇಕೆಂದು ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ! ಭಲೇ ಭಂಡತನವೆಂದರೆ ಹೀಗೇ ಇರಬೇಕು!

ಈ ಕಣ್ಣೀರೇಕೆ?

ಮಾಜಿ ಮುಖ್ಯಮಂತ್ರಿ, ಜಾತ್ಯಾತೀತ ಜನತಾದಳದ ಅಧ್ಯಕ್ಷ, ಹೆಚ್.ಡಿ.ಕುಮಾರಸ್ವಾಮಿಯವರು ಮಾಧ್ಯಮದ ಮುಂದೆ ಕಣ್ಣೀರಿಟ್ಟಿದ್ದಾರೆ. ಇಂತಹ ಹಲವು ಮಾಜಿಗಳು ಆಗೀಗ ಸಾರ್ವಜನಿಕವಾಗಿ ಸುರಿಸುವ ಕಣ್ಣೀರಿಗೆ ಅನುಕಂಪದ ಅಲೆ ಸೃಷ್ಟಿಸುವ ಸಾಮರ್ಥ್ಯದ ನೆಚ್ಚಿಗೆ ಇರುವಂತೆ ಕಾಣುತ್ತದೆ.

ಅಧಿಕಾರ ಇನ್ನೇನು ಹಿಡಿದೇಬಿಡುತ್ತೇವೆಂದು ಭ್ರಮೆ ಸೃಷ್ಟಿಸಿ, ಅದಕ್ಕಾಗಿ ಮಾಡಿದ ಏನೆಲ್ಲಾ ಕಸರತ್ತುಗಳು ಫಲಿಸದೇ ಹೋದಾಗ ತಮ್ಮ ಅಹಂಕಾರದ ಆಶಾಭಂಗಕ್ಕೆ ಮಾಧ್ಯಮಗಳನ್ನು ದೂರಿ ಏನು ಪ್ರಯೋಜನ? ರಾಜ್ಯದಾದ್ಯಂತ ವಿಸ್ತರಿಸುವ ಸಾಧ್ಯತೆಗಳಿದ್ದರೂ ಕೇವಲ ದಕ್ಷಿಣ ಕರ್ನಾಟಕಕ್ಕೆ ಹೆಚ್ಚು ಸೀಮಿತವಾಗಿ ಈ ನಾಯಕರು 113 ಸ್ಥಾನಗಳಿಂದ ಸರಳ ಬಹುಮತ ಗಿಟ್ಟಿಸಿ 'ಕಿಂಗ್' ಗಳಾಗುತ್ತಾರೆಂದು ಭ್ರಮಿಸಲು ಜನರೇನೂ ಹುಚ್ಚರಲ್ಲ. ಅಂದರೆ ಅವರೇ ಹೇಳಿಕೊಂಡಂತೆ 60 ಅಥವಾ 70 ಸ್ಥಾನ ಬಂದಿದ್ದರೂ ಸರಕಾರವನ್ನು ಹೇಗೆ ರಚಿಸುತ್ತಿದ್ದರು? ಬಿಎಸ್ಸಾರ್‌ಗೆ ಭವಿಷ್ಯವಿಲ್ಲ, ಕೆಜೆಪಿಯೊಂದಿಗೆ ಕುಸ್ತಿ ಹಿಡಿದಾಗಿತ್ತು. ಅಂದರೆ ಬಿ.ಜೆ.ಪಿ.ಯೊಂದಿಗೆ ಸೇರಿ ಸರಕಾರ ರಚಿಸುವ ಇಂಗಿತವನ್ನು ರಾಜ್ಯದ ಜನರ ಮುಂದೆ ಹರಿಯ ಬಿಟ್ಟವರು ಇವರೋ ಅಥವಾ ಮಾಧ್ಯಮದವರೋ? ಇಂತಹ ಲೆಕ್ಕಾಚಾರಗಳು ಚುನಾವಣಾ ಪ್ರಕ್ರಿಯೆ ಸಂದರ್ಭದಲ್ಲಿ ಯಥೇಚ್ಛವಾಗಿ ಬಿಂಬಿತವಾದರೂ ಆಗ ಅದನ್ನು ನಿರಾಕರಿಸದೇ ಕನಸಲ್ಲಿ ಉದುರಿ ಬೀಳುವ ಸಿಹಿ ದ್ರಾಕ್ಷಿಗೆ ಬಾಯ್ತೆರೆದು ಯಾಕೆ ಈ ನಾಯಕರು ಇರಬೇಕಿತ್ತು?

ವಿಧಾನ ಸಭಾ ಚುನಾವಣೆ – 2013


ಕೆ.ಆರ್. ಪುರಂ. ಕ್ಷೇತ್ರ : ಸಿಪಿಐ(ಎಂ) ಮತ ಗಳಿಕೆ ವಿವರ –ತಿದ್ದುಪಡಿ




ಕೆ.ಆರ್ ಪುರ		
ಬಸವರಾಜು	ಕಾಂಗ್ರೆಸ್	106299
ನಂದಿಶ್ ರೆಡ್ಡಿ	ಬಿಜೆಪಿ	82298
ರವಿ ಪ್ರಕಾಶ್	ಜೆಡಿ(ಎಸ್)	3955
ಗೌರಮ್ಮ	ಸಿಪಿಐ(ಎಂ)	1553
ಸತ್ಯ ನಾರಾಯಣ್	ಕೆಜೆಪಿ	583

ಕಳೆದ ವಾರದ ಸಂಚಿಕೆಯಲ್ಲಿ ಕೆ.ಆರ್.ಪುರಂ. ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಗೌರಮ್ಮ ಅವರ ಮತಗಳಿಕೆ 1553 ಕ್ಕೆ ಬದಲಾಗಿ 667 ಎಂದು ತಪ್ಪಾಗಿ ಮುದ್ರಣಗೊಂಡಿತ್ತು. ಬದಲಾವಣೆಯನ್ನು ಗಮನಿಸಲು ಕೋರಿದೆ – ಸಂ.


ಸಿಪಿಐ ಸ್ಪರ್ಧಿಸಿದ ಕ್ಷೇತ್ರಗಳ ಮತ ಗಳಿಕೆ ವಿವರ




ಸಾತಿ ಸುಂದರೇಶ್
ಮೂಡಿಗೆರೆ ಕ್ಷೇತ್ರ
ಪಡೆದ ಮತ – 12703




ಎನ್. ಅಂಬರೀಶ್
ಮುಳಬಾಗಿಲು ಕ್ಷೇತ್ರ
ಪಡೆದ ಮತ – 2480



ಕೆ. ನಾಗಭೂಷಣರಾವ್
ಬಳ್ಳಾರಿ ನಗರ ಕ್ಷೇತ್ರ
ಪಡೆದ ಮತ – 2380



ಮಹೇಶ್ ರಾಠೋಡ್
ಚೇವರ್ಗಿ ಕ್ಷೇತ್ರ
ಪಡೆದ ಮತ – 1631




ಬಾಷುಮಿಯಾ
ಸಿಂಧನೂರು ಕ್ಷೇತ್ರ
ಪಡೆದ ಮತ – 998



ಬಾಬುರಾವ್ ಹೊನ್ನಾ
ಬೀದರ ದಕ್ಷಿಣ ಕ್ಷೇತ್ರ
ಪಡೆದ ಮತ – 999



ಪಟೇಲ್. ಜಿ. ಪಾಪಾನಾಯಕ
ಮೊಳಕಾಲ್ಮೂರು ಕ್ಷೇತ್ರ
ಪಡೆದ ಮತ – 1438




ಹನುಮಂತಪ್ಪ
ಸಂಡೂರು ಕ್ಷೇತ್ರ
ಪಡೆದ ಮತ – 2680

ವಿಜಾಪುರದಲ್ಲಿ ಮೇದಿನ

ವಿಶ್ವ ಕಾರ್ಮಿಕ ದಿನಾಚರಣೆ ಪ್ರಯುಕ್ತ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಆಶ್ರಯದಲ್ಲಿ ಮುಂಜಾನೆ 10–30 ಗಂಟೆಗೆ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಮೆರವಣಿಗೆ ಹೊರಟು ಗಾಂಧಿ ವೃತ್ತದಿಂದ ಹಾಯ್ದು ಬಸವೇಶ್ವರ ವೃತ್ತದಲ್ಲಿ ಬಹಿರಂಗ ಸಭೆ ನಡೆಸಲಾಯಿತು.

ಬಹಿರಂಗ ಸಭೆಯಲ್ಲಿ ಕಾರ್ಮಿಕರನ್ನು ಉದ್ದೇಶಿಸಿ ಬ್ಯಾಂಕ ನೌಕರರ ಸಂಘದ ಮುಖಂಡರಾದ ಜಿ.ಜಿ. ಗಾಂಧಿಯವರು ಮಾತನಾಡುತ್ತ ಕಾರ್ಮಿಕರ ದಿನಾಚರಣೆ 127 ವರ್ಷದ ಇತಿಹಾಸವನ್ನು ಹೊಂದಿದೆ. ಸಾವಿರಾರು ಕಾರ್ಮಿಕರು ಪ್ರಾಣ ತ್ಯಾಗ ಮಾಡಿದ ಧ್ಯೊತಕವಾಗಿ ಈ ದಿನವನ್ನು ಆಚರಣೆ ಮಾಡಲಾಗುತ್ತದೆ. ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರು ಸದಾ ಹಕ್ಕಿಗಾಗಿ ಹೋರಾಟ ಮಾಡಬೇಕಾಗುತ್ತದೆ. ಕಾರ್ಮಿಕರ ವಿರುದ್ದದ ನೀತಿಗಳನ್ನು ಯಾವುದೇ ಸರಕಾರಗಳು ಜಾರಿಗೆ ತಂದರೆ ಅವುಗಳ ವಿರುದ್ದ ತೀವ್ರ ಸ್ವರೂಪದ ಹೋರಾಟವನ್ನು ಮಾಡಿ ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡಿಕೊಳ್ಳಬೇಕು. ಅಸಂಘಟಿತ ವಲಯದ ಪ್ರತಿಯೊಬ್ಬ ಕಾರ್ಮಿಕನಿಗೂ ಕನಿಷ್ಠ ಕೂಲಿ 10,000 ರೂ. ಜಾರಿಯಾಗಬೇಕು. ಪ್ರತಿ ಕಾರ್ಮಿಕರಿಗೆ ನಿವೃತ್ತಿ ವೇತನ ಕೊಡಬೇಕು. ಕಾರ್ಮಿಕರ ಹಕ್ಕುಗಳ ರಕ್ಷಣೆಯಾಗಬೇಕು ಎಂದರು.

ಬಿ.ಎಸ್.ಎನ್.ಎಲ್. ನೌಕರರ ಮುಖಂಡರಾದ ಜಿ.ಬಿ. ಸಾಲಕ್ಕಿ ಅವರು ಮಾತನಾಡಿ ಇಂದಿನ ದಿನ ಜಗತ್ತಿನಲ್ಲಿ ಕಾರ್ಮಿಕರ ಸ್ಥಿತಿ ಚನ್ನಾಗಿಲ್ಲ. ಬಂಡವಾಳಶಾಹಿ ವ್ಯವಸ್ಥೆಯು ಕಾರ್ಮಿಕರನ್ನು ಶೋಷಿಸುತ್ತಿದೆ. ಇದರ ವಿರುದ್ದ ಒಗ್ಗಟ್ಟಿನಿಂದ ಹೋರಾಟ ಮಾಡಬೇಕು. ಕಾರ್ಮಿಕರ ಕೂಗು ಪಾರ್ಲಿಮೆಂಟಿಗೂ ಮುಟ್ಟಬೇಕೆಂದರು.



ವಿಜಾಪುರದಲ್ಲಿ ಮೇದಿನ

ಮುನಿಸಿಫಲ್ ಕಾರ್ಮಿಕರ ಸಂಘದ ಅಧ್ಯಕ್ಷರಾದ ವ್ಹಿ.ಎಂ. ಸೊನ್ನದ ಅವರು ಮಾತನಾಡಿ ಅಮೇರಿಕಾದ ಚಿಕ್ಯಾಗೊ ನಗರದಲ್ಲಿ ಹೆ ಮಾರ್ಕೆಟನಲ್ಲಿ ಕಾರ್ಮಿಕರ ಕಗ್ಗೊಲೆಯಾಯಿತು. ಅದರ ಪ್ರಯುಕ್ತ ಬಂದ ಈ ದಿನ. ಅದಕ್ಕೆ ವಿಶೇಷ ಗೌರವ ಇರುತ್ತದೆ. ಇಂದು ಗಂಭೀರವಾಗಿ ಕಾರ್ಮಿಕರ ಸ್ಥಿತಿಗತಿಗಳನ್ನು ಚಿಂತನೆ ಮಾಡುವ ದಿನವಾಗಿದೆ ಎಂದರು.

ಭೀಮಶಿ ಕಲಾದಗಿ ಅವರು ಮಾತನಾಡಿ ಮುಂದಿನ ದಿನಗಳಲ್ಲಿ ಕಾರ್ಮಿಕರ ಶೋಷಣೆ ಹೆಚ್ಚಾಗುತ್ತದೆ. ಪ್ರತಿ ಹಂತದಲ್ಲಿ ಕಾರ್ಮಿಕರು ಶೋಷಣೆಗೊಳಗಾಗಿದ್ದಾರೆ. ಅದರ ವಿರುದ್ದ ಒಗ್ಗಟ್ಟಿನಿಂದ ಹೋರಾಟ ಮಾಡಬೇಕೆಂದರು.

ಲಕ್ಷ್ಮಣ ಹಂದ್ರಾಳ ಸ್ವಾಗತ ಮಾಡಿದರು. ಸೋಮಪ್ಪ ಆಯಟ್ಟಿ ವಂದನಾರ್ಪಣೆ ಮಾಡಿದರು. ಮೆರವಣಿಗೆಯಲ್ಲಿ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಅಧ್ಯಕ್ಷರಾದ ಚಂದ್ರಶೇಖರ ಲೆಂಡಿ ಪ್ರಧಾನ ಕಾರ್ಯದರ್ಶಿಗಳಾದ ಸುರೇಶ ಜಿಬಿ. ಲಾರಿ ಹಮಾಲರ ಸಂಘದ ಗೌರವ ಅಧ್ಯಕ್ಷರಾದ ಮನ್ನುಸಾಬ ಕಲಾದಗಿ, ಅಧ್ಯಕ್ಷರಾದ ಲಕ್ಷ್ಮಣ ದೊಡಮನಿ, ಕಾರ್ಯದರ್ಶಿ ಸಾಬು ಗೂಗದಡ್ಡಿ, ಬ್ಯಾಂಕ ನೌಕರ ಸಂಘದ ಮುಖಂಡರಾದ ವ್ಹಿ.ಪಿ. ಹೊಸೂರ, ಅಕ್ಷರ ದಾಸೋಹ ಸಂಘದ ಅಧ್ಯಕ್ಷರಾದ ಮಾಲಾ ಶಿವಣಗಿ, ಕಾರ್ಯದರ್ಶಿಗಳಾದ ಸುಮಂಗಲಾ ಆನಂದಶೆಟ್ಟಿ, ನೀರು ಸರಬರಾಜ ನೌಕರರ ಮುಖಂಡರಾದ ವಿಜಯಕುಮಾರ ಸಂಕದ, ಅಂಗನವಾಡಿ ನೌಕರರ ಸಂಘದ ಶೈಲಾ ಕಟ್ಟಿ, ಜಯಶ್ರೀ ಪೂಜಾರಿ, ಎ.ಐ.ಟಿ.ಯು.ಸಿ. ಮುಖಂಡರಾದ ಡಿ.ಎಚ್. ಮುಲ್ಲಾ, ಪ್ರಕಾಶ ಹಿಟ್ನಳ್ಳಿ, ಔಷಧಿ ಪ್ರತಿನಿಧಿಗಳ ಸಂಘದ ಮುಖಂಡರಾದ ಜಗದೀಶ ಅಫಜಲಪೂರ, ಕಲ್ಲಪ್ಪ ಮೇತ್ರಿ, ಅಜಿತ ದೇಸಾಯಿ, ಶೇಕರ ಕನ್ನೂರ ಮುಂತಾದವರು ಭಾಗವಹಿಸಿದ್ದರು.


– ಲಕ್ಷ್ಮಣ ಹಂದ್ರಾಳ

ಡಾ. ಅಸ್ಗರ್ ಅಲಿ ಎಂಜಿನಿಯರ್ ನಿಧನಕ್ಕೆ ಸಿಪಿಐ(ಎಂ) ಸಂತಾಪ.

ಕೋಮು ಸೌಹಾರ್ದಕ್ಕಾಗಿ ಸದಾ ಮಿಡಿಯುತ್ತಿದ್ದ ಹಿರಿಯ ಚೇತನ ಡಾ. ಅಸ್ಗರ್ ಅಲಿ ಎಂಜಿನಿಯರ್ ದೀರ್ಘಕಾಲದ ಅಸ್ವಸ್ಥತೆಯಿಂದ ನಿಧನರಾಗಿದ್ದಾರೆ. 73 ವರ್ಷದ ಅಸ್ಗರ್ ಸಂತಾಕ್ರೂಸ್‌ನ ತಮ್ಮ ಮನೆಯಲ್ಲಿ ಕೊನೆಯುಸಿರೆಳೆದರು.

ಅಸ್ಗರ್ ಅಲಿ ಎಂಜಿನಿಯರ್ ತಮ್ಮ ಜೀವನದುದ್ದಕ್ಕೂ ಕೋಮು ಸೌಹಾರ್ದಕ್ಕಾಗಿ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಅವಿರತ ಹೋರಾಟ ನಡೆಸಿದವರು. ಅಂಧಶ್ರದ್ಧೆಯನ್ನು ಸದಾ ವಿರೋಧಿಸುತ್ತಾ ಬಂದ ಅವರು ಮೌಢ್ಯದ ವಿರುದ್ಧ ಜನಜಾಗೃತಿ ನಡೆಸಿದರು. ಬಾಬ್ರಿ ಮಸೀದಿ ಧ್ವಂಸದ ಸಂದರ್ಭದಲ್ಲಿ ಮತ್ತು 1992ರ ಮುಂಬೈ ದಂಗೆ ಸಂದರ್ಭದಲ್ಲಿ ಒಡೆದ ಮನಸುಗಳನ್ನು ಬೆಸೆಯುವ ಮಹಾ ಕಾರ್ಯದಲ್ಲಿ ತೊಡಗಿಸಿಕೊಂಡ ಪ್ರಮುಖರಲ್ಲಿ ಅವರು ಒಬ್ಬರಾಗಿದ್ದರು.

1939ರಲ್ಲಿ ರಾಜಸ್ತಾನದ ಸಾಲುಂಬರ್‌ನಲ್ಲಿ ಜನಿಸಿದ ಅಸ್ಗರ್, ಸಾಹಿತಿಯಾಗಿ, ಲೇಖಕರಾಗಿ ಹಾಗೂ ಸಾಮಾಜಿಕ ಕಾರ್ಯಕರ್ತರಾಗಿ ದೇಶಾದ್ಯಂತ ಹೆಸರುವಾಸಿ. ಮುಂಬೈ ಮಹಾನಗರ ಪಾಲಿಕೆಯಲ್ಲಿ 20 ವರ್ಷ ಕಾಲ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿದ ಬಳಿಕ ಸ್ವಯಂ ನಿವೃತ್ತರಾದ ಅಸ್ಗರ್, ಜಾತ್ಯತೀತ ಮೌಲ್ಯಗಳಿಗೆ, ಕೋಮು ಸೌಹಾರ್ದಕ್ಕೆ ತಮ್ಮ ಜೀವನವನ್ನು ಅರ್ಪಿಸಿದರು. 50ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದ ಅವರ ಕೆಲವು ಲೇಖನಗಳು ರಾಷ್ಟ್ರೀಯ, ಅಂತಾರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.



ಅವರ ಆತ್ಮಚರಿತ್ರೆಯಾದ "ಎ ಲಿವಿಂಗ್ ಫೇತ್: ಮೈ ಕ್ವೆಸ್ಟ್ ಫಾರ್ ಪೀಸ್, ಹಾರ್ಮನಿ ಆಂಡ್ ಸೋಷಿಯಲ್ ಚೇಂಜ್" ಕೃತಿಗಳ 2011ರಲ್ಲಿ ಉಪ ರಾಷ್ಟ್ರಪತಿ ಹಮೀದ್ ಅನ್ಸಾರಿ ನವದೆಹಲಿಯಲ್ಲಿ ಬಿಡುಗಡೆಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

2009ರಲ್ಲಿ ಜಗತ್ತಿನ 500 ಅತಿ ಪ್ರಭಾವಿ ಮುಸ್ಲಿಂ ನಾಯಕರಲ್ಲಿ ಒಬ್ಬರಾಗಿ ಪರಿಗಣಿತರಾಗಿದ್ದ ಅಸ್ಗರ್ 1997ರಲ್ಲಿ ಭಾರತ ಸರ್ಕಾರದಿಂದ ರಾಷ್ಟ್ರೀಯ ಕೋಮು ಸೌಹಾರ್ದ ಪ್ರಶಸ್ತಿ ಪುರಸ್ಕೃತರಾಗಿದ್ದರು. 2004ರಲ್ಲಿ ನೊಬೆಲ್‌ಗೆ ಪರ್ಯಾಯ ಎನಿಸಿದ ಸ್ವೀಡನ್ ಸರ್ಕಾರದ ರೈಟ್ ಲೈವ್‌ಲೀ ಹುಡ್ ಪುರಸ್ಕಾರಕ್ಕೂ ಭಾಜನರಾದರು. ಕೊಲ್ಕತ್ತಾ ವಿಶ್ವವಿದ್ಯಾನಿಲಯದ ಡಿ.ಲಿಟ್ ಪ್ರಶಸ್ತಿಯ ಗೌರವಕ್ಕೂ ಇವರು ಪಾತ್ರರಾಗಿದ್ದರು.

ಸೀತಾರಾಮ್ ಯೆಚೂರಿ ಯವರ ಸಂತಾಪ

ಅಗಲಿದ ಈ ಹಿರಿಯ ಚೇತನಕ್ಕೆ ಸಿಪಿಎಂ ಪಾಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಸಂತಾಪ ಸೂಚಿಸಿದ್ದಾರೆ. ದೇಶವನ್ನು ಜಾತ್ಯತೀತ ಪ್ರಜಾಸತ್ತಾತ್ಮಕ ತಳಹದಿಯಲ್ಲಿ ಕಟ್ಟಿ ಬೆಳೆಸಲು ದುಡಿಯುತ್ತಿದ್ದ ಅಸ್ಗರ್, ಧಾರ್ಮಿಕ ಮತೀಯವಾದದ ವಿರುದ್ಧ ಗಟ್ಟಿ ಧ್ವನಿ ಎತ್ತಿದವರು. ಗಲಭೆ ಪೀಡಿತರ ನೆರವಿಗೆ ಧಾವಿಸುತ್ತಿದ್ದ ಅವರು ಮಹಿಳೆಯರ ಅದರಲ್ಲೂ ಮುಸ್ಲಿಂ ಮಹಿಳೆಯರ ಹಕ್ಕುಗಳು ಮತ್ತು ನ್ಯಾಯಕ್ಕಾಗಿ ಹೋರಾಟ ನಡೆಸಿದ್ದರು ಎಂದು ಯೆಚೂರಿ ನೆನಪಿಸಿಕೊಂಡಿದ್ದಾರೆ.

ಅವರ ಅಗಲಿಕೆ ಕೋಮುವಾದ ಮತ್ತು ಧಾರ್ಮಿಕ ಮತಾಂಧತೆಯ ವಿರುದ್ಧದ ಹೋರಾಟಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಹೇಳಿರುವ ಯೆಚೂರಿ, ಅಲಿ ಕುಟುಂಬ ಸದಸ್ಯರಿಗೆ ತಮ್ಮ ಸಂತಾಪವನ್ನು ಸೂಚಿಸಿದ್ದಾರೆ.

ಡಿವೈಎಫ್‌ಐನ ಕೇಂದ್ರ ಸಮಿತಿ ಕೂಡ ಅಸ್ಗರ್ ಅಲಿ ಎಂಜಿನಿಯರ್ ನಿಧನಕ್ಕೆ ಅತೀವ ಸಂತಾಪ ಸೂಚಿಸಿದೆ. ಸಾಮಾಜಿಕ ನ್ಯಾಯಕ್ಕಾಗಿ ಅವಿರತವಾಗಿ ಶ್ರಮಿಸಿದ ಎಂಜಿನಿಯರ್ ನಿಧನ ಜಾತ್ಯತೀತ ಹೋರಾಟ ಮತ್ತು ಜನಪರ ಚಳವಳಿಗೆ ತುಂಬಲಾರದ ನಷ್ಟವಾಗಿದೆ ಎಂದು ಹೇಳಿರುವ ಡಿವೈಎಫ್‌ಐ, ಅಸ್ಗರ್ ಪುತ್ರ, ಪುತ್ರಿ ಮತ್ತು ಸಂಬಂಧಿಗಳಿಗೆ ಸಂತಾಪ ಸಂದೇಶವನ್ನು ಕಳುಹಿಸಿದೆ.


ಡಾ. ಅಸ್ಗರ್ ಅಲಿ ಎಂಜಿನಿಯರ್ ನಿಧನಕ್ಕೆ 'ಜನಶಕ್ತಿ' ಕನ್ನಡ ವಾರಪತ್ರಿಕೆ ಸಂತಾಪ ವ್ಯಕ್ತಪಡಿಸುತ್ತದೆ.

ಉಡುಪಿ ದೇವಳದಲ್ಲಿ ಬ್ರಾಹ್ಮಣರ ಪಂಕ್ತಿ ಸೂಚನಾ ಫಲಕವಿರಲಿ

ಓದುಗರ ಗಮನಕ್ಕೆ :-

'ಕರಾವಳಿ ಅಲೆ' ದಿನಪತ್ರಿಕೆಯಲ್ಲಿ ಪ್ರಕಟವಾದ ಪತ್ರವೊಂದನ್ನು ಯಥಾವತಾಗಿ ಪ್ರಕಟಿಸುತ್ತಿದ್ದೇವೆ. ಉಡುಪಿ ಶ್ರೀ ಕೃಷ್ಣ ಮಠದಲ್ಲಿ ನಡೆಯುತ್ತಿರುವ 'ಪಂಕ್ತಿಭೇದ'ದಿಂದ ನೊಂದ ಮಹಿಳೆಯೊಬ್ಬಳ ವೃತ್ತಾಂತವಿದು. ಪಂಕ್ತಿಭೇದ ಮತ್ತು ಮಡೆಸ್ನಾದ ಬಗ್ಗೆ ಹೊಸ ಕಾಂಗ್ರೆಸ್ ಸರ್ಕಾರ ಯಾವ ಧೋರಣೆ ತಾಳಬಹುದು? ಸಂ.

ಹನುಮಜ್ಜಯಂತಿಯಂದು ಮಧ್ಯಾಹ್ನ ಶ್ರೀ ದೇವರ ದರ್ಶನ ಪಡೆಯಲು ಎಂದಿನಂತೆ ಉಡುಪಿ ಶ್ರೀ ಕೃಷ್ಣಮಠಕ್ಕೆ ಭೇಟಿ ನೀಡಿದ್ದೆ. ಶ್ರೀ ಕೃಷ್ಣ ಮತ್ತು ಶ್ರೀ ಮುಖ್ಯಪ್ರಾಣ ದೇವರ ದರ್ಶನ ಪಡೆದು ಇದೇ ಪ್ರಥಮ ಬಾರಿಗೆ ಅನ್ನ ಪ್ರಸಾದ ಸ್ವೀಕರಿಸಲು ನಿರ್ಧರಿಸಿದೆ. ಶ್ರೀ ಮುಖ್ಯ ಪ್ರಾಣ ದೇವರ ಸನ್ನಿಧಿ ಬಳಿಯಲ್ಲಿ ಅನ್ನಪ್ರಸಾದ ಸ್ವೀಕರಿಸಲು ಕುಳಿತಿದ್ದ ಭಕ್ತರ ನಡುವೆ ನಾನೂ ಒಬ್ಬಳಾಗಿ ಕುಳಿತುಕೊಂಡೆ. ಎಲೆ ಹಾಕಿ ಎಲ್ಲಾ ಸಿದ್ಧತೆಗಳಾದ ಬಳಿಕ ಶ್ರೀಕೃಷ್ಣಮಠದ ಓರ್ವ ಸಿಬ್ಬಂದಿ ನನ್ನ ಬಳಿಗೆ ಬಂದು "ನಿಮ್ಮ ಜಾತಿ ಯಾವುದು?" ಎಂದು ಪ್ರಶ್ನಿಸಿದ.



ನನ್ನ ಉತ್ತರ ಕೇಳಿದ ಆತ ನನ್ನನ್ನು ಹೀಯಾಳಿಸುವ ರೀತಿಯಲ್ಲಿ ಅಲ್ಲಿಂದ ಎದ್ದೇಳುವಂತೆ ತಿಳಿಸಿದ. ಅಲ್ಲಿದ್ದ ಎಲ್ಲರೂ ನೋಡುತ್ತಿದ್ದರು. ಆಗಲೇ ನನಗೆ ಅರಿವಾದದ್ದು, ನಾನು ಬ್ರಾಹ್ಮಣರ ಪಂಕ್ತಿಯಲ್ಲಿ ಕುಳಿತಿದ್ದೆ ಎಂದು. ನನಗೆ ಮೊದಲೇ ಅರಿವಿದ್ದರೆ ಖಂಡಿತವಾಗಿಯೂ ನಾನು ಅನ್ನಪ್ರಸಾದ ಸ್ವೀಕರಿಸಲು ಅಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ.

ಅನ್ನ ಪ್ರಸಾದ ಸ್ವೀಕರಿಸಲು ಕುಳಿತುಕೊಂಡವರನ್ನು ಎಬ್ಬಿಸುವ ಕ್ರಮ ಎಷ್ಟು ಸಮಂಜಸ? ಈ ಕ್ರಮವನ್ನು ಶ್ರೀಕೃಷ್ಣ ಮುಖ್ಯಪ್ರಾಣ ದೇವರು ಮೆಚ್ಚಿಕೊಂಡಾರೇ? ಸಮಾಜದಲ್ಲಿ ಸ್ಥಾನಮಾನ ಗೌರವ ಹೊಂದಿರುವ ನನ್ನನ್ನು ಅಪರಾಧಿಯಂತೆ ಎಲ್ಲಿಯವರೆಗೆ ಮುಂದುವರಿಯಲಿದೆ ಈ ತಾರತಮ್ಯ? ಎಂಬ ಹತ್ತು ಹಲವು ಪ್ರಶ್ನೆಗಳೊಂದಿಗೆ ಉಡುಪಿ ಶ್ರೀಕೃಷ್ಣಮಠದ (ಅ)ವ್ಯವಸ್ಥೆಗೆ ಮರುಗಿ ಮನೆಯತ್ತ ಹೊರಟೆ. ಈ ಸಂದರ್ಭ ಕಾಕತಾಳೀಯವೆಂಬಂತೆ ಶ್ರೀಕೃಷ್ಣಮಠದ ಧ್ವನಿ ವರ್ಧಕದಲ್ಲಿ ಭಜನೆ ಮೊಳಗುತ್ತಿತ್ತು. "ಅತಿಥಿ ಸತ್ಕಾರವಿಲ್ಲದ ಮನೆಯಲ್ಲಿ ಭೋಜನ ಸ್ವೀಕರಿಸದಿರು..." ಇದು ಉಡುಪಿ ಶ್ರೀಕೃಷ್ಣಮಠದ (ಅ)ವ್ಯವಸ್ಥೆಯನ್ನು ಅಪಹಾಸ್ಯ ಮಾಡಿದಂತಿತ್ತು.

ಉಡುಪಿ ಶ್ರೀಕೃಷ್ಣ ಮಠದ ಆಡಳಿತ ಮಂಡಳಿಯಲ್ಲಿ ನನ್ನ ವಿನಮ್ರ ಮನವಿಯೇನೆಂದರೆ, (ಅ)ವ್ಯವಸ್ಥೆಯನ್ನು ಸರಿಪಡಿಸದಿದ್ದಲ್ಲಿ "ಬ್ರಾಹ್ಮಣರ ಪಂಕ್ತಿ" ಇರುವಲ್ಲಿ ಕನಿಷ್ಠ ಅಲ್ಲಲ್ಲಿ "ಬ್ರಾಹ್ಮಣರ ಪಂಕ್ತಿ" ಎಂಬ ಸ್ಪಷ್ಟ ಸೂಚನಾ ಫಲಕವನ್ನಾದರೂ ಅಳವಡಿಸಿ. ಇಲ್ಲದಿದ್ದಲ್ಲಿ ನನ್ನಂತಹ ಹಲವಾರು ಭಕ್ತರು (ಅ)ವ್ಯವಸ್ಥೆಯ ಅರಿವಿಲ್ಲದೆ ನಿತ್ಯ ಅವಮಾನಕೊಳ್ಳಗಾಗಬಹುದು. ಸೂಚನಾ ಫಲಕ ಕಂಡವರಾರೂ ಮಡಿವಂತಿಕೆಗೆ ಅಡ್ಡಿ ಬರಲಾರರು.

–ಪ್ರೇಮಾ, ಉಡುಪಿ

"ಸೇವಾ ರಶೀದಿ ಪಡೆಯುವಾಗ ಜಾತಿ ಕೇಳಲಿಲ್ಲ"

ಶ್ರೀಕೃಷ್ಣಮಠದಲ್ಲಿ ಶ್ರಿಯಿಯೀ ದೇವರಿ[illegible] ಸೇವೆ ಸಲ್ಲಿಸುವ ಸಲುವಾಗಿ ಕೌಂಟರ್‌ನಲ್ಲಿ ಹಣ ತೆತ್ತು ರಶೀದಿ ಪಡೆಯುವಾಗ ಯಾರು ನನ್ನ ಜಾತಿಯನ್ನು ಪ್ರಶ್ನಿಸಲಿಲ್ಲ. ಅರ್ಚಕರಿಗೆ ದಕ್ಷಿಣೆ ಹಾಕುವಾಗ ಜಾತಿ ಪ್ರಶ್ನಿಸಲಿಲ್ಲ. ಅನ್ನಪ್ರಸಾದ ಸ್ವೀಕರಿಸುವಾಗ ಮಾತ್ರ ನನ್ನ ಜಾತಿ ಅಡ್ಡಿಯಾಗಿ ನನ್ನನ್ನು ಹೀಯಾಳಿಸಿದ್ದಾರೆ.

ನನ್ನ ಅನಿಸಿಕೆ ಬ್ರಾಹ್ಮಣ ವಿರೋಧಿಯಲ್ಲ. ವಿಶ್ವವಿಖ್ಯಾತ ಉಡುಪಿ ಶ್ರೀಕೃಷ್ಣ ಮಠದಲ್ಲಿನ (ಅ)ವ್ಯವಸ್ಥೆಗಳು ಸುಧಾರಣೆಯಾಗಿ ಮಾದರಿಯಾಗಲಿ ಎಂಬುದೇ ಸದಾಶಯ. **'ಕುಲ ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ... ಬಲ್ಲಿರಾ...'** ಕನಕದಾಸರ ಉಕ್ತಿ ಎಷ್ಟು ಅರ್ಥಗರ್ಭಿತ. ಆದರೆ ಯಾರೂ ಅರ್ಥಮಾಡಿ ಕಾರ್ಯ[illegible]ಗೊಳಿಸುತ್ತಿಲ್ಲವೇಕೆ...?

ಪಾಕಿಸ್ತಾನದಲ್ಲಿ ಪ್ರಜಾಸತ್ತೆಯ ಮುನ್ನಡೆ

ಪಾಕಿಸ್ತಾನದಲ್ಲಿ ಶಾಂತಿಯುತ ಚುನಾವಣೆಗಳು ನಡೆದು ಹೊಸ ಸರ್ಕಾರವೊಂದು ಚುನಾಯಿತಗೊಂಡಿದೆ ಎಂಬುದೇ ಒಂದು ಸಕಾರಾತ್ಮಕ ಬೆಳವಣಿಗೆಯಾಗಿದೆ.

ಎನ್.ಕೆ. ವಸಂತರಾಜ

ಪಾಕಿಸ್ತಾನದಲ್ಲಿ ಕಳೆದ ವಾರ ಒಂದು ಚಾರಿತ್ರಿಕ ಘಟನೆ ನಡೆಯಿತು. ಪಾಕಿಸ್ತಾನ ದೇಶದ ಜೀವನದಲ್ಲೇ ಮೊದಲ ಬಾರಿಗೆ ಒಂದು ಚುನಾಯಿತ ನಾಗರಿಕ ಸರ್ಕಾರ ತನ್ನ ಅವಧಿ ಪೂರೈಸಿತು. ಸಮಯಕ್ಕೆ ಸರಿಯಾಗಿ ಚುನಾವಣೆ ನಡೆದು ಇನ್ನೊಂದು ನಾಗರಿಕ ಸರ್ಕಾರಕ್ಕೆ ಅಧಿಕಾರ ವಹಿಸಿಕೊಡಲು ಸಿದ್ಧವಾಗಿದೆ. ಪಾಕಿಸ್ತಾನದ 65 ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ ಚುನಾಯಿತ ನಾಗರಿಕ ಸರ್ಕಾರ ತನ್ನ ಅವಧಿ ಪೂರೈಸುವ ಮೊದಲೇ ಮಿಲಿಟರಿ ಅದನ್ನು ಉರುಳಿಸಿ ಅಧಿಕಾರ ಕಸಿದುಕೊಳ್ಳುತ್ತಿತ್ತು. ಈ ಬಾರಿ ಅಂತಹ ದುರಂತದ ಪುನರಾವರ್ತನೆ ಆಗದ್ದು ವಿಶೇಷ. ಪಾಕಿಸ್ತಾನದಲ್ಲಿ ಪ್ರಜಾಸತ್ತೆ ಬೇರು ಬಿಡುತ್ತಿದೆ. ಮುನ್ನಡೆ ಸಾಧಿಸುತ್ತಿದೆ ಎಂಬುದು ಪಾಕಿಸ್ತಾನದ ಮಾತ್ರವಲ್ಲ ಇಡೀ ಬಾರತೀಯ ಉಪಖಂಡದ ಜನತೆಗೆ ಸಂತಸ ತರುವ ಅತ್ಯಂತ ಸಕಾರಾತ್ಮಕ ಬೆಳವಣಿಗೆ.

ಮಾತ್ರವಲ್ಲ, ಚುನಾವಣೆ ಮೊದಲು ಸಂಭವಿಸಿದ ತಾಲಿಬಾನ್ ಮುಂತಾದ ಪ್ರಜಾಪ್ರಭುತ್ವ–ವಿರೋಧಿ ಶಕ್ತಿಗಳ ಹಿಂಸಾಚಾರ ಲೆಕ್ಕಿಸದೆ ಜನತೆ ದೊಡ್ಡ ಪ್ರಮಾಣದಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಪಾಕಿಸ್ತಾನ ಕಂಡ ಅತ್ಯಂತ ಹೆಚ್ಚಿನ ಮತದಾನದ ಪ್ರಮಾಣ (ಶೇ.60) ದಾಖಲಾಯಿತು. ಚುನಾವಣೆ ಮೊದಲಿನ ಹಿಂಸಾಚಾರದಲ್ಲಿ ನೂರಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಹಲವು ಅಭ್ಯರ್ಥಿಗಳ ಮೇಲೂ ಮಾರಣಾಂತಿಕ ಹಲ್ಲೆಗಳು ನಡೆದಿವೆ. ಹಲವು ಅಭ್ಯರ್ಥಿಗಳನ್ನು ಅಪಹರಿಸಿಲಾಯಿತು. ಇಂತಹ ದಾಳಿಗಳ ಗುರಿ ಹೆಚ್ಚಾಗಿ ಪ್ರಗತಿಪರ ಮತ್ತು ಸೆಕ್ಯುಲರ್ ಪಕ್ಷಗಳು ಆಗಿದ್ದವು. ನವಾಝ್ ಶರೀಫ್ ಅವರ ಪಿಎಂಎಲ್–ಎನ್ ಮತ್ತು ಇಮ್ರಾನ್ ಖಾನ್ ಅವರ ಪಿಟಿಐ ಅಭ್ಯರ್ಥಿ/ಬೆಂಬಲಿಗರು/ಸಭೆಗಳ ಮೇಲೆ ಇಂತಹ ದಾಳಿಗಳು ನಡೆಯಲಿಲ್ಲ ಎಂದೂ ಗಮನಿಸಬೇಕಾದ್ದು. ತಾಲಿಬಾನ್ ಮುಂತಾದ ಹಲವು ಇಸ್ಲಾಮಿಕ್ ಮೂಲಭೂತವಾದಿ ಶಕ್ತಿಗಳು ಚುನಾವಣೆ ಇಸ್ಲಾಂ–ವಿರೋಧಿ ಎಂದು ಅದನ್ನು ಬಹಿಷ್ಕರಿಸಲು ಕರೆ ಕೊಟ್ಟಿದ್ದರು. ಈ ಕರೆಯನ್ನು ಜನತೆ ತಿರಸ್ಕರಿಸಿದ್ದಾರೆ ಎಂಬುದೂ ಗಮನಾರ್ಹ. ಚುನಾವಣೆಗಳು ಎಷ್ಟು ಸಾಚಾ ಆಗಿದ್ದವು ಎಂಬ ಬಗ್ಗೆ ವಿವಾದ ಇದೆ ಮತ್ತು ಬಹುಶಃ ಮುಂದುವರೆಯುತ್ತದೆ. ಇಮ್ರಾನ್ ಖಾನ್ ಭಾರಿ ಅಕ್ರಮಗಳು ಜರುಗಿವೆ ಎಂದು ಆಪಾದಿಸಿದ್ದಾರೆ. ಆದರೆ ಯುರೋಪಿಯನ್ ಕೂಟ ಸೇರಿದಂತೆ ಹಲವು ವಿದೇಶೀ ವೀಕ್ಷಕರು ಚುನಾವಣೆ ನ್ಯಾಯಯುತವಾಗಿತ್ತು ಎಂದು ಹೇಳಿದ್ದಾರೆ.

ಚುನಾವಣೆ ಫಲಿತಾಂಶಗಳೂ ಆಸಕ್ತಿಕಾರಕವಾಗಿವೆ. ಕಳೆದ ಬಾರಿ ಆಳುವ ಪಕ್ಷವಾಗಿದ್ದ ಭುಟ್ಟೊ/ಜರ್ದಾರಿ ಅವರ ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಬಹುಮತ ಕಳೆದುಕೊಂಡಿದೆ ಮಾತ್ರವಲ್ಲ. ದೂರದ ಎರಡನೇ ಸ್ಥಾನದಲ್ಲಿದೆ. ಅದು ಬರಿಯ 33 ಸೀಟು ಗಳಿಸಿದೆ. ನವಾಝ್ ಶರೀಫ್ ಅವರ ಪಾಕಿಸ್ತಾನ್ ಮುಸ್ಲಿಂ ಲೀಗ್ (ಪಿಎಂಎಲ್–ಎನ್) 272 ಸೀಟುಗಳಲ್ಲಿ 130 ಸೀಟು ಗಳಿಸಿ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದೆ. ಮಾಜಿ ಕ್ರಿಕೆಟ್ ಕ್ಯಾಪ್ಟನ್ ಇಮ್ರಾನ್ ಖಾನ್ ಅವರ ತೆಹ್ರಿಕ್–ಎ–ಇನ್ಸಾಫ್ (ಪಿಟಿಐ) 29 ಸೀಟು ಗಳಿಸಿ ಹೊಸ ಮೂರನೇ ಶಕ್ತಿಯಾಗಿ ಹೊಮ್ಮಿದೆ. ನವಾಝ್ ಶರೀಫ್ ಅವರ ಪಾಕಿಸ್ತಾನ್ ಮುಸ್ಲಿಂ ಲೀಗ್ (ಪಿಎಂಎಲ್–ಎನ್) ಸರ್ಕಾರ ರಚಿಸಲಿದೆ ಎಂಬುದು ಖಚಿತ. ಆದರೆ ಅದಕ್ಕೆ ನಿಚ್ಚಳ ಬಹುಮತ ಇಲ್ಲದಿರುವುದರಿಂದ ಯಾವುದೇ ಪಕ್ಷ ಅಥವಾ ವ್ಯಕ್ತಿಗಳ ಜತೆ ಕೂಟ ಕಟ್ಟುವ ಅಗತ್ಯ ಇದೆ. ಜಮಾತ್ ಉಲೆಮಾ–ಎ–ಇಸ್ಲಾಮಿ (10 ಸೀಟುಗಳು), ಮುತ್ತಾಹಿದ್ ಕೌಮಿ ಮೂವ್ಮೆಂಟ್ (17 ಸೀಟುಗಳು), ಪಕ್ಷೇತರರು (27), ಇತರ ಪಕ್ಷಗಳು (21 ಸೀಟುಗಳು) – ಅವರ ಮುಂದೆ ಇರುವ ಪ್ರಮುಖ ಆಯ್ಕೆಗಳು. ನವಾಝ್ ಶರೀಫ್ ಯಾರನ್ನು ಆಯ್ದುಕೊಳ್ಳುತ್ತಾರೆ ಎಂಬುದು ಕುತೂಹಲಕ್ಕೆ ಕಾರಣವಾಗಿದೆ.

ಇನ್ನೂ ಎಲ್ಲಾ ಸೀಟುಗಳ ಫಲಿತಾಂಶಗಳ ಅಂತಿಮ ಘೋಷಣೆಯಾಗಿಲ್ಲ. ಪಾಕಿಸ್ತಾನದ ಸಂವಿಧಾನದ ಪ್ರಕಾರ ಪಕ್ಷಗಳು ಪಡೆದ ಬೆಂಬಲದ ಆಧಾರದ ಮೇಲೆ ಅಲ್ಪಸಂಖ್ಯಾತರಿಗೆ 10 ಸೀಟುಗಳನ್ನು, ಮಹಿಳೆಯರಿಗೆ 60 ಸೀಟುಗಳನ್ನು ಕೊಡಲಾಗುತ್ತದೆ. ಈ ಚುನಾವಣಾ ಫಲಿತಾಂಶಗಳಲ್ಲಿ ಪ್ರಾದೇಶಿಕವಾಗಿ ರಾಜಕೀಯ ವೈವಿಧ್ಯತೆ ಸಹ ಪ್ರಧಾನವಾಗಿ ಕಂಡು ಬಂದಿದೆ. ಪಿಎಂಎಲ್–ಎನ್ ತನ್ನ ಹೆಚ್ಚಿನ ಸೀಟುಗಳನ್ನು ಪಂಜಾಬ್ ಪ್ರಾಂತ್ಯದಲ್ಲಿ ಪಡೆದರೆ, ಪಿಪಿಪಿ ಸಿಂಧ್ ಪ್ರಾಂತ್ಯದಲ್ಲಿ ಹೆಚ್ಚಿನ ಸೀಟುಗಳನ್ನು ಪಡೆದಿದೆ. ಪಿಟಿಐ ಖೈಬರ್ ಪಕ್ತೂನ್‌ಖ್ವಾ ಪ್ರಾಂತ್ಯದಲ್ಲಿ ಹೆಚ್ಚಿನ ಸೀಟು ಗಳಿಸಿದೆ. ಇದರ ಜತೆಗೆ ನಡೆದ ಪ್ರಾಂತೀಯ ಚುನಾವಣೆಗಳಲ್ಲಿ ಮಿಶ್ರ ಫಲಿತಾಂಶ ಕಂಡು ಬಂದಿದೆ. ಪಂಜಾಬ್ ಪ್ರಾಂತೀಯ ಚುನಾವಣೆಗಳಲ್ಲಿ ಪಿಎಂಎಲ್–ಎನ್ ನಿಚ್ಚಳ (297 ಸೀಟುಗಳಲ್ಲಿ 212 ಸೀಟು) ಬಹುಮತ ಗಳಿಸಿದೆ. ಸಿಂಧ್ ಪ್ರಾಂತೀಯ ಚುನಾವಣೆಗಳಲ್ಲಿ ಪಿಪಿಪಿ ಅತಿ ದೊಡ್ಡ (130 ಸೀಟುಗಳಲ್ಲಿ 61 ಸೀಟು) ಪಕ್ಷವಾಗಿ ಸರ್ಕಾರ ರಚಿಸುವ ಹಾದಿಯಲ್ಲಿದೆ. ಇಮ್ರಾನ್ ಖಾನ್ ಅವರ ಪಿಟಿಐ ಅತಿ ದೊಡ್ಡ (99 ಸೀಟುಗಳಲ್ಲಿ 35 ಸೀಟು) ಪಕ್ಷವಾಗಿ ಖೈಬರ್ ಪ್ರಾಂತ್ಯದಲ್ಲಿ ಸರ್ಕಾರ ರಚಿಸುವ ಹಾದಿಯಲ್ಲಿದೆ.

ನವಾಝ್ ಶರೀಫ್ ಮೂರನೇ ಬಾರಿ ಪ್ರಧಾನಿಯಾಗುವುದು ಖಚಿತವಾಗಿದ್ದು ಅವರು ಭಾರತದ ಜತೆ ಸಂಬಂಧ ಸುಧಾರಿಸುವುದು ತಮ್ಮ ಆದ್ಯತೆಗಳಲ್ಲಿ ಒಂದು ಎಂದು ಚುನಾವಣಾ ಪ್ರಚಾರದಲ್ಲೂ ಹೇಳಿದ್ದರು. ಫಲಿತಾಂಶ ಬಂದ ನಂತರವೂ ಪುನರುಚ್ಚರಿಸಿದ್ದಾರೆ. ಅವರ ವಿಜಯಕ್ಕೆ ಅಭಿನಂದಿಸಿ ಫೋನು ಮಾಡಿದ ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ತಮ್ಮ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಆಹ್ವಾನಿಸಿದ್ದಾರೆ. ಅವರು ಹಿಂದೆ ಪ್ರಧಾನಿಯಾಗಿದ್ದಾಗ ಭಾರತದ ಜತೆ ಸಂಬಂಧ ಸಾಮಾನ್ಯೀಕರಿಸುವತ್ತ ಕ್ರಮ ಕೈಗೊಂಡಿದ್ದರು. ಅದರಿಂದಾಗಿ ಪಾಕಿಸ್ತಾನಕ್ಕೆ ಭಾರತೀಯ ಪ್ರಧಾನಿಯೊಬ್ಬರ ಪ್ರಥಮ ಭೇಟಿ ಮತ್ತು ಚಾರಿತ್ರಿಕ ಲಾಹೋರ್ ಘೋಷಣೆ ಸಾಧ್ಯವಾಗಿತ್ತು. ಚುನಾಯಿತ ನಾಗರಿಕ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲ (ಉದಾ: ಹಿಂದೆ ಭುಟ್ಟೊ ಅವಧಿಯ



ಸಿಮ್ಲಾ ಒಪ್ಪಂದ) ಭಾರತ–ಪಾಕಿಸ್ತಾನ ಸಂಬಂಧ ಸಾಮಾನ್ಯಗೊಳ್ಳುವ ಪ್ರಕ್ರಿಯೆ ಆರಂಭವಾಗುತ್ತದೆ. ಮಿಲಿಟರಿ ಸರ್ಕಾರ ಬಂದಾಗ ಆ ಪ್ರಕ್ರಿಯೆಗೆ ತಡೆ ಬರುತ್ತದೆ – ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಪಾಕಿಸ್ತಾನದಲ್ಲಿ ಪ್ರಜಾಸತ್ತೆ ಬೇರೂರಿ ಮಿಲಿಟರಿಯ ರಾಜಕೀಯ ಪಾತ್ರ ಇಲ್ಲವಾಗುವುದು ಮಾತ್ರ ಇದಕ್ಕೆ ಗ್ಯಾರಂಟಿ.

ಮಿಲಿಟರಿ, ಐ.ಎಸ್.ಐ., ನ್ಯಾಯಾಂಗ ಜತೆ ಸರ್ಕಾರ ಯಾವ ರೀತಿ ವರ್ತಿಸಬೇಕು ಎಂಬ ನಿಯಮಾವಳಿಗಳನ್ನು ಆಚರಣೆಗೆ ತಂದು ಪ್ರಜಾಸತ್ತಾತ್ಮಕ ಸಂಘಟನೆಗಳನ್ನು ಇನ್ನಷ್ಟು ಗಟ್ಟಿಗೊಳಿಸುವ ಗುರುತರ ಜವಾಬ್ದಾರಿ ಶರೀಫ್ ಸರ್ಕಾರದ ಮೇಲೆ ಇದೆ. ಪಾಕಿಸ್ತಾನದ ಮಿಲಿಟರಿ ಮತ್ತು ಬೇಹುಗಾರಿಕೆ ಸಂಸ್ಥೆ ಐ.ಎಸ್.ಐ. ಮೇಲೆ ನವಾಝ್ ಶರೀಫ್ ಸರ್ಕಾರ ಎಷ್ಟು ರಾಜಕೀಯ ನಿಯಂತ್ರಣ ಸಾಧಿಸಲು ಸಾಧ್ಯವಾಗುತ್ತದೆ ಎಂಬುದರ ಮೇಲೂ ಇದು ಅವಲಂಬಿಸಿರುತ್ತದೆ. ಇದನ್ನು ಸಾಧಿಸುವುದು ನವಾಝ್ ಶರೀಫ್ ಸರ್ಕಾರದ ರಾಜಕೀಯ ಇಚ್ಛಾಶಕ್ತಿಯಿಂದ ಮಾತ್ರ ಸಾಧ್ಯವಿಲ್ಲ. ಪಾಕಿಸ್ತಾನದಲ್ಲಿ ಬೇರೆ ಬೇರೆ ನೆಪದಲ್ಲಿ (ಸದ್ಯದಲ್ಲಿ ಭಯೋತ್ಪಾದಕ ತಾಲಿಬಾನ್ ವಿರುದ್ಧ ಸಮರ) ಮಿಲಿಟರಿ ಮತ್ತು ಐ.ಎಸ್.ಐ. ಮೂಲಕ ಅಮೆರಿಕ ಮೂಗು ತೂರಿಸುವುದು, ಸರ್ಕಾರದ ಮೇಲೆ ಒತ್ತಡ ಹಾಕುವುದನ್ನು ಎಷ್ಟರ ಮಟ್ಟಿಗೆ ಪ್ರತಿರೋಧ ಮಾಡಲು ಸಾಧ್ಯವಾಗುತ್ತದೆ ಎಂಬುದರ ಮೇಲೂ ಅವಲಂಬಿಸಿರುತ್ತದೆ.

ಪಾಕಿಸ್ತಾನದಲ್ಲಿ ಭಯೋತ್ಪಾದಕ ಹಿಂಸಾಚಾರ ನಿಲ್ಲಿಸಿ ಶಾಂತಿ ಸುವ್ಯವಸ್ಥೆ ನೆಲೆಸುವಂತೆ ಮಾಡುವುದೂ ಶರೀಫ್ ಸರ್ಕಾರದ ಮುಂದೆ ಇರುವ ಒಂದು ಪ್ರಮುಖ ಸವಾಲು. ಪಾಕಿಸ್ತಾನದ ಗಡಿ ಪ್ರದೇಶಗಳಲ್ಲಿ ಅಮೆರಿಕದ ಸ್ವಯಂಚಾಲಿತ ಡ್ರೋನ್ ವಿಮಾನಗಳ ಬೇಕಾಬಿಟ್ಟಿ ದಾಳಿ ಒಂದು ಪ್ರಮುಖ ಚುನಾವಣಾ ವಿಷಯವಾಗಿತ್ತು. ಗಡಿ ಪ್ರಾಂತ್ಯದಲ್ಲಿ ಇಮ್ರಾನ್ ಖಾನ್ ಅವರ ಪಿಟಿಐ ವಿಜಯಕ್ಕೆ ಮುಖ್ಯ ಕಾರಣ ಅವರು ಡ್ರೋನ್ ವಿಮಾನಗಳ ದಾಳಿ ನಿಲ್ಲಿಸುವ ಭರವಸೆ ಕೊಟ್ಟಿದ್ದು ಎನ್ನಲಾಗಿದೆ. ಅಫ್ಘಾನಿಸ್ತಾನದ ತಾಲಿಬಾನ್ ಕರ್ಜಾಯಿ ಸರ್ಕಾರದ ಜತೆ ಮಾತುಕತೆ ನಡೆಸುವುದಿಲ್ಲ ಎಂದು ಹೇಳಿದೆ. 2014ರಲ್ಲಿ ಅಮೆರಿಕದ ಸೈನ್ಯ ವಾಪಸಾದ ಮೇಲೆ ಅಫ್ಘಾನಿಸ್ತಾನದಲ್ಲಿ ಪರಿಸ್ಥಿತಿ ಹೇಗಿರುತ್ತದೆ ಎಂಬುದರ ಪರಿಣಾಮ ಪಾಕಿಸ್ತಾನದ ಮೇಲೂ ಬೀಳುತ್ತದೆ. ತಾಲಿಬಾನ್ ಜತೆ ಮಾತುಕತೆ ನಡೆಸಿ ಭಯೋತ್ಪಾದಕ ಹಿಂಸಾಚಾರ ನಿಲ್ಲಿಸುವುದಾಗಿ ಶರೀಫ್ ಹೇಳಿದ್ದಾರೆ. ಆದರೆ ಈ ಚುನಾವಣೆಯಲ್ಲಿ ಅದು ತೋರಿಸಿದ ಹಾಗೆ ತಾಲಿಬಾನಿಗೆ ಮಾತುಕತೆ ಸೇರಿದ ಹಾಗೆ ಯಾವುದೇ ಪ್ರಜಾಸ್ತಾತ್ಮಕ ಕ್ರಮಗಳಲ್ಲಿ ನಂಬಿಕೆ ಇಲ್ಲ. ಸರ್ಕಾರ ರಚಿಸಲು ಮೂಲಭೂತವಾದಿ ಪಕ್ಷಗಳ ಜತೆ ಕೂಟ ರಚಿಸಿದರೆ ಈ ಕೆಲಸ ಇನ್ನೂ ಕಠಿಣವಾಗಲಿದೆ.

ನವಾಝ್ ಶರೀಫ್ ಪಕ್ಷಕ್ಕೆ ಬಹುಮತ ಬರುವುದಕ್ಕೆ ಪ್ರಮುಖ ಕಾರಣ ಕಳೆದ ಪಿಪಿಪಿ ಸರ್ಕಾರದ ಆರ್ಥಿಕದ ನಿರ್ವಹಣೆ. ಪಿಪಿಪಿ ಎಡ–ನಡುಪಂಥೀಯ ಪಕ್ಷವಾಗಿದ್ದರೂ ಆರ್ಥಿಕದ ನಿರ್ವಹಣೆಯಲ್ಲಿ ಅದು ಕಂಡು ಬರಲಿಲ್ಲ. ವಿದ್ಯುತ್ ಕೊರತೆ, ಜನತೆಯ ಮೇಲೆ ಆರ್ಥಿಕ ಸಂಕಷ್ಟಗಳ ಪರಿಹಾರಕ್ಕೆ ಪಿಪಿಪಿ ಸರ್ಕಾರ ಏನೂ ಮಾಡದ್ದರ ವಿರುದ್ಧ ಇದು ಪ್ರತಿಭಟನಾ ಮತವಾಗಿತ್ತು. ಶರೀಫ್ ಪಕ್ಷ ಹೆಚ್ಚು ಬಲ–ನಡುಪಂಥೀಯ ಪಕ್ಷವಾಗಿದ್ದು ಈಗಿನ ಆರ್ಥಿಕ ಬಿಕ್ಕಟ್ಟು ಎದುರಿಸಲು ಐ.ಎಂ.ಎಫ್. ಸಾಲ ತೆಗೆದುಕೊಳ್ಳಲು ಮುಂದಾಗಿದೆ. ಆದರೆ ಇದು ಜನತೆಯ ಸಂಕಷ್ಟಗಳನ್ನು ಕಡಿಮೆ ಮಾಡುತ್ತಾ ಎಂಬುದು ಯಕ್ಷ ಪ್ರಶ್ನೆ.

ಕೊನೆಯದಾಗಿ ಶರೀಫ್ 'ಹೊಸ ಪಾಕಿಸ್ತಾನ' ಕಟ್ಟುವ ಘೋಷಣೆ ಯುವಜನತೆ ಮತ್ತು ಮಹಿಳೆಯರಲ್ಲಿ ಹೊಸ ಆಶಾಭಾವನೆಗಳನ್ನು ಉಂಟು ಮಾಡಿದೆ. ಒಟ್ಟಾರೆಯಾಗಿಯೂ ಯುವಜನತೆ ಮತ್ತು ಮಹಿಳೆಯರು ಈ ಚುನಾವಣೆಯಲ್ಲಿ ಭಾಗವಹಿಸಿದ್ದರು. ಅವರ 'ಹೊಸ ಪಾಕಿಸ್ತಾನ'ದ ಭರವಸೆಗಳನ್ನು ಈಡೇರಿಸುವುದರಲ್ಲಿ ಶರೀಫ್ ಸರ್ಕಾರ ಎಷ್ಟು ಮುತುವರ್ಜಿ ವಹಿಸುತ್ತದೆ ಎಂದು ಕಾದು ನೋಡಬೇಕಾಗಿದೆ.


ಚುನಾವಣಾ ಫಲಿತಾಂಶದ ನಂತರ ಹುರುಪಿನಲ್ಲಿರುವ ಕಾಂಗ್ರೆಸ್ ಪಕ್ಷವು 'ಸಾಮಾಜಿಕ ನ್ಯಾಯ', 'ಒಳ್ಳೆಯ ಸರ್ಕಾರ'ದ ಬಗೆಗೆ ಏನೆಲ್ಲಾ ಮಾತನಾಡಿದರೂ ಕೂಡ ಕಾಂಗ್ರೆಸ್ ಪಕ್ಷ ದೇಶದಾದ್ಯಂತ ಜಾರಿಗೆ ತರುತ್ತಿರುವ ನೀತಿಗಳು ಅದಕ್ಕೆ ತದ್ವಿರುದ್ಧವಾಗಿವೆ. ಕಾಂಗ್ರೆಸ್‌ನ ಹಿಂದಿನ ಚರಿತ್ರೆ, ಮತ್ತು ಕೇಂದ್ರದ ಯುಪಿಎ ಸರ್ಕಾರ ಮುಖಕ್ಕೆ ಮೆತ್ತಿಕೊಂಡಿರುವ ಹಗರಣಗಳ ಕೊಳೆ ಕಳಂಕವನ್ನು ನೋಡಿದರೆ ಭ್ರಷ್ಟಾಚಾರ ರಹಿತ ಸರ್ಕಾರ ಕೊಡುವೆವು ಎನ್ನುವ ಮಾತು ಕೂಡ ಟೊಳ್ಳು ಅನಿಸುತ್ತದೆ.

ರಾಜ್ಯ ಲೂಟಿ ಹೊಡೆದವರಿಗೆ ದೇಶ ಲೂಟಿ ಹೊಡೆದವರು ಪರ್ಯಾಯವೆ?

ಜಿ.ವಿ. ಶ್ರೀರಾಮರೆಡ್ಡಿ

ವಿಧಾನಸಭಾ ಚುನಾವಣೆಗಳು ಮುಗಿದು ಕಾಂಗ್ರೆಸ್ ಪಕ್ಷದ ಹೊಸ ಸರ್ಕಾರವು ಸಿದ್ದರಾಮಯ್ಯನವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿದೆ. ಕರ್ನಾಟಕ ಕಂಡ ಅತ್ಯಂತ ಭ್ರಷ್ಟ-ಕೋಮುವಾದಿ ಮತ್ತು ಜನವಿರೋಧಿ ನಿರುಪಯುಕ್ತ ಸರ್ಕಾರದ ಮೇಲೆ ಕರ್ನಾಟಕದ ಜನತೆಗೆ ಇದ್ದ ಅಕ್ರೋಶ, ಸಿಟ್ಟು ಮತ್ತು ಅ ಸರ್ಕಾರದ ವಿರುದ್ಧ ಸಿಪಿಐ(ಎಂ) ಮತ್ತು ಕಾರ್ಮಿಕ ಸಂಘಟಣೆಗಳು ನಡೆಸಿದ ಜನಪರ ಹೋರಾಟಗಳಿಂದಾಗಿ ಆ ಸರ್ಕಾರದ ವಿರುದ್ಧ ಜನತೆ ನೀಡಿದ ತೀರ್ಪಿನಿಂದ ಕಾಂಗ್ರೆಸ್ಸಿಗೆ ಬಹುಮತ ಬಂದಿದೆ. ಈ ಬಹುಮತ ಕಾಂಗ್ರೆಸ್ಸಿನ ಮೇಲೆ ಜನತೆಗೆ ಇದ್ದ ಪ್ರೀತಿ ನಂಬಿಕೆಯಿಂದಲ್ಲ, ಬದಲಿಗೆ ಭ್ರಷ್ಟ ಜನ ವಿರೋಧಿ ಸರ್ಕಾರದ ಮೇಲಿನ ಅಕ್ರೋಶದಿಂದಾಗಿ ಬಂದ ನಕಾರಾತ್ಮಕ ಮತಗಳಿಂದಲೇ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ.


ಕರ್ನಾಟಕದ ಜನತೆಗೆ ಕಾಂಗ್ರೆಸ್ ಬಿಟ್ಟು


ಬಳ್ಳಾರಿಯಲ್ಲಿ ಗಣಿ ಲೂಟಿ


ಬೇರೆ ಪರ್ಯಾಯಗಳಿರಲಿಲ್ಲ. ಜೆಡಿ(ಎಸ್)ನ್ನು ಜನತೆ ಪರ್ಯಾಯವೆಂದು ಪರಿಗಣಿಸಲಿಲ್ಲ. ಜೆಡಿ(ಎಸ್)ನ ಅವಕಾಶವಾದಿ ರಾಜ-ಕಾರಣದ ಬಗ್ಗೆ ಜನತೆಗೆ ಸ್ಪಷ್ಟ ಅರಿವಿದ್ದಂತೆ ಕಾಣುತ್ತದೆ. ಅದರೆ ಜನರೇ ಆಯ್ಕೆ ಮಾಡಿದ ಪರ್ಯಾಯವು ಉತ್ತಮವಲ್ಲವೆಂದು ಹೇಳಲೇಬೇಕಾಗುತ್ತದೆ. ರಾಜ್ಯವನ್ನು ಲೂಟಿ ಹೊಡೆದವರಿಗೆ ಬದಲಿಗೆ ದೇಶವನ್ನು ಲೂಟಿ ಹೊಡೆದವರು ಪರ್ಯಾಯವಾಗಿ ಕಂಡಿದ್ದು ಒಂದು ರಾಜಕೀಯ ದುರಂತವೇ ಸರಿ.

ಸಿದ್ದರಾಮಯ್ಯನವರನ್ನು ಸರ್ಕಾರದ ನೇತೃತ್ವವಹಿಸಲು ಆಯ್ಕೆ ಮಾಡಿದ್ದು ಇದ್ದುದರಲ್ಲಿ ಉತ್ತಮವೆಂದು ಮೇಲ್ನೋಟಕ್ಕೆ ಕಂಡರೂ, ಕಾಂಗ್ರೆಸ್ಸಿನ ಧೋರಣೆಗಳ ಬದಲಾವಣೆ ಆಗಲು ಸಾಧ್ಯವೇ ಇಲ್ಲ. ವೈಯಕ್ತಿಕವಾಗಿ ಸಿದ್ದರಾಮಯ್ಯ ಒಳ್ಳೆಯ ಆಡಳಿತವನ್ನು ನೀಡುವರೆಂಬ ನಿರೀಕ್ಷೆ ಜನರಿಗಿದ್ದರೂ ಕಾಂಗ್ರೆಸ್ಸಿನ ಉದಾರೀಕರಣ ನೀತಿಗಳಿಂದ ಸಿದ್ದರಾಮಯ್ಯ ದೂರ ಸರಿದು ಧಿಕ್ಕರಿಸಲು ಸಾಧ್ಯವೇ ಇಲ್ಲ, ಖಾಸಗೀಕರಣ ನೀತಿಗಳಿಗೆ ಕಡಿವಾಣ ಹಾಕಲು ಸಾಧ್ಯವೇ ಇಲ್ಲ. ಘೋಷಣೆಗಳು ಜನಪರ ಎಂದು ಕಂಡರೂ ಕಾಂಗ್ರೆಸ್ಸಿನ ನೀತಿಗಳು ಜನಪರ ಇಲ್ಲ. ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವದಲ್ಲಿ ಬಿಡುಗಡೆ ಮಾಡಿದ ಪ್ರಣಾಳಿಕೆಯಲ್ಲಿ ಎಲ್ಲೂ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣದ ನೀತಿಗಳನ್ನು ಜಾರಿಗೆ ತರುವುದಿಲ್ಲವೆಂದು ಹೇಳಲೇ ಇಲ್ಲ. 1 ರೂಪಾಯಿಗೆ ಕೆ.ಜಿ. ಅಕ್ಕಿ ಎಂದು ಹೇಳಿದರು. ಪ್ರತಿ ಕುಟುಂಬಕ್ಕೆ 35 ಕೆ.ಜಿ ಅಕ್ಕಿಯನ್ನು ಕೊಡುತ್ತೇವೆಂದು ಹೇಳಲೇ ಇಲ್ಲ, ಕೃಷಿ, ಕೈಗಾರಿಕೆ, ವಿದ್ಯುತ್, ನೀರಾವರಿ, ನಿವೇಶನ ಮತ್ತು ವಸತಿಯಂತ ಅನೇಕ ಪ್ರಶ್ನೆಗಳ ಬಗ್ಗೆ ಏನನ್ನು ಹೇಳಲೇ ಇಲ್ಲ. ಅಸಂಘಟಿತ ಕಾರ್ಮಿಕರ ಸಮಸ್ಯೆಗಳು ಮತ್ತು ನಿರುದ್ಯೋಗ ಸಮಸ್ಯೆಯ ಬಗ್ಗೆ ಸ್ಪಷ್ಟ ಧೋರಣೆ ಇಲ್ಲ. ಮುಖ್ಯವಾಗಿ ಶಿಕ್ಷಣದ ಬಗ್ಗೆ ಇವರ ಧೋರಣೆ ಏನು ಎಂದು ಹೇಳಲಿಲ್ಲ. ಸಾಮಾಜಿಕ ನ್ಯಾಯದ ಬಗ್ಗೆ ಉದ್ದುದ್ದ ಭಾಷಣ ಮಾಡುವ ಕಾಂಗ್ರೆಸ್ ಪಕ್ಷ ಪಂಕ್ತಿಭೇದ ಮತ್ತು ಮಡೆ-ಮಡೆಸ್ನಾನವೆಂಬ ಅನಿಷ್ಟ ಪದ್ಧತಿಗಳ ನಿಷೇಧದ ಬಗ್ಗೆ ತನ್ನ ಪ್ರಣಾಳಿಕೆಯಲ್ಲಿ ತುಟಿ ಬಿಟ್ಟಿಲ್ಲ. ಹೀಗಾಗಿ ಕಾಂಗ್ರೆಸ್ ಬಿಜೆಪಿಗಿಂತ ಹೆಚ್ಚು ಭಿನ್ನವಾದ ಸರ್ಕಾರವನ್ನು ಕೊಡುತ್ತದೆ ಎಂದು ನಿರೀಕ್ಷಿಸಿದರೆ ಭ್ರಮನಿರಸನ ಖಚಿತ.

ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿಯನ್ನಾಗಿ ಘೋಷಣೆ ಮಾಡಿದ ತಕ್ಷಣ ರಾಜ್ಯದ ಕೆಲವು ಭಾಗಗಳಲ್ಲಿ ಖರ್ಗೆಯವರಿಗೆ ಮುಖ್ಯಮಂತ್ರಿ ಸ್ಥಾನ ಸಿಗಲಿಲ್ಲವೆಂದು ಎದ್ದ ದಲಿತರ ಪ್ರತಿಭಟಣೆಯ ಸಂದರ್ಭದಲ್ಲಿ ಸಿದ್ದರಾಮಯ್ಯನವರು ನಾನೂ ದಲಿತನೇ. ನನಗೆ ಸಹಕಾರ ಕೊಡಿ ಎಂದು ಹೇಳಿ ಪ್ರಮಾಣ ವಚನದ ನಂತರ ಘೋಷಣೆ ಮಾಡಿದ ಕೆಲವು ರಿಯಾಯತಿಗಳನ್ನು ಬಿಟ್ಟರೆ, ದಲಿತರ ದೇವಸ್ಥಾನದ ಪ್ರವೇಶದ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಪಂಕ್ತಿಭೇದ ಮತ್ತು ಮಡೆ ಮಡೆಸ್ನಾನದ ನಿಷೇದವನ್ನು ಏಕೆ ಘೋಷಿಸಲಿಲ್ಲ? ಇವು ಅವರ ನೀತಿಗಳ ಪ್ರತೀಕವೇ? ವಿವಿಧ ನಿಗಮಗಳ ಸುಮಾರು 1960 ಸಾವಿರ ಕೋಟಿ ರೂ.ಗಳ ಸಾಲಮನ್ನಾ ಮಾಡಿರುವುದು ಸ್ವಾಗತಾರ್ಹವಾದರೂ ನಿರಂತರ ಎರಡು ವರ್ಷಗಳಿಂದ ಬರ-ಕ್ಕೆ ತುತ್ತಾಗಿರುವ ರೈತರ ಸಾಲವನ್ನು ಏಕೆ ಮನ್ನಾ ಮಾಡಿದ್ದಾಗಿ ಘೋಷಿಸಲಿಲ್ಲ? ಇವೆಲ್ಲವೂ ಕಾಂಗ್ರೆಸ್ಸಿನ ನೀತಿಗಳ ಸೂಚಕವಲ್ಲವೇ?


ಯುಪಿಎ ಸರ್ಕಾರದ ಕಲ್ಲಿದ್ದಲು ಹಗರಣ

ಮುಂಬರುವ ಲೋಕಸಭಾ ಚುನಾವಣೆಗಳ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್ ಪಕ್ಷ ಇನ್ನಷ್ಟು ರಿಯಾಯಿತಿಗಳನ್ನು ಘೋಷಿಸಬಹುದು. ಆದರೆ ಕಾಂಗ್ರೆಸಿನ ಮೂಲ ಆರ್ಥಿಕ ನೀತಿಗಳು ಬದಲಾವಣೆ ಆಗಲು ಸಾಧ್ಯವೇ ಇಲ್ಲ, ಬದಲಿಗೆ ಜನರ ಮೇಲೆ ಇನ್ನು ಹೆಚ್ಚಿನ ಹೊರೆಗಳು ಬೀಳುವುದು ಖಚಿತ.



ಇನ್ನೂ ಸಿದ್ದರಾಮಯ್ಯನವರು ಬೇರೆಯವರಿಗಿಂತ ಭಿನ್ನ, ಜನಪರ, ಭ್ರಷ್ಟಾಚಾರ ವಿರೋಧಿ ಎಂಬ ವೈಭವೀಕರಣ ಮಾಡಲು ಹೊರಟಿರುವ ಕೆಲವು ಮಾಧ್ಯಮಗಳು ಮತ್ತು ವ್ಯಕ್ತಿಗಳು ಒಂದನ್ನು ತಿಳಿದಿದ್ದರೆ ಒಳ್ಳೆಯದು. ಸಿದ್ದರಾಮಯ್ಯ ಇತರರಿಗಿಂತ ಉತ್ತಮವೆಂದು ಕಂಡರು ಆ ಉತ್ತಮತೆಯನ್ನು ಉಳಿಸಿಕೊಳ್ಳಲು ಕಾಂಗ್ರೆಸ್ಸಿನಲ್ಲಿರುವ ಒಳಗಿನ ಶಕ್ತಿಗಳು ಖಂಡಿತ ಬಿಡುವುದಿಲ್ಲ. ಕಾಂಗ್ರೆಸ್ ಮತ್ತು ಬಿಜೆಪಿ ಭ್ರಷ್ಟಾಚಾರದ ಎರಡು ಮುಖಗಳು.

ಮುಖ್ಯಮಂತ್ರಿಯಾದ ತಕ್ಷಣ ಸುವರ್ಣ ನ್ಯೂಸ್ ಚಾನಲ್ ಮತ್ತು ಕನ್ನಡಪ್ರಭ ದಿನ ಪತ್ರಿಕೆಗೆ ಕೊಟ್ಟ ಸಂದರ್ಶನದಲ್ಲಿ ಸಿದ್ದರಾಮಯ್ಯನವರಲ್ಲಿ ಸುಪ್ತವಾಗಿ ಅಡಗಿರುವ ವೈರುಧ್ಯಗಳು ಮತ್ತು ದ್ವಂದ್ವಗಳು ಸ್ಪಷ್ಟವಾಗಿ ಕಾಣುವಂತಾಗಿವೆ. ಈ ಸಂದರ್ಶನದಲ್ಲಿ ರಾಜ್ಯದ ಅಭಿವೃದ್ಧಿಯ ಬಗ್ಗೆ ತನ್ನ ಸ್ಪಷ್ಟ ದಾರಿ ಯಾವುದೂ? ತಾನು ಯಾವ ನೀತಿಗಳನ್ನು ಅನುಸರಿಸುತ್ತೇನೆಂದು ಹೇಳಲೇ ಇಲ್ಲ. ಎಲ್ಲಾ ಅಭಿಪ್ರಾಯಗಳು ಚುನಾವಣಾ ವೇದಿಕೆಯಲ್ಲಿ ಮಾಡಿದ ಭಾಷಣದಂತೆ ಇರುವುದು ಬಿಟ್ಟರೆ ಮುಂದೆ ಅನುಸರಿಸಬೇಕಾಗಿರುವ ನೀತಿಗಳ ಬಗ್ಗೆ ಯಾವುದೇ ಸುಳಿವಿಲ್ಲ. ಅನುಸರಿಸಬೇಕಾದ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿಗಳ ಬಗ್ಗೆ ಪ್ರಸ್ತಾಪವಿಲ್ಲ. ಇನ್ನೂ ಹಲವಾರು ಜ್ವಲಂತ ಸಮಸ್ಯೆಗಳು ರಾಜ್ಯವನ್ನು ಕಾಡುತ್ತಿವೆ. ಕುಡಿಯುವ ನೀರಿನ ಸಮಸ್ಯೆ, ಮಹಿಳೆಯರ ಮೇಲಿನ ದೌರ್ಜನ್ಯ, ದಲಿತ-ಅಲ್ಪಸಂಖ್ಯಾಂತರ ಮೇಲಿನ ದೌರ್ಜನ್ಯಗಳ ಬಗ್ಗೆಯೂ ಪ್ರಸ್ತಾಪವಿಲ್ಲ. ಈಚೆಗೆ ಮುಕ್ತಾಯವಾದ ಚುನಾವಣೆಗಳಲ್ಲಿ ನಡೆದ ವ್ಯಾಪಕ ಭ್ರಷ್ಟಾಚಾರ, ಹಣ - ಹೆಂಡದ ಹೊಳೆ ಹರಿದು ಇಡೀ ಚುನಾವಣೆ ಮತ್ತು ರಾಜಕೀಯವನ್ನೇ ವ್ಯಾಪಾರೀಕರಣಗೊಳಿಸುತ್ತಿರುವುದರ ಬಗ್ಗೆ ಚಕಾರವಿಲ್ಲ.

ಇನ್ನು ತಾನು ನಾಸ್ತಿಕನು ಅಲ್ಲ, ಮತ್ತು ಆಸ್ತಿಕನೂ ಅಲ್ಲ ಎಂದು ಹೇಳುವುದರ ಮುಖಾಂತರ ತನ್ನಲ್ಲಿನ ಸೈದ್ಧಾಂತಿಕ ದಿವಾಳಿಕೋರತನವನ್ನು ಪ್ರದರ್ಶಿಸಿದ್ದಾರೆ. ಆಸ್ತಿಕನಲ್ಲ ಎಂದು ಹೇಳುತ್ತ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ವಚನಗಳ ಸರ್ವಾಂಗವೂ ಜಾತಿ ವ್ಯವಸ್ಥೆಯ ವಿರೋಧ ಹಾಗೂ ಮಹಿಳಾ ಸಮಾನತೆಯ ಪ್ರತಿಪಾದನೆಯೇ


ಕನ್ನಡದ ಖ್ಯಾತ ದಿನಪತ್ರಿಕೆಯಲ್ಲಿ ವಚನ ಸಾಹಿತ್ಯದ ಬಗ್ಗೆ ದೀರ್ಘವಾದ ಚರ್ಚೆಯೊಂದು ನಡೆದುಕೊಂಡು ಬರುತ್ತಿದೆ. ಭಾರತದಲ್ಲಿ ಜಾತಿ ವ್ಯವಸ್ಥೆ ಎಂಬುದೇ ಇರಲಿಲ್ಲ. ವಚನಕಾರರು ಆದ್ಯಾತ್ಮವಾದಿಗಳು. ಅವರು ಜಾತಿವ್ಯವಸ್ಥೆಯನ್ನು ಟೀಕಿಸುವ, ವಿರೋಧಿಸುವ ಪ್ರಶ್ನೆಯೇ ಇಲ್ಲ ಎಂದು ಪ್ರತಿಪಾದಿಸಲು ಹೊರಟಿರುವ ಕೆಲ ವಿದ್ವಾಂಸರ ವಾದದಲ್ಲಿ ಹುರುಳಿಲ್ಲ ಎಂದು ತೋರಿಸುವ ಜಿ.ಎನ್. ನಾಗರಾಜ ಅವರ ಲೇಖನದ ಒಂದು ಭಾಗವಿದು. ವಚನ ಸಾಹಿತ್ಯದಲ್ಲಿ ಶರಣರು ಹೇಗಿರಬೇಕು, ಹೇಗೆ ಬದುಕಬೇಕು ಎಂದು ಪ್ರತಿಪಾದಿಸುವ ಮೂಲಕ ವಚನಕಾರರು ಸಮಾಜದಲ್ಲಿ ಅಮಾನುಷ ಜಾತಿ ವ್ಯವಸ್ಥೆ ಅಸ್ತಿತ್ವದಲ್ಲಿತ್ತು ಎಂಬುದನ್ನು ಖಚಿತಪಡಿಸಿದ್ದಾರೆ ಎಂದು ಲೇಖಕರು ತಮ್ಮ ಲೇಖನದ ಈ ಭಾಗದಲ್ಲಿ ಸ್ಪಷ್ಟಪಡಿಸುತ್ತಾರೆ.

ಜಿ.ಎನ್. ನಾಗರಾಜ್

ಬಸವ ಜಯಂತಿಯ ಈ ಸಂದರ್ಭದಲ್ಲಿ ವಚನ ಚಳುವಳಿಯ ಮೂಲ ತತ್ವಗಳು ಹಾಗೂ ಅದರ ಕ್ರಾಂತಿಕಾರಿ ವಿಚಾರಗಳ ಬಗ್ಗೆ ಒಂದು ಝಲಕ್ . ಕನ್ನಡದ ಜನಪ್ರಿಯ ದಿನ ಪತ್ರಿಕೆ ಪ್ರಜಾವಾಣಿಯಲ್ಲಿ ವಚನ ಚಳುವಳಿಯ ಬಗ್ಗೆ ಒಂದು ದೀರ್ಘ ಚರ್ಚೆ ನಡೆಯುತ್ತಿದೆ. ಅದರಲ್ಲಿ ಬಾಲ ಗಂಗಾ ಧರ್ ಎಂಬ ಜರ್ಮನಿಯ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕರೊಬ್ಬರ ಜೊತೆಗೂಡಿರುವ ಬುದ್ಧಿಜೀವಿಗಳ ತಂಡವೊಂದು ಭಾರತದಲ್ಲಿ ಜಾತಿ ವ್ಯವಸ್ಥೆ ಎಂಬುದೇ ಇಲ್ಲ. ಅದೆಲ್ಲವೂ ಬ್ರಿಟಿಷರ ಸೃಷ್ಟಿ. ವಚನ ಚಳುವಳಿ ಜಾತಿ ವ್ಯವಸ್ಥೆಯ ವಿರುದ್ಧ ದನಿಯೆತ್ತಿದೆ ಎಂಬುದು ಕೂಡ ಬ್ರಿಟಿಷರ ಹಾಗೂ ಅವರ ತೀರ್ಮಾನಗಳನ್ನು ಕುರುಡಾಗಿ ಅನುಸರಿಸುತ್ತಿರುವ ಕನ್ನಡ ವಿದ್ವಾಂಸರ ತಪ್ಪು ತಿಳುವಳಿಕೆ ಎಂದು ಬಲವಾಗಿ ವಾದಿಸುತ್ತಿದ್ದಾರೆ. ಇವುಗಳಿಗೆ ಉತ್ತರವಾಗಿ ಬರೆದ ಲೇಖನದ ಕೆಲ ಭಾಗಗಳನ್ನು ಇಲ್ಲಿ ನೀಡಲಾಗಿದೆ.

ವಚನಗಳಲ್ಲಿ ಕೇವಲ 458 ಮಾತ್ರ ಜಾತಿ, ಕುಲಗಳ ಬಗ್ಗೆ ಪ್ರಸ್ತಾಪಿಸುವಂತೆ ತೋರುತ್ತಿವೆ. ಅದರಲ್ಲಿ ಕೇವಲ 72 ಮಾತ್ರ ಜಾತಿ ವಿರೋಧದ ವಿಚಾರಗಳನ್ನು ಮಂಡಿಸುತ್ತವೆ. ಎಂಬ ಬಗ್ಗೆ ಎರಡೂ ಕಡೆಯಿಂದ ಸಾಕಷ್ಟು ಚರ್ಚೆಯಾಗಿದೆ. ಆದರೆ ಈ 458 ವಚನಗಳು ಯಾವುವು ? ಅದನ್ನು ಯಾವ ಮಾನದಂಡಗಳಿಂದ ಆಯ್ಕೆ ಮಾಡಲಾಗಿದೆ ಎಂಬ ವಿವರಗಳು ನಮಗೆ ಲಭ್ಯವಿಲ್ಲ. ಅದನ್ನು ಎಲ್ಲರಿಗೂ ತನಗೆ ತಾನೆ ಗೊತ್ತಾಗುವ ವಿಷಯವೆಂಬಂತೆ ಪರಿಗಣಿಸಲಾಗುವುದಿಲ್ಲ. ಏಕೆಂದರೆ ಅನೇಕ ವಚನಗಳು ಜಾತಿ, ಕುಲದ ಪ್ರಸ್ತಾಪವನ್ನೇ ಮಾಡದೆ ಜಾತಿ ಬೇದ-ದ ಆಚರಣೆ, ಹಾಗೂ ಅದರ ಹಿಂದಿರುವ ವಿಚಾರ ಭಿತ್ತಿಯನ್ನು ಪ್ರಖರವಾಗಿ ವಿರೋಧಿಸಿವೆ. ಜಾಗದ ಮಿತಿಯಿಂದಾಗಿ ಕೆಲವೇ ಉದಾಹರಣೆಗಳಿಗೆ ಸೀಮಿತವಾಗುತ್ತೇನೆ.

ವಚನ ಸಾಹಿತ್ಯದಲ್ಲಿ ಇದು ಸಾಮಾಜಿಕ ವ್ಯವಸ್ಥೆಗೇನೂ ಸಂಬಂಧವಿಲ್ಲದ ಆಧ್ಯಾತ್ಮವೆಂಬಂತೆ ಕಾಣಿಸುವ ಹಲವು ಪರಿಕಲ್ಪನೆಗಳಿವೆ. ಷಟ್ಭ್ರಮೆ, ಬತ್ತೀಸ ಪಾಶ ಭ್ರಮೆ, ಪಂಚ ಸೂತಕ, ಪಂಚ ಮಹಾ ಪಾತಕ, ಪೂರ್ವ ಸೂತಕ , ಸೂತಕ, ಪೂರ್ವ ಗುಣ, ಪೂರ್ವಾಶ್ರಯ, ಚತುರ್ವಿಧ ಪೂರ್ವಾಶ್ರಯ, ಆಶ್ರಯ, ಪೂರ್ವಾಚಾರ, ಶಿವಾಚಾರ, ಸದಾಚಾರ, ಭೃತ್ಯಾಚಾರ, ತ್ರಿವಿಧಾಚಾರ, ಶೀಲಗಳು, 64 ಶೀಲಗಳು, ಅಷ್ಟ ಮದ, ಅಜಾತ, ಪುನರ್ಜಾತ ಹೀಗೆ ವಚನ ಸಾಹಿತ್ಯದಲ್ಲಿ ನಿರ್ದಿಷ್ಟ ಅರ್ಥವುಳ್ಳ ಹತ್ತು ಹಲವು ಪದಗಳಿವೆ. ಈ ಎಲ್ಲ ಪದಗಳಿಗೂ ವಚನಗಳಲ್ಲಿ, ಅಥವಾ ವಚನ ಸಾಹಿತ್ಯದಲ್ಲಿ ವ್ಯಾಖ್ಯೆಗಳಿವೆ, ಇಲ್ಲಿ ಮೇಲೆ ಹೆಸರಿಲಾದ ಪ್ರತಿಯೊಂದು ಪರಿಕಲ್ಪನೆ, ಹಾಗೂ ಪದಕ್ಕೆ ಜಾತಿ, ಕುಲ ವಿರೋಧಿಯಾದ ಅರ್ಥಗಳಿವೆ.



ಷಟ್ ಭ್ರಮೆಯೆಂದರೆ ಜಾತಿ ಭ್ರಮೆ, ಕುಲ ಭ್ರಮೆ, ವರ್ಣ ಭ್ರಮೆ, ಸೇರಿದಂತೆ ಆರು ಭ್ರಮೆಗಳನ್ನು ಶರಣನಾದವನು ನಿವಾರಿಸಿಕೊಳ್ಳಬೇಕು ಎಂದು ಶಿವಶರಣರನೇಕರು ಒತ್ತಾಯಿಸಿದ್ದಾರೆ. ಈ ಆರು ಸೇರಿದಂತೆ 33 ಭ್ರಮೆಗಳ ಒಂದು ಪಟ್ಟಿಯೇ ಬತ್ತೀಸ ಪಾಶ ಭ್ರಮೆ. ಇನ್ನು ಸೂತಕಗಳ ಬಗ್ಗೆ ಬಹಳ ವ್ಯಾಪಕವಾಗಿ ವಚನಕಾರರು ಪ್ರಸ್ತಾಪಿಸಿದ್ದಾರೆ. ಸೂತಕ ಅಥವಾ ಪಂಚ ಸೂತಕವೆಂದರೆ ಜನನ ಸೂತಕ, ರಜಸ್ಸೂತಕಗಳ ಜೊತೆ-ಗೆ ಜಾತಿ ಸೂತಕ, ಕುಲಸೂತಕ, ಪ್ರೇತ ಸೂತಕಗಳೂ ಸೇರಿದಂತೆ ಇವುಗಳನ್ನು ತ್ಯಜಿಸದವರು ಶರಣರೇ ಅಲ್ಲ ಎಂದು ಪದೇ ಪದೇ ಘೋಷಿಸುತ್ತಾರೆ. ಇನ್ನು ಶಿವಾಚಾರವೆಂದರೆ ಜಾತಿಯನ್ನು ಗಣಿಸದೇ ಅಂಗದ ಮೇಲೇ ಲಿಂಗವಿದ್ದವರೆಲ್ಲಾ ಒಂದೇ ಎಂದು ಭಾವಿಸುವುದು ಎಂದು ಅರ್ಥೈಸಿದ್ದಾರೆ. ಭೃತ್ಯಾಚಾರವೆಂದರೆ ಗುರು, ಜಂಗಮರ ಜಾತಿಯನ್ನು ಪರಿಗಣಿಸದೇ ಅವರ ಸೇವೆ ಮಾಡುವುದು. ಹಾಗೆ ಮಾಡದಿದ್ದವರನ್ನು ವಿಧ ವಿಧವಾಗಿ ಟೀಕಿಸಲಾಗಿದೆ, ವಿರೋಧಿಸಲಾಗಿದೆ. ಈ ಅನೇಕ ವಚನಗಳು ಕೇವಲ ಜಾತಿ ವಿರೋಧಿ ಮಾತ್ರವೇ ಅಲ್ಲ ಮಹಿಳೆಯರ ಸಾಮಾಜಿಕ ಭಾಗವಹಿಸುವಿಕೆಗೆ ಅಡ್ಡಿಯಾಗಿದ್ದ ಕಂದಾಚಾರದ ಕಟ್ಟುಪಾಡುಗಳನ್ನೂ ಏಕಕಾಲಕ್ಕೆ ನಿರ್ಮೂಲ ಮಾಡುವ ವಿಚಾರಗಳಿಗೆ ನಾಂದಿ ಹಾಡಿವೆ.



ತಟ್ಟು, ಮುಟ್ಟು, ತಾಗು ನಿರೋಧ ಎಂಬುದು, ಈ ಮೇಲೆ ಹೇಳಲಾಗಿರುವ ಪಂಚಸೂತಕಗಳಲ್ಲಿನ ಜನನ ಸೂತಕ, ರಜಸ್ಸೂತಕಗಳೊಡನೆ ಜೋಡಿಸಿ ನೋಡಿದ-ರೆ ಮಹಿಳೆಯರನ್ನು ಮೈಲಿಗೆ ಎಂದು ಪರಿಗಣಿಸಿ ಎಲ್ಲ ಸಾಮಾಜಿಕ, ಧಾರ್ಮಿಕ ಕಾರ್ಯಗಳಿಂದ ಹೊರ ಹಾಕಲು ಕಾರಣವಾಗಿದ್ದ ಮೂಲ ಜೈವಿಕ ಕ್ರಿಯೆಗಳ ಮೇಲಿನ ಆರೋಪವನ್ನು ಒಮ್ಮೆಗೇ ತೊಡೆದು ಹಾಕಿರುವುದು ಕಾಣುತ್ತದೆ.

ಇಷ್ಟ ಲಿಂಗ,ಕಾಯಕವೇ ಕೈಲಾಸ,ದೇಹವೇ ದೇಗುಲ, ಗುರು,ಲಿಂಗ, ಜಂಗಮ, ಲಿಂಗಾಂಗ ಸಾಮರಸ್ಯ, ಪಂಚ ವಿಂಶತಿ ತತ್ವಗಳು ಎಂಬ ಆಧ್ಯಾತ್ಮ ವಿಚಾರಗಳು.

ದೊಡ್ಡ ಸಂಖ್ಯೆಯಲ್ಲಿ ವಚನಗಳು ಆಧ್ಯಾತ್ಮ ವಿಚಾರಗಳಿಗೆ ಮಹತ್ವ ನೀಡಿವೆ ಎಂಬ ಈ ತಂಡದ ವಾದ ಸರಿಯಾದದ್ದೇ. ಆದರೆ ಅವರು ತಮ್ಮ ಸಂಶೋಧನೆಯಲ್ಲಿ ಮುಗ್ಗರಿಸಿರುವುದು ಈ ವಿಷಯದ ಬಗ್ಗೆ ಸಂಶೋಧಕರು ತೋರಬೇಕಾದ ವಸ್ತುನಿಷ್ಠತೆ, ಎಚ್ಚರವನ್ನು ಕಾಯ್ದುಕೊಳ್ಳದಿರುವುದರಿಂದಲೇ. ಭಾರತದಲ್ಲಿ ಜಾತಿವ್ಯವಸ್ಥೆ ಎಂಬುದು ಇಲ್ಲವೇ ಇಲ್ಲ. ಅದು ಕೇವಲ ಬ್ರಿಟಿಷರ, ಪಾಶ್ಚಾತ್ಯ ಪ್ರಾಟೆಸ್ಟೆಂಟ್ ದೃಷ್ಟಿಕೋನ. ಈ ಪೂರ್ವಾಗ್ರಹಕ್ಕೆ ಭಾರತೀಯ ಸಂಶೋಧಕರೂ ಬಲಿಯಾಗಿದ್ದಾರೆ ಎಂದು ಆರೋಪಿಸುವ ಅವರು ಅದೇ ರೀತಿ ಭಾರತದಲ್ಲಿ ಜಾತಿವ್ಯವಸ್ಥೆಯೇ ಇಲ್ಲ ಎಂಬ ತಮ್ಮ ಪೂರ್ವಾಗ್ರಹವನ್ನು ಸತ್ಯವೆಂದು ಸಾಧಿಸುವ ಅವಸರಕ್ಕೆ ಬಿದ್ದಿದ್ದಾರೆ ಅದ-ರಿಂದಾಗಿ ಅವರು ವಚನಗಳ ತಾತ್ವಿಕ (ಆಧ್ಯಾತ್ಮ) ಚಿಂತನೆಯ ಒಳಗನ್ನು ಅರ್ಥ ಮಾಡಿಕೊಳ್ಳುವ ಗೋಜಿಗೇ ಹೋಗಿಲ್ಲ. ವಚನಗಳ ಜಾತಿ ವ್ಯವಸ್ಥೆಯ ಕಟು ವಿರೋಧಕ್ಕೂ ಅವರ ತಾತ್ವಿಕ ಚಿಂತನೆಗೂ ಇರುವ ಅವಿನಾಭಾವ ಸಂಬಂಧದ ಬಗ್ಗೆ ಅವರು ಕುರುಡಾದರು. ಈ ಸಂಬಂಧ ಕಣ್ಣಿಗೆ ಹೊಡೆದಂತೆ ಎತ್ತಿ ತೋರುತ್ತಿದ್ದರೂ ಜಾತಿಯ ಬಗ್ಗೆ ಆಧ್ಯಾತ್ಮಿಕ ದೃಷ್ಟಿಯ ಕೆಲ ಟೀಕೆಗಳಿವೆಯಷ್ಟೆ ಹೊರತು ಜಾತಿ ವ್ಯವಸ್ಥೆಯ ವಿರೋಧ ಇಲ್ಲ. ಅದೂ ಕೂಡ ಕೆಲ ಸಾಧಕರಿಗೆ ಉದ್ದೇಶಿಸಿದ್ದಷ್ಟೇ, ಇಡೀ ಜನ ಸಮುದಾಯಕ್ಕಲ್ಲ ಎಂಬ ಆಧಾರವಿಲ್ಲದ ತೀರ್ಮಾನಕ್ಕೆ ಬಂದರು.

ಇಷ್ಟ ಲಿಂಗವೇ ಮೊದಲಾದ ಮೇಲೆ ಹೆಸರಿಸಲಾದ ಪರಿಕಲ್ಪನೆಗಳು ಹಾಗೂ ಜಾತಿ ವಿರೋಧ, ದೇವಾಲಯ ವಿರೋಧ, ಹಾಗೂ ಮಹಿಳಾ ಸಮಾನತೆಯ ಜೊತೆ-ಗೆ ಬೇರ್ಪಡಿಸಲಾಗದಂತೆ ಹೆಣೆದುಕೊಂಡ ಒಂದು ತಾತ್ವಿಕ ಸಮಷ್ಠಿ

ಇಷ್ಟ ಲಿಂಗದ ಪರಿಕಲ್ಪನೆ ಲಿಂಗಾಯತ ಧಾರ್ಮಿಕ ಆಚಾರದ ಜೀವಾಳ ಎಂಬುದನ್ನು ಅವರು ನಿರಾಕರಿಸುತ್ತಾರೆಯೇ ?.ಇದು ಕೇವಲ ಸಾಧಕರಿಗೆ ಮಾತ್ರ ಸೀಮಿತಗೊಳಿಸಿದ ಆಚರಣೆಯೇ

ಪುಟ 10 ಕ್ಕೆ

ವಚನಗಳ ಸರ್ವಾಂಗವೂಜಾತಿ ವ್ಯವಸ್ಥೆಯ...

ಪುಟ 9 ರಿಂದ

ಅಥವಾ ಈ ಮಾರ್ಗವನ್ನು ಅನುಸರಿಸಿದ ಎಲ್ಲರಿಗೂ ಅನ್ವಯವಾಗುವ ಆಚರಣೆ-ಯೇ ? ಇಂದು ಲಿಂಗಾಯತರೆನಿಸಿಕೊಳ್ಳುವ ಎಲ್ಲಜನ ಸಾಮಾನ್ಯರೂ ಕಡ್ಡಾಯವಾಗಿ ಧರಿಸುವ ಇಷ್ಟ ಲಿಂಗದ ಪರಿಕಲ್ಪನೆ ಇಡೀ ದೇಶದಲ್ಲಿ ಎಲ್ಲಿಯೂ ಇಲ್ಲದ ಒಂದು ಅತ್ಯಂತ ಮಹತ್ವದ ಸಾಮಾಜಿಕ ಬದಲಾವಣೆಯ ಸಾಧನವೆಂಬುದನ್ನು ತಮ್ಮ ಸಂಶೋಧನೆಗಳಲ್ಲಿ ಆಳವಾದ ವಿಶ್ಲೇಷಣೆಗೆ ಒಳಪಡಿಸಿಲ್ಲ, ಮಾತ್ರವಲ್ಲ ಒಂದು ರೀತಿಯಲ್ಲಿ ಹೇಳುವುದಾದರೆ ಮರೆಮಾಚಿದ್ದಾರೆ. ವಚನಗಳ ಮಾರ್ಗವನ್ನು ಒಪ್ಪುವವರೆಲ್ಲರೂ ಅವರು ಯಾವುದೇ ಜಾತಿಯರಾಗಿರಲಿ, ಅತ್ಯಂತ ಕೀಳು ಅಸ್ಪೃಶ್ಯ ಜಾತಿಗಳವರಿರಲಿ ತಮ್ಮ ದೇಹದ ಮೇಲೆ ಲಿಂಗವನ್ನು ಧರಿಸಬಹುದೆಂಬ ಯೋಚನೆಯೇ ಅಂದಿನ ಸಮಾಜವೇಕೆ ಇಂದು ಕೂಡ ಎಲ್ಲರನ್ನೂ ಬೆಚ್ಚಿ ಬೀಳಿಸುವಂತಹದು. ಸ್ಥಾವರವಾದ ದೇವಾಲಯಗಳಲ್ಲಿ ಬ್ರಾಹ್ಮಣರ ಹೊರತಾಗಿ ಬೇರೆಯವರಿಗೆ ದೇವರ ಬಳಿ ಗರ್ಭಗುಡಿಯ ಒಳಗೆ ಪ್ರವೇಶ ಕೂಡ ಇಲ್ಲ. ಇತರೆಲ್ಲ ಜಾತಿಯವರಿಗೆ-ದೈವಾಂಶ ಸಹಿತರಾದ ರಾಜರೂ ಸೇರಿದಂತೆ ಹೊರಗಡೆಯೇ ಅವರವರ ಜಾತಿಗನುಗುಣವಾದ ದೂರದಲ್ಲಿ. ಅಸ್ಪೃಶ್ಯರಂತೂ ದೇವಾಲಯದ ಹೊರಗೇ ಎಂಬುದನ್ನಂತು ಬಹಳ ವಿವರಿಸಬೇಕಿಲ್ಲ. ಇಂತಹ ಸಮಾಜದಲ್ಲಿ ಅಸ್ಪೃಶ್ಯರೂ ಸೇರಿದಂತೆ ಎಲ್ಲರೂ ದೇವರ ರೂಪವನ್ನು ದೇಹದ ಮೇಲೆಯೆ ಧರಿಸಬಹುದು ಅದನ್ನೇ ಕೈಯಲ್ಲಿಟ್ಟುಕೊಂಡೇ ಪೂಜಿಸಬಹುದು ಎನ್ನುವುದು ಜಾತಿ ವ್ಯವಸ್ಥೆಯ ಕಂದರಗಳನ್ನು ಒಂದೇ ನೆಗೆತದಲ್ಲಿ ದಾಟುವ ಅಪೂರ್ವ ಆಚರಣೆ. ಆದ್ದರಿಂದಲೇ ಇಷ್ಟ ಲಿಂಗ ಧಾರಣೆ ಹಾಗೂ ಪೂಜೆಯ ಬಗ್ಗೆ ಆ ಪರಿ ಒತ್ತು. ಇದಕ್ಕೆ ಸಂಬಂಧಿಸಿದಂತೆ ದೇವಾಲಯ ನಿರಾಕರಣೆ, ದೇಹವೇ ದೇಗುಲ ಎಂಬ ಪರಿಕಲ್ಪನೆಗಳನ್ನು ವಚನ ಧರ್ಮ ರೂಪಿಸಿತು.

ಇಷ್ಟ ಲಿಂಗ ಪರಿಕಲ್ಪನೆ ಕೇವಲ ಜಾತಿ ವ್ಯವಸ್ಥೆಯ ನಿರ್ಮೂಲನದ ಸಾಧನ ಮಾತ್ರವೇ ಆಗಿರಲಿಲ್ಲ. ಅದು ಮಹಿಳೆಯರಿಗೆ ಸಮಾನತೆಯನ್ನು ಸಾರುವ ಆಚರಣೆ-ಯೂ ಆಗಿತ್ತು. ಇಡೀ ಜೀವಜಾಲದ ಹುಟ್ಟಿಗೇ ಕಾರಣವಾದ ಅವರ ನೈಸರ್ಗಿಕ ದೇಹ ಧರ್ಮವನ್ನೇ - ಮಾಸಿಕ ಅಂಡ ವಿಸರ್ಜನೆಯನ್ನೇ ಅವರನ್ನು ಕೀಳ್ಗಳೆಯುವ, ಪುರುಷಾಧೀನವಾಗಿಸುವ ಸಾಧನವನ್ನಾಗಿ ಮಾಡಿದ ಸನಾತನ ಧರ್ಮದ ಧಿಕ್ಕಾರವೂ ಆಗಿತ್ತು. ಮಹಿಳೆಯರ ಸಮಾನತೆಯನ್ನು ಪ್ರತಿಪಾದಿಸುವ ವಚನಗಳು ಕೂಡ ಜಾತಿ ವ್ಯವಸ್ಥೆಯ ವಿರೋಧದೊಂದಿಗೆ ಈ ಮೂಲಕ ಅಂತರ್ಸಂಬಂಧ ಹೊಂದಿವೆ, ಮೇಲೆ ವಿವರಿಸಿದ ಪಂಚ ಸೂತಕಗಳು - ಜಾತಿ ಸೂತಕ, ರಜಸ್ಸೂತಕ, ಜನನ ಸೂತಕಗಳ ಬಗ್ಗೆ ಒಂದೇ ರೀತಿ ವಿರೋಧಿಸುತ್ತವೆ. ಹಾಗೆಯೇ ಮುಟ್ಟು, ತಟ್ಟು ತಾಗು ನಿರೋಧಗಳು ಜಾತಿ ಬೇಧ, ಲಿಂಗ ಬೇಧಗಳನ್ನು ಅವುಗಳ ನಡುವೆ ವ್ಯತ್ಯಾಸನ್ನು ಎಣಿಸದೆ ಏಕ ಕಾಲಕ್ಕೆ ತೊಲಗಿಸುವ ಪರಿಕಲ್ಪನೆಗಳು. ವ್ರತ, ಉಪವಾಸಗಳನ್ನು ವಿರೋಧಿಸಿದ್ದು ಇದೇ ರೀತಿ ಮಹಿಳೆಯರ ಸಮಾನತೆಯನ್ನು ಪ್ರತಿಪಾದಿಸುವುದರ ಭಾಗವೇ ಆಗಿದೆ. ಪುರುಷ-ಸ್ತ್ರೀಯರಿಗೆಲ್ಲರಿಗೂ ಒಂದೇ ರೀತಿಯ ಲಿಂಗ ಧಾರಣೆ, ಪೂಜಾ ವಿಧಾನಗಳು.

ಇನ್ನು ಏಕ ದೇವೋಪಾಸನೆ, ವಿಷ್ಣು ಮೊದಲಾದ ಮೇಲ್ಜಾತಿಯ ದೇವರುಗಳನ್ನು ಪೂಜಿಸುವುದನ್ನು ವಿರೋಧಿಸಿದ್ದು, ಕೀಳು ದೈವಗಳ ಪೂಜೆಯನ್ನು ಭಂಗಿಸಿದ್ದು ಕೂಡ ಸಮಾಜದಲ್ಲಿ ಜಾತಿಯನ್ನು ಮೀರಿದ ಸಮಾನತೆಯನ್ನು ಸಾಧಿಸುವುದರ ಭಾಗವೇ ಆಗಿದ್ದುವು.

ಇನ್ನು ಬಾಲಗಂಗಾಧರ್ ತಂಡದವರು ಆಧ್ಯಾತ್ಮ ಎನ್ನುವುದರಲ್ಲಿ ಏನೇನನ್ನು ಸೇರಿಸಿಕೊಳ್ಳುತ್ತಾರೋ ಅವರಿಗೇ ಗೊತ್ತು. 'ಕಾಯಕವೇ ಕೈಲಾಸ' ಎಂಬುದಂತೂ ಎಲ್ಲ ತತ್ವದ ತಳಪಾಯ ಎಂಬುದು ವಚನಗಳಲ್ಲಿ ಮತ್ತೆ ಮತ್ತೆ ಎತ್ತಿ ತೋರಿಸಿದ ತತ್ವ. ಇದೂ ಕೂಡ ಜಾತಿಗಳ ನಡುವೆ ಸಮಾನತೆಯನ್ನು ಪ್ರತಿಪಾದಿಸುವ ತತ್ವ ಎಂದು ಈಗಾಗಲೇ ಸಾಹಿತಿಗಳು ಈ ಚರ್ಚೆಯಲ್ಲಿ ಮಂಡಿಸಿದ್ದಾರೆ. ಆದರೆ ಕೀಳು ಕರ್ಮಗಳು ಎಂದು ವೈದಿಕ ಧರ್ಮ ಪ್ರತಿಪಾದಿಸಿದ ಅನೇಕ ಕುಶಲ ಕರ್ಮಗಳ ಉಪಕರಣಗಳೇ ಪೂಜೆಯ ಹಾಗೂ ವಚನಗಳ ತತ್ವಗಳನ್ನು ಸಾರುವ ಸಾಧನಗಳಾದವು. "ನಾ ತಿರುಹುವ ರಾಟೆಯ ಕುಲ ಜಾತಿಯ ಕೇಳಿರಣ್ಣಾ ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು, ನಿಂದ ಬೊಂಬೆ ಮಹಾರುದ್ರ" ಎಂದು ವರ್ಣಿಸುವ ಕದಿರ ರೆಮ್ಮವ್ವೆ ಅದನ್ನು ಸುತ್ತುವುದೇ ಪೂಜೆ ಎಂಬ ಭಾವವನ್ನು ಬಿಂಬಿಸುತ್ತಾಳೆ. ಮಾದಾರ ಚೆನ್ನಯ್ಯನೂ ತನ್ನ ವಚನವೊಂದರಲ್ಲಿ

ಆಗು ಚೇಗೆಯೆಂಬ ದಡಿಗೋಲಿನಲ್ಲಿ
ಅಗಡದ ಎಮ್ಮೆಯ ಚರ್ಮವ ತೆಗೆದು,
ಉಭಯನಾಮವೆಂಬ ನಾರಿನಲ್ಲಿ
ತಿತ್ತಿಯನೊಪ್ಪವ ಮಾಡಿ
ಭಾವವೆಂಬ ತಿಗುಡಿನಲ್ಲಿ ಸರ್ವಸಾರವೆಂಬ ಖಾರದ ನೀರ ಹೊಯಿದು,

ಅತ್ಯಂತ ಕೀಳು ಎಂದು ಭಾವಿಸಲಾದ ಚರ್ಮ ಅದರಲ್ಲಿಯೂ ಎಮ್ಮೆಯ ಚರ್ಮ ಹದಮಾಡುವ ಕಾಯಕದ ರೂಪಕಗಳನ್ನೇ ಉಪಯೋಗಿಸಿ ತಾನು ಅರಗಿಸಿಕೊಂಡ ವಚನ ಚಳುವಳಿಯ ತತ್ವಗಳನ್ನು ಮುಂದಿಡುತ್ತಾನೆ. ಇಂತಹದೊಂದು ಸಂಭವ ಬೇರೇ ಯಾವ ಆಧ್ಯಾತ್ಮದ ಮಾರ್ಗಗಳಲ್ಲಿಯಾದರೂ ಕಾಣಬಹುದೇ ? ಈ ವಚನ ಖಂಡಿತವಾಗಿಯೂ ಈ ತಂಡದ ಲೆಕ್ಕಾಚಾರಕ್ಕೆ ಒಳಪಡುವುದಿಲ್ಲ. ಏಕೆಂದ-ರೆ ಇಲ್ಲಿ ಜಾತಿ, ಕುಲ ಎಂಬ ಶಬ್ದಗಳೂ ಇಲ್ಲ ಜಾತಿ ವಿರೋಧ ಎಂಬ ಭಾವವೂ ಇಲ್ಲ, ಆದರೂ ಇದು ಜಾತಿ ವಿರೋಧದ ಬಗೆಗಿನ ಪ್ರಬಲ ರೂಪಕವಾಗುತ್ತದೆ. ಸಿಪ್ಪೆಯ ಲೆಕ್ಕಾಚಾರ ಮಾಡಿ ತಿರುಳನ್ನು ಎಸೆಯುವವರಿಗೆ ಇದು ಅರ್ಥವಾಗುವ ಬಗೆ ಹೇಗೆ ? ಅವರು ಸಿಪ್ಪೆಯನ್ನೇ ತಾವೂ ತಿಂದು ನಮಗೂ ತಿನ್ನಿಸ ಬಯಸಿ ಈ ಹಣ್ಣು ಕಳಪೆ ಎಂದು ಹೆಸರಿಡ ಬಯಸುವವರು ಎಂದೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

'ಕಾಯಕವೇ ಕೈಲಾಸ', ಅದೇ ಯಾತ್ರೆ, ಜಾತ್ರೆ ಎನ್ನುವ ವಚನ ಧರ್ಮ ಕಾಯಕ-ಕ್ಕೆ ಆಧಾರವಾದ ಕಾಯಕ್ಕೆ ಬಹಳ ಪ್ರಾಮುಖ್ಯತೆಯನ್ನು ನೀಡುತ್ತದೆ. ಕಾಯವೇ ಕೈಲಾಸ-ದೇಹವೇ ದೇಗುಲ ಎನ್ನುತ್ತದೆ. ಈ ವಿಚಾರವನ್ನು ಹೇಳುವ ಅನೇಕ ವಚನಗಳಿವೆ. ಅದನ್ನು ಲೆಕ್ಕ ಹಾಕಿ ಹತ್ತಿಪ್ಪತ್ತು ಮಾತ್ರ ಎಂದು ಹೇಳಬಹುದು. ಆದರೆ ಇಷ್ಟ ಲಿಂಗ ಕಲ್ಪನೆಯ ಮೂಲವೇ ಈ ದೇಹ ತತ್ವ ಎಂದು ಈ ತಂಡಕ್ಕೆ ಅರಿವಾಗದೇ ಹೋದದ್ದು, ಜಾತಿ ವ್ಯವಸ್ಥೆಯ ವಿರೋಧಕ್ಕೂ ಈ ದೇಹ ತತ್ವಕ್ಕೂ ಬಿಡಿಸಲಾಗದ ಸಂಬಂಧವಿದೆ ಎಂಬ ಬಗ್ಗೆ ಅನ್ವೇಷಣೆ ಮಾಡದೇ ಇದ್ದದ್ದು ಜಾಣ ಕುರುಡೋ ಅಥವಾ ನಿಜವಾದ ಕುರುಡೋ ಎನ್ನುವದನ್ನೂ ಕಾಯವೇ ಕೈಲಾಸ ಎಂಬ ವಿಷಯ ವಚನ ಧರ್ಮದ ಪ್ರಧಾನ 'ಆಧ್ಯಾತ್ಮಿಕ' ತತ್ವವಾದ ಲಿಂಗಾಂಗ ಸಾಮರಸ್ಯದ ಆಧಾರವಾಗಿದೆ. ಈ ತತ್ವವನ್ನು ಪ್ರಸ್ತಾಪಿಸುವ ವಚನಗಳು ಎಷ್ಟು ಸಾವಿರ ಸಂಖ್ಯೆಯಲ್ಲಿ ಇವೆ ಎಂಬುದನ್ನು ಈ ಸಂಶೋಧಕರ ತಂಡ ಲೆಕ್ಕ ಹಾಕಲಿ. ಬಗ್ಗೆಲಿಂಗ ಮತ್ತು ಅಂಗದ ನಡುವೆ ಸಾಮರಸ್ಯ ಎಂಬುದೇ, ಈ ಮಾನವ ದೇಹ ಮೈಲಿಗೆಯದು, ಅದನ್ನು ಜಪ,ತಪ ವ್ರತ ಉಪವಾಸಗಳಿಂದ ದಂಡಿಸಿ, ಸೊರಗಿಸಿ ದೈಹಿಕ ಬಯಕೆಗಳನ್ನು ಅಣಗಿಸಬೇಕು ಅದುವೇ ಮುಕ್ತಿಯ ಮಾರ್ಗ ಎಂಬ ಅಂದಿನ ಸಂದರ್ಭದಲ್ಲಿ, ಅತ್ಯಂತ ಮಹತ್ವದ ವಿಷಯ. ಅದೇ ಸಮಯದಲ್ಲಿ ಕಾಯಕವೇ ಕೈಲಾಸ ಎಂಬ ವಚನಗಳ ಮೂಲ ತತ್ವಕ್ಕೆ ಅತಿ ಅಗತ್ಯವಾದ ವಿಚಾರ.

ಈ ಲಿಂಗಾಂಗ ಸಾಮರಸ್ಯ ಎಂಬ ತತ್ವಕ್ಕೆ ಮೂಲಾಧಾರ 36 ತತ್ವ ಅಥವಾ ಷಟ್ ...... ಎಂಬ ತತ್ವ ಸಮೂಹ. ಇವುಗಳಲ್ಲಿ ಅಂಗ ತತ್ವಗಳು 24 ಲಿಂಗ ತತ್ವ 12 ಸೇರಿ 36 ತತ್ವಗಳು. ಇವು ಹಲವು ಬಾರಿ ನೇರವಾಗಿ ಅಥವಾ ಬೆಡಗಿನ ವಚನಗಳಲ್ಲಿ ಪ್ರಸ್ತಾಪಿಸಲ್ಪಟ್ಟ ತತ್ವಗಳು. ಅಂಗ ತತ್ವಗಳು ಲಿಂಗ ತತ್ವಗಳೊಡನೆ ಬೆರೆಯುವುದೇ ವಚನಗಳು ಪದೇ ಪದೇ ವಿವರಿಸುವ ಐಕ್ಯ ಸ್ಥಿತಿ, ಇದೇ ಷಟ್ಸ್ಥಲ ಮಾರ್ಗದ ಗುರಿ, ಅದರ ಅಂತಿಮ ಹಂತವಾದ ಐಕ್ಯ ಸ್ಥಲ. ಇದನ್ನೇ ವಚನಗಳ ಆಧ್ಯಾತ್ಮ, ಅವುಗಳ ಮೂಲ ಆಶಯ. ಜಾತಿ ವ್ಯವಸ್ಥೆಯ ವಿರೋಧವಲ್ಲ ಎಂದು ಬಾಲಗಂಗಾಧರ್ ವಿವರಿಸುತ್ತಾ ಎಲ್ಲರ ಕಣ್ಣಿಗೆ ಮಣ್ಣು ತೂರಲು ಬಳಸುತ್ತಿರುವುದು.

ಲಿಂಗಾಂಗ ಸಾಮರಸ್ಯವೆಂಬ ತತ್ವಕ್ಕೂ, ಈ 36 ತತ್ವಗಳಿಗೂ, ಲಿಂಗೈಕ್ಯ ಸ್ಥಿತಿಗೂ ಇರುವ ಸಂಬಂಧದ ವಿಷಯ ವಚನಗಳ ಬಗ್ಗೆ, ಅವುಗಳ ಸಾಮಾಜಿಕ ಕಾಳಜಿಯ ಬಗ್ಗೆ ವಿಪುಲವಾಗಿ ಬರೆದಿರುವ ಸಾಹಿತಿಗಳ ಬರಹದಲ್ಲಿಯೂ ಕಾಣುವುದಿಲ್ಲ. ವೀರಶೈವ ಧಾರ್ಮಿಕ ಸಿದ್ಧಾಂತಗಳ ಕೆಲ ಪರಿಣ-ತರು ಮಾತ್ರ ಈ ವಿಷಯದ ಬಗ್ಗೆ ಅಧ್ಯಯನ ಮಾಡಿದ್ದರೂ ಅವರು ವಚನಗಳ ಸಾಮಾಜಿಕ ಅಂಶಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಹೀಗಾಗಿ ಈ ತತ್ವಗಳಿಗೂ ವಚನಗಳ ಜಾತಿ ವ್ಯವಸ್ಥೆಯ ಬಗೆಗಿನ ತೀವ್ರವಿರೋಧಕ್ಕೂ ಹಾಗೂ ಮಹಿಳಾ ಸಮಾನತೆಯ ಪ್ರತಿಪಾದನೆಗೂ ಇರುವ ಗಾಢ ಸಂಬಂಧದ ಬಗ್ಗೆ ಸಂಶೋಧನೆ ನಡೆದೇ ಇಲ್ಲವೆನ್ನಬಹುದು. ಈ ಬಗ್ಗೆ ಸ್ವಲ್ಪ ಗಮನ ನೀಡಿದ್ದವರು ಅಪರೂಪದ ವಿದ್ವಾಂಸ ಎಲ್ ಬಸವರಾಜ್‌ರವರು. ಅವರು ಮರೆಯಾಗಿ ಈ ತೆರನ ವಿದ್ವಾಂಸ ಪರಂಪರೆಯೇ ನಷ್ಟವಾಯಿತೇನೋ ಎಂಬಂತಾಗಿದೆ.ಹೀಗಾಗಿ ಬಲಗಂಗಾಧರ್ ತಂಡವೂ ಅಜ್ಞಾನ ಜನ್ಯವಾದ ಮೊಂಡು ಧೈರ್ಯದಿಂದ ಜಾತಿ ವ್ಯವಸ್ಥೆ ಎಂಬುದು ಅಸ್ತಿತ್ವದಲ್ಲಿಯೇ ಇರಲಿಲ್ಲ ಎಂದು ಸಮರ್ಥಿಸಿಕೊಳ್ಳಲು ಇಂತಹ ಕಳಪೆ ವಾದಗಳನ್ನು ಮಂಡಿಸಲು ಸಾಧ್ಯವಾಗಿದೆ.

ಅಂಗ ತತ್ವಗಳೆಂಬ 24 ತತ್ವಗಳು ಐದು ಪಂಚೇಂದ್ರಿಯಗಳು ಅಥವಾ ಜ್ಞಾನೇಂದ್ರಿಯಗಳಾದ ನಯನ, ಶ್ರೋತ್ರ, ಘ್ರಾಣ, ಜಿಹ್ವೆ, ತ್ವಕ್ಕು ಅವುಗಳ ವಿಷಯಗಳಾದ ರೂಪ, ರಸ, ಗಂಧ, ಶಬ್ದ, ಸ್ಪರ್ಶ ಎಂಬ ತನ್ಮಾತ್ರಗಳು, ಪಂಚ ಕರ್ಮೇಂದ್ರಿಯಗಳೆಂದು ಹೆಸರಿಸಲ್ಪಟ್ಟ ವಾಕ್, ಪಾಣಿ, ಪಾದ ಗುದ, ಗುಹ್ಯ; ಪಂಚ ಭೂತಗಳಾದ ಪೃಥ್ವಿ, ಅಪ್ಪು, ತೇಜಸ್, ಮರುತ, ಆಕಾಶ; ಚತುರ್ವಿಧ ಕರಣಗಳಾಧ ಮನ, ಬುದ್ಧಿ, ಚಿತ್ತ ಅಹಂಕಾರ ಇವೆಲ್ಲವೂ ಜೀವದ, ಇಹ ಜೀವನದ ಅಂಗಗಳು. ಪಂಚೇಂದ್ರಯಗಳ ಬಗ್ಗೆ ವಚನಗಳ ಭಾಷೆಯಲ್ಲಿಯೇ ಹೇಳುವುದಾದರೆ 'ಈ ಐದರಿಂದೆ ನಡೆವುದು ಲೋಕಂಗಳೆಲ್ಲ.' ಈ ತತ್ವಗಳ ಬಗ್ಗೆ ವಚನಗಳು ಅನೇಕ ಬಾರಿ ಒಟ್ಟಾಗಿಯೂ, ಪ್ರತ್ಯೇಕ ಐದು ಗುಂಪುಗಳಾಗಿಯೂ ಪ್ರಸ್ತಾಪಿಸುತ್ತವೆ.

ಈ ಅಂಗ ತತ್ವಗಳು ಜಾತಿ, ಲಿಂಗ ಬೇಧಗಳನ್ನು ಮೀರಿ ಮಾನವ ಜೀವಿಗಳೆಲ್ಲರಿಗೂ ಸಮಾನವೆಂಬುದನ್ನು ವಚನಗಳು ಗುರುತಿಸುತ್ತವೆ. ಇದೇ ಜಾತಿ ವ್ಯವಸ್ಥೆಯನ್ನು, ಲಿಂಗ ಬೇಧವನ್ನು ವಚನ ಧರ್ಮ ವಿರೋಧಿಸಲು ತಾತ್ವಿಕ ಆಧಾರ. ಅವುಗಳಲ್ಲಿ ಒಂದು ಚೆನ್ನಬಸವಣ್ಣನವರ ವಚನ ಹೇಳುವಂತೆ


ಧರೆಗೆ ಸೂತಕವುಂಟೇ? ವಾರಿಧಿಗೆ ಹೊಲೆಯುಂಟೇ?
ಉರಿವ ಅನಲಂಗೆ ಜಾತಿಬೇಧವುಂಟೇ?
ಹರಿದು ಚರಿಸುವ ಅನಿಲಂಗೆ ಸೀಮೆಯುಂಟೇ?
ಆಕಾಶಕ್ಕೆ ದರಿ ಮೇರೆಯುಂಟೇ ?
ಇನಿತರಿಂದಲೊದಗಿದ ಘಟವನು ಆರು ಹೊಲ್ಲೆಂಬರು?

ಹೀಗೆ ಯಾವ ಪಂಚಭೂತಗಳಿಗೂ ಜಾತಿ ಬೇಧವಿಲ್ಲದಿರುವಾಗ ಈ ಪಂಚ ಭೂತಗಳಿಂದಾದ ಶರೀರಕ್ಕೆ ಜಾತಿ

ಸವರ್ಣೀಯರ ದೌರ್ಜನ್ಯ ದಿಂದ ದಲಿತ ಮಹಿಳೆಯ ಕೊಲೆ

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಹನುಮಸಾಗರ ಹೋಬಳಿಯ ಹುಚನೂರ ಗ್ರಾಮದಲ್ಲಿ ಇದೇ ಮೇ 13 ರಂದು ಭಯದ ವಾತಾವರಣ ನಿರ್ಮಾಣವಾಗಿತ್ತು. ಮಹಿಳೆಯೊಬ್ಬಳ ಕೊಲೆಯಾಗಿತ್ತು. ಬಸವ ಜಯಂತಿಯ ಪ್ರಯುಕ್ತ ಹುಚನೂರು ಗ್ರಾಮದಲ್ಲಿ ಸಾಮೂಹಿಕ ವಿವಾಹ ಏರ್ಪಡಿಸಲಾಗಿತ್ತು. ಸಾಮೂಹಿಕ ವಿವಾಹವೆಂದ ಮೇಲೆ ಧ್ವನಿ ವರ್ಧಕ ಇಲ್ಲದೆ ಇದ್ದರೆ ಹೇಗೆ? ಎಂದು ಕೆಟ್ಟಿದ್ದ ಧ್ವನಿ ವರ್ಧಕವನ್ನು ರಿಪೇರಿ ಮಾಡಲೆಂದು ಆನಂದ ಪೂಜಾರಿ ಗುಡಿಯೊಳಗೆ ಪ್ರವೇಶ ಮಾಡಿದ್ದಾರೆ. ಆನಂದ ಗುಡಿಯೊಳಗೆ ಪ್ರವೇಶಿಸಿದ್ದನ್ನು ಸಹಿಸದ ಆ ಗ್ರಾಮದ ಲಿಂಗಾಯಿತ ಸಮುದಾಯಕ್ಕೆ ಸೇರಿದವರಾದ ಗಣೇಶ್ ತುರುಮುರಿ, ಬಸವರಾಜ ತುರುಮುರಿ, ಪುರನಗೌಡ ಮಾಲಿ ಪಾಟೀಲ್ ಎಂಬುವವರು ಆಕ್ಷೇಪ ವ್ಯಕ್ತಪಡಿಸಿ ಹಲ್ಲೆಗೆ ಮುಂದಾಗಿದ್ದಾರೆ. ಈ ಸುದ್ದಿ ತಿಳಿದ ಆನಂದನ ತಾಯಿ ನೀಲಮ್ಮ ಪೂಜಾರಿ ಓಡೋಡಿ ದೇವಸ್ಥಾನದ ಹತ್ತಿರ ಬಂದು 'ನನ್ನ ಮಗನನ್ನು ಹೊಡಿಬ್ಯಾಡ್ರಿ ಅವನೇನು ತಪ್ಪುಮಾಡಿಲ್ಲ' ಎಂದು ಬಿಡಿಸಿಕೊಳ್ಳಲು ಮುಂದಾಗಿದ್ದಾಳೆ. ಮಗನನ್ನು ಬಿಡಿಸಲು ಬಂದ ನೀಲಮ್ಮಳ ಎದೆಯ ಮೇಲೆ ಈ ಮೂವರು ಗುದ್ದಿದ್ದಾರೆ. ದೈಹಿಕ ಹಲ್ಲೆ ನಡೆಸಿದ್ದಾರೆ. ತೀವ್ರ ಅಸ್ವಸ್ಥಳಾದ ನೀಲಮ್ಮನನ್ನು ಮಗ ಆನಂದ ಪಕ್ಕದ ಹುನಗುಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಗೆಂದು ಸೇರಿಸಿದ್ದಾರೆ. ಆದರೆ ತೀವ್ರವಾದ ಹಲ್ಲೆ ಮತ್ತು ಎದೆಗೆ ಗುದ್ದಿದ್ದರಿಂದ ನೀಲಮ್ಮ ಚೇತರಿಸಿಕೊಳ್ಳಲಾಗದೆ ಕೊನೆಯುಸಿರೆಳೆದಳು.

ಘಟನೆಗೆ ಸಂಬಂಧಿಸಿದಂತೆ ಹನಮ ಸಾಗರ ಪೊಲೀಸ್ ಠಾಣೆಯಲ್ಲಿ ಐಪಿಸಿ



302, 109, 341, 323, 504 ಮತ್ತು ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಕೇಸ್ ದಾಖಲಾಗಿದ್ದು ಘಟನೆಗೆ ಸಂಬಂಧ ಪಟ್ಟಂತೆ 3ಜನ ಆರೋಪಿಗಳನ್ನು ಬಂಧಿಸಲಾಗಿದೆ. ಕೆಲ ವರ್ಷಗಳ ಹಿಂದೆ ಈ ಮೂವರು ಆನಂದನ ಅಣ್ಣನಿಗೆ ಅಕ್ಸಿಡೆಂಟ್ ಮಾಡಿದ್ದರಂತೆ. ಇದನ್ನು ಖಂಡಿಸಿ ಆನಂದ ಆಗ ಪ್ರತಿಭಟಿಸಿದ್ದನಂತೆ. ಇದನ್ನು ಸಹಿಸದೆ ಆನಂದನ ಮೇಲೆ ಆರೋಪಿಗಳು ದ್ವೇಷ ಸಾಧಿಸುತ್ತಿದ್ದರು ಎನ್ನಲಾಗಿದೆ. ಈ ಘಟನೆಯನ್ನು ಖಂಡಿಸಿ ದಲಿತ ಸಂಘಟನೆ ಮತ್ತು ಪ್ರಗತಿಪರ ಸಂಘಟನೆಗಳು ಪ್ರತಿಭಟನೆ ನಡೆಸಿ ದಲಿತ ಕುಟುಂಬಗಳಿಗೆಗೆ ರಕ್ಷಣೆ ನೀಡಬೇಕು. ಮೃತರ ಕುಟುಂಬಕ್ಕೆ 10 ಲಕ್ಷರೂ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿವೆ. ದಲಿತ ಸಂಘರ್ಷ ಸಮಿತಿಯ ಸದಸ್ಯರು ಬೆಂಗಳೂರಿನ ಪುರಭವನದ ಮುಂದೆ ಪ್ರತಿಭಟನೆ ನಡೆಸಿ ಮುಖ್ಯ ಮಂತ್ರಿಯವರ ಜಂಟಿ ಕಾರ್ಯದರ್ಶಿಗೆ ಮನವಿ ನೀಡಿದ್ದು, ಅವರು ಕ್ರಮ ಕೈಗೊಳ್ಳವಂತೆ ಕೊಪ್ಪಳ ಜಿಲ್ಲಾಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ ಎನ್ನಲಾಗುತ್ತಿದೆ. ಈ ಘಟನೆ ರಾಜ್ಯದಲ್ಲಿ ದಲಿತರಿಗೆ ಸೂಕ್ತ ರಕ್ಷಣೆ ಇಲ್ಲ ಎಂಬುದನ್ನು ತೋರಿಸಿ ಕೊಡುತ್ತದೆ. ಗುಡಿ ಪ್ರವೇಶಿಸಿದ ದಲಿತನ ಮೇಲೆ ಹಲ್ಲೆ ನಡೆದು ಅವರ ತಾಯಿಯ ಕೊಲೆ ನಡೆದಿರುವುದು ಅಮಾನವೀಯ ಕೃತ್ಯವಾಗಿದ್ದು ದಲಿತರಿಗೆ ದೇವಸ್ಥಾನ ಪ್ರವೇಶಿಸುವ ಹಕ್ಕನ್ನು ಸಾರ್ವತ್ರಿಕವಾಗಿ ಜಾರಿಮಾಡಲು ನೂತನ ರಾಜ್ಯ ಸರ್ಕಾರ ಕ್ರಮಕೈಗೊಳ್ಳಬೇಕು.

– ಗುರುರಾಜ ದೇಸಾಯಿ.

ನೀವು 'ಜನಶಕ್ತಿ'ಯ ಚಂದಾದಾರರೇ? ಏಜೆನ್ಸಿದಾರರೇ? ದಯವಿಟ್ಟು ಗಮನಿಸಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸ ತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ,
c/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027
email : janashakthi13.admn@gmail.com
Phone : 22234369
ಹೆಚ್.ಆರ್.ಸವಿತ ರಾಣಿ : 9483966467,
ಜಿ.ಚಂದ್ರಶೇಖರ್ : 9448578021
(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

→

ಎತ್ತಣದು? ಇದಕ್ಕಿಂತ ಸಮರ್ಥವಾದ ಪ್ರೂಫ್ ಬೇರೆ ಬೇಕೆ?

ಅಂಗದಲ್ಲಿ ಲಿಂಗವೇ ಪ್ರಕಾಶಿಸುತ್ತಿದೆ

ಈ ದೇಹ ಪಂಚ ಭೂತಗಳಿಂದಾದುದು. ಈ ಪಂಚ ಭೂತಗಳೇ ಮುಂದೆ ವಿವಿಧ ಅಂಗಗಳ ಬೆಳವಣಿಗೆಯನ್ನು ಮಾಡಿದವು. ಅಂದರೆ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಅವುಗಳ ವಿಷಯಗಳಾದ ತನ್ಮಾತ್ರೆಗಳ ಬೆಳವಣಿಗೆಗೆ ಕೊನೆಗೆ ಮನ, ಬುದ್ಧ, ಚಿತ್ತ, ಅಹಂಕಾರಗಳ ಬೆಳವಣಿಗೆಗೆ ಕಾರಣವಾದುವು ಈ ಎಲ್ಲದರಲ್ಲಿಯೂ ಪ್ರಕಾಶಿಸುತ್ತಿರುವುದು ಲಿಂಗವೇ. ಈ ಎಲ್ಲ ಕೆಲಸಗಳ ಮೂಲಕ ಈ ಜೀವನವನ್ನು ಅನುಭವಿಸುತ್ತಿರುವುದು ಲಿಂಗವೇ.

ವಿವಿಧ ಭಕ್ಷ್ಯ ಭೋಜನಗಳಿಂದ ಸುಖ ಪಡುವುದು ಲಿಂಗವೇ. ಆದ್ದರಿಂದಲೇ ವಚನಗಳು ಊಟವನ್ನು ಪ್ರಸಾದವೆಂದು ಕರೆದು ಅದಕ್ಕೆ ಬಹಳ ಮಹತ್ವವನ್ನು ನೀಡಿವೆ. ಇದರ ಬಗ್ಗೆಯೇ ಅನೇಕ ವಚನಗಳು ಮೀಸಲಾಗಿವೆ. ಬೇರೆಲ್ಲ ಸಂಪ್ರದಾಯಗಳಲ್ಲಿಯೂ ಪ್ರಸಾದವೆಂಬ ಮಾತಿದೆ. ಅದು ದೇವರಿಗೆಂದು ಅರ್ಪಿಸಿದ [illegible]ದ ಪದಾರ್ಥಗಳಿಗೆ ಸಂಬಂಧಿಸಿದ್ದು. ಅದನ್ನ ಭಕ್ತಿಯಿಂದ ಕಣ್ಣಿಗೊತ್ತಿಕೊಂಡು ತಿಂದರಾಯಿತು. ಇನ್ನುಳಿದಂತೆ ನೀವು ಊಟ ಮಾಡುತ್ತೀರಿ. ಆದರೆ ವಚನಗಳಲ್ಲಿ ನೀವು ತಿನ್ನುವುದೆಲ್ಲವೂ ಪ್ರಸಾದವೇ. ಏಕೆಂದರೆ ನೀವು ಊಟ ಮಾಡುವ ಮೂಲಕ ನಿಮ್ಮ ಶರೀರದಲ್ಲಿ ಅಡಗಿರುವ ಲಿಂಗಕ್ಕೆ ತಿಂದುದೆಲ್ಲವನ್ನೂ ಸಮರ್ಪಿಸುತ್ತೀರಿ. ಆದ್ದರಿಂದ ಐದು ಸ್ಥಲಗಳಲ್ಲಿ ಪ್ರಸಾದಿ ಸ್ಥಲ ಮೂರನೇ ಸ್ಥಲವಾಗಿ ಬಹಳ ಮಹತ್ವವನ್ನು ಪಡೆಯುತ್ತದೆ. ಇದು ಕೂಡ ಕಾಯಕ ಜೀವಿಗಳಿಗೆ ಸ್ವಾಭಾವಿಕವೇ. ಕಾಯಕಕ್ಕೆ ಕಾಯ ಗಟ್ಟಿ ಮುಟ್ಟಾಗಿರುವುದು ಬಹಳ ಮುಖ್ಯವಲ್ಲವೇ. ಕಾಯಕವೇ ಕೈಲಾಸವಾದರೆ ತಿನ್ನುವ ಊಟವೆಲ್ಲಾ ಪ್ರಸಾದವಾಗುತ್ತದೆ. ಆದ್ದರಿಂದ ಊಟವನ್ನು ಮಾಡಬೇಕು. ಊಟವನ್ನು ನೀಡಬೇಕು. ದಾಸೋಹ ಎಂಬ ತತ್ವಕ್ಕೆ ಪ್ರಾಮುಖ್ಯತೆ ಬಂದದ್ದು ಅದರಿಂದಲೇ.

ಈ ಅಂಗತತ್ವಗಳು ಮಾತ್ರವಲ್ಲ ಶರೀರವನ್ನು ರಚಿಸಿರುವ ಮಾಂಸಖಂಡಗಳು, ಮೂಳೆ. ಹರಿಯುವ ರಕ್ತ, ನರಜಾಲ ಹೀಗೆ ಎಲ್ಲ ಭಾಗಗಳೂ ಲಿಂಗವೇ. ಎಲ್ಲವೂ ವಿವಿಧ ಪಂಚಭೂತಗಳ ಸೃಷ್ಟಿಯೇ. ಉದಾಹರಣೆಗೆ ಮಾಂಸ, ಮೂಳೆ ಪೃಥ್ವಿಯ ಅಂಶವಾದರೆ ರಕ್ತ ಮತ್ತಿತರ ದ್ರವಗಳು ಅಪ್ಪು (ನೀರು) ತತ್ವದಿಂದಾದುದು. ಈ ಎಲ್ಲವೂ ಲಿಂಗವೇ. ಯಾವುದೂ ನೀಚವಲ್ಲ, ಹೊಲೆಯಲ್ಲ. ಹೀಗೆ ಮಾನವ ಪ್ರಕೃತಿಯನ್ನೇ ಪ್ರಧಾನ ಮಾಡಿದ, ಅಂಗವೇ ಲಿಂಗವಾದ ಆದ್ದರಿಂದ ಅಂಗವನ್ನು ಗೌರವಿಸಿ ಅದರ ಮೇಲೆ ಲಿಂಗವನ್ನು ಪ್ರತಿಷ್ಠಾಪನೆ ಮಾಡಿದ್ದು ವಚನಗಳ ಚಿಂತನೆಯ ಶ್ರೇಷ್ಟತೆ.

ಚೆನ್ನಬಸವಣ್ಣನವರ ಈ ವಚನದ ಭಾವವನ್ನು ಗಮನಿಸಿ.:

ಶ್ರೋತ್ರಕ್ಕೂ ವಾಕ್ಕಿಗೂ, ಶಬ್ದಕ್ಕೂ ವಚನಕ್ಕೂ, ತ್ವಕ್ಕಿಗೂ ಪಾಣಿಗೂ, ಸ್ಪರ್ಶನಕ್ಕೂ ಆದಾನಕ್ಕೂ, ನೇತ್ರಕ್ಕೂ ಪಾದಕ್ಕೂ, ರೂಪಿಗೂ ಗಮನಕ್ಕೂ, ಜಿಹ್ವೆಗೂ ಗುಹ್ಯಕ್ಕೂ, ಘ್ರಾಣಕ್ಕೂ ಗುದಕ್ಕೂ ಬೇಧವಿಲ್ಲ.

ದೇಹದ ಅನಿವಾರ್ಯ ಕ್ರಿಯೆಗಳಲ್ಲಿ ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ ಎಂಬೀ ಭಾವ ಉತ್ತಮಾಂಗ, ಅಧಮಾಂಗ, ಅಧೀನಾಂಗ ಎಂಬ ಬೇಧ ಭಾವಕ್ಕೂ ಎಂತಹ ಅಪಾರ ವ್ಯತ್ಯಾಸ.

ಅಂಗತತ್ವಗಳನ್ನು ಗಮನಿಸಿದರೆ ಯಾರಿಗಾದರೂ ಗೊತ್ತಾಗುವ ವಿಷಯ ಎಲ್ಲ ಜಾತಿಗಳ ಮನುಷ್ಯರಿಗೂ ಈ ಅಂಶಗಳು ಸಮಾನವಾಗಿ ಅನ್ವಯಿಸುತ್ತವೆ. ಎಲ್ಲರಿಗೂ ಈ ಇಂದ್ರಿಯಗಳು ಅವುಗಳಿಂದ ಅದರಿಂದ ಜಗತ್ತನಿಂದ ಗ್ರಹಿಸುವ ವಿಷಯಗಳಾದ ರೂಪ, ರಸ ಮೊದಲದ ತನ್ಮಾತ್ರೆಗಳೂ ಸಮಾನವೇ. ಹೀಗಾಗಿ ಈ ಯಾವ ತತ್ವದ ಪ್ರಸ್ತಾಪ ಮಾಡುವ ವಚನಗಳಲ್ಲಿಯೂ ವಿವಿಧ ಜಾತಿಯ ವ್ಯಕ್ತಿಗಳ ನಡುವೆ ಬೇಧವೆಣಿಸುವುದಿಲ್ಲ. ಹಾಗೆಯೇ ಗಂಡು, ಹೆಣ್ಣು ಬೇಧವೂ ಇಲ್ಲ. ಅವರೆಲ್ಲರ ಕಾಯಕವೂ ಸಮಾಜಕ್ಕೆ ಅಗತ್ಯ. ಈ ಎಲ್ಲ ಕಾಯಕಗಳಿಗೂ ಅಂಗ ತತ್ವಗಳೆಂಬುವೆಲ್ಲಾ ಅತಿ ಅಗತ್ಯವಾದುವು. ಈ ಅಂಗ ತತ್ವಗಳು ಚುರುಕಾಗಿಲ್ಲದೆ ಈ ಯಾವ ಕಾಯಕವೂ ಸರಿಯಾಗಿ ಸಾಗಲಾರದು. ಆದ್ದರಿಂದ ಈ ಅಂಗತತ್ವಗಳ ನಡುವೆ ಬೇಧ ಮಾಡುವುದಿಲ್ಲ. ಕಾಯಕಗಳು ಭಿನ್ನಭಿನ್ನವಾದರೂ ಅವುಗಳ ಹಿಂದಿನ ಅನುಭವ ಒಂದೇ ಎಂದು ವಚನಗಳು ಬಿಂಬಿಸಿವೆ. ಆದ್ದರಿಂದ ಎಲ್ಲ ಕಾಯಕಗಳ ಮೂಲಕವೂ ತಮ್ಮ ಆಧ್ಯಾತ್ಮಿಕ ಗಮ್ಯವನ್ನು ಮುಟ್ಟುವುದು ಸಾಧ್ಯ ಎಂಬ ಭಾವನೆ ಅನೇಕ ವಚನಗಳ ಮತಿತಾರ್ಥ. ಕಾಯಕಗಳ ನಡುವೆ ಸಮಾನತೆ ಹಾಗೂ ಅನುಭವ ಸಾಮ್ಯತೆಯನ್ನು ಗುರುತಿಸಿದ್ದರಿಂದಲೇ ವಿವಿಧ ಜಾತಿ, ಕಾಯಕಗಳ ವ್ಯಕ್ತಿಗಳ ನಡುವೆ ಸಂವಾದ ಸಾಧ್ಯವಾಯಿತು. ಈ ಸಂವಾದವೇ ಎಂತಹ ಅಪೂರ್ವ ಸನ್ನಿವೇಶವನ್ನು ಸೃಷ್ಟಿಸಿದೆಯೆಂದರೆ ಅದೇ ವಚನಗಳ ಚಿಂತನೆ, ಭಾಷೆ, ಶೈಲಿ, ಪದ ಸಂಪತ್ತು, ಪರಿಕಲ್ಪನೆಗಳಲ್ಲಿ ವೈವಿಧ್ಯತೆಯನ್ನೂ ಅವುಗಳ ನಡುವೆ ಸಮಾನವಾದ ಅನುಭವದ ಶೋಧದಲ್ಲಿ ಅರಿವಿನ ಹೊಸ ಮಜಲನ್ನೂ ಮುಟ್ಟುತ್ತವೆ. ಇಂತಹ ಈ ಬೆಳಗು, ಸಾಮರ್ಥ್ಯ ಎಷ್ಟು ಆಧ್ಯಾತ್ಮ ಪರಂಪರೆಗಳಿಗೆ ಸಾಧ್ಯವಾಗಿದೆ? ●

ಜನಶಕ್ತಿ
ಕನ್ನಡ ವಾರಪತ್ರಿಕೆ

ಮೇದಿನದ ಪ್ರಣಾಳಿಕೆ–2013......


ಪುಟ 2 ರಿಂದ

ವಲಯದ ಘಟಕಗಳ ಶೇರುಗಳನ್ನು ಮಾರಿಕೊಳ್ಳಲಾಗುತ್ತಿದೆ, ಅದು ಕೂಡ ಇಳಿಸಿದ ಬೆಲೆಗಳಲ್ಲಿ, ಈ ಮೂಲಕ ದೇಶದ ಖಜಾನೆಗೆ ಅಪಾರ ನಷ್ಟವುಂಟು ಮಾಡುವುದಲ್ಲದೆ, ಸಾರ್ವಜನಿಕ ಆಸ್ತಿಗಳ ಮೇಲೆ ಖಾಸಗಿಯವರು, ವಿದೇಶಿ ಸಂಸ್ಥೆಗಳು ಹೆಚ್ಚಿನ ಹಿಡಿತ ಪಡೆಯಲು ಅವಕಾಶ ಕಲ್ಪಿಸಲಾಗುತ್ತಿದೆ. ನಿರುದ್ಯೋಗ ಪರಿಸ್ಥಿತಿ ಉಲ್ಬಣಗೊಳ್ಳುತ್ತಿದ್ದರೂ, ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ, ಕೃಷಿಯ ನಂತರ ಜನಗಳಿಗೆ ಜೀವನಾಧಾರ ಕಲ್ಪಿಸುವ ಈ ಎರಡನೇ ಅತಿ ದೊಡ್ಡ ಮೂಲದೊಳಕ್ಕೆ, ಎಫ್‌ಡಿಐಗೆ ಅವಕಾಶ ಕಲ್ಪಿಸುವಲ್ಲಿ ಈ ಸರಕಾರಕ್ಕೆ ಲೇಶಮಾತ್ರವೂ ಹಿಂಜರಿಕೆ ಇಲ್ಲ.

ಉದ್ಯೋಗ ನಿರ್ಮಾಣ, ಅತ್ತ ಜಿಡಿಪಿ ಬೆಳವಣಿಗೆ ದರ ಹೆಚ್ಚುತ್ತಿದ್ದರೂ, ಇಳಿಮುಖಗೊಳ್ಳುತ್ತಿದ್ದು, ಉದ್ಯೋಗರಹಿತ ಬೆಳವಣಿಗೆಯ ವಿಕೃತಿಯನ್ನು ಬಿಂಬಿಸುತ್ತಿದೆ. ಇದಕ್ಕೆ ಅತಿ ದೊಡ್ಡ ಬಲಿಯೆಂದರೆ ಉದ್ಯೋಗಾವಕಾಶ ಮತ್ತು ಶಿಷ್ಟ ಕೆಲಸ–ರಿಟ್ರೆಂಚ್‌ಮೆಂಟ್, ನೇಮಕಾತಿಗಳ ನಿಷೇಧ, ಹೊರಗುತ್ತಿಗೆ, ಕೆಲಸಗಳನ್ನು ಕ್ಯಾಷುವಲ್‌ಗೊಳಿಸುವುದು, ಕಾಂಟ್ರಾಕ್ಟೀಕರಣ, ಅನೌಪಚಾರಿಕಗೊಳಿಸುವುದು, ಸಂಬಳವಿಲ್ಲ–ಬದಲು 'ಗೌರವಧನ' ಇತ್ಯಾದಿ, ಇತ್ಯಾದಿ–ವಿವಿಧ ವಿಧಗಳಲ್ಲಿ ಇದು ನಡೆದಿದೆ. ಆದ್ದ–ರಿಂದ ಇತ್ತೀಚೆಗಷ್ಟೇ ಮುಕ್ತಾಂಯಗೊಂಡಿರುವ ಸಿಐಟಿಯುನ 14ನೇ ಸಮ್ಮೇಳನ ಧೋರಣೆ–ಯ ವ್ಯವಸ್ಥೆಯಲ್ಲಿಯೇ ಸಂಪೂರ್ಣ ಬದಲಾವಣೆ ತರುವುದಕ್ಕಾಗಿ ಹೋರಾಟವನ್ನು ತೀವ್ರಗೊಳಿಸಬೇಕು ಮತ್ತು ಕೆಲಸದ ಅವಧಿಯನ್ನು ವಾರಕ್ಕೆ 35 ಗಂಟೆಗಳಿಗೆ ಇಳಿಸಬೇಕು ಹಾಗು ದಿನಕ್ಕೆ ನಾಲ್ಕು ಪಾಳಿಗಳ ದುಡಿಮೆಯ ವ್ಯವಸ್ಥೆ ತರಬೇಕು ಎಂಬ ಅಂತರ್ರಾಷ್ಟ್ರೀಯವಾಗಿ ಎತ್ತಿರುವ ಬೇಡಿಕೆ–ಯ ಬಗ್ಗೆ ಪ್ರಚಾರ ನಡೆಸಲು ನಿರ್ಧರಿಸಿದೆ. ತಾಂತ್ರಿಕ ಮುನ್ನಡೆಯಿಂದಾಗಿ ಕಾರ್ಮಿಕರ ಉತ್ಪಾದಕತೆಯಲ್ಲಿ ಅಗಾಧ ಹೆಚ್ಚಳ, ಅಲ್ಲದೆ ವ್ಯಾಪಕವಾದ ನಿರುದ್ಯೋಗದ ಹಿನ್ನೆಲೆಯಲ್ಲಿ ಈ ಬೇಡಿಕೆಯನ್ನು ಎತ್ತಲಾಗುತ್ತಿದೆ.

ಆದ್ದರಿಂದ, ಸಿಐಟಿಯು, ಈ ಮೇದಿನ 2013ರಂದು ಕಾರ್ಮಿಕ ವರ್ಗದ ಐಕ್ಯ ಹೋರಾಟವನ್ನು ಇನ್ನಷ್ಟು ಎತ್ತರಿಸಲು ಮತ್ತು ಅದನ್ನು ಜನ–ವಿರೋಧಿ, ಸಾಮ್ರಾಜ್ಯಶಾಹಿ–ಪರ ಧೋರಣೆಯ ವ್ಯವಸ್ಥೆಯನ್ನು ಬದಲಿಸುವ ಹೋರಾಟದ ಮಟ್ಟಕ್ಕೇರಿಸಲು ಶ್ರಮಿಸುವುದಾಗಿ ಪಣ ತೊಡುತ್ತದೆ. ಅದು ಕಾರ್ಮಿಕರ ಐಕ್ಯತೆಯನ್ನು ಬುಡಮಟ್ಟದಲ್ಲಿ ವಿಸ್ತರಿಸುವ ಮತ್ತು ಕ್ರೋಢೀಕರಿಸುವ ಪ್ರತಿಜ್ಞೆ ಮಾಡುತ್ತದೆ, ಹಾಗೂ ಐಕ್ಯತೆಯ ಹರಹನ್ನು ಗ್ರಾಮಾಂತರದ ಜನತೆಯ ವರೆಗೆ ಒಯ್ದು ಅವರನ್ನೂ ಶೋಷಣಾತ್ಮಕ ಧೋರಣೆಗಳ ವಿರುದ್ಧ ಹೋರಾಟದಲ್ಲಿ ಅಣಿನೆರೆಸುವ ಪ್ರತಿಜ್ಞೆಯನ್ನೂ ಮಾಡುತ್ತದೆ.

ಸಿಐಟಿಯು ಐಕ್ಯತೆಯನ್ನು ವ್ಯಾಪಕಗೊಳಿಸುವ ಕೆಲಸಕ್ಕೆ ಬಹಳಷ್ಟು ಆಯಾಮಗಳಿವೆ ಎಂದು ಪರಿಗಣಿಸುತ್ತದೆ. ಅದರಲ್ಲಿ ಸಮಾಜದಲ್ಲಿ ಜನಗಳ ಸಂಕಟಗಳು ಮತ್ತು ಅವು ಹುಟ್ಟಿಸಿರುವ ಆಕ್ರೋಶವನ್ನು ಬಳಸಿಕೊಂಡು ಜಾತಿ, ಮತ, ಅಸ್ಮಿತೆ ಮತ್ತು ಧಾರ್ಮಿಕ ಆಧಾರದಲ್ಲಿ ಅವರನ್ನು ಒಡೆಯಲು ಸಕ್ರಿಯವಾಗಿರುವ ವಿವಿಧ ಬಣ್ಣಗಳ ವಿಭಜನಕಾರಿ, ವಿಚ್ಛಿದ್ರಕಾರಿ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುವ ಕೆಲಸವೂ ಒಳಗೊಂಡಿರುತ್ತದೆ. ಇಂತಹ ವಿಭಜನಕಾರಿ, ವಿಚ್ಛಿದ್ರಕಾರಿ ಮತ್ತು ಕೋಮುವಾದಿ ಶಕ್ತಿಗಳು ಮತ್ತು ತತ್ವಸಿದ್ಧಾಂತಗಳ ವಿರುದ್ಧ ಸಮರ ಮತ್ತು ಅದೇ ವೇಳೆಯಲ್ಲಿ ಸಾಮಾಜಿಕ ದಮನದ ವಿರುದ್ಧ ಹೋರಾಟಕ್ಕೆ ಮುತುವರ್ಜಿ ವಹಿಸುವುದು ಹಾಗೂ ಸಮಾಜದ ಅತ್ಯಂತ ದಲಿತ, ಶೋಷಿತ ವಿಭಾಗದ ಬೇಡಿಕೆಗಳನ್ನು ವರ್ಗ–ವೇದಿಕೆಯಿಂದ ಕೈಗೆತ್ತಿಕೊಳ್ಳುವುದು ಕೂಡ ಜನತೆಯ ಐಕ್ಯತೆಯನ್ನು ವ್ಯಾಪಕಗೊಳಿಸುವ ಮತ್ತು ಕ್ರೋಢೀಕರಿಸುವ ಬಹು–ಆಯಮಗಳ ಕೆಲಸದ ಅವಿಭಾಜ್ಯ ಭಾಗವಾಗಬೇಕು.



ಪಶ್ಚಿಮ ಬಂಗಾಲದ ಜನತೆಯ ಮೇಲೆ ದಾಳಿ

ಸೌಹಾರ್ದತೆಯ ಈ ಅಂತರ್ರಾಷ್ಟ್ರೀಯ ದಿನದ ಮಹಾನ್ ಸಂದರ್ಭದಲ್ಲಿ, ಸಿಐಟಿಯು, ಪಶ್ಚಿಮ ಬಂಗಾಲದ ಕಾರ್ಮಿಕ ವರ್ಗ ಮತ್ತು ಜನತೆಯ ಧೀರ ಹೋರಾಟಗಳೊಂದಿಗೆ ಸೌಹಾರ್ದತೆಗೆ ತಾನು ಬದ್ಧ ಎಂದು ಮನರುಚ್ಚರಿಸುತ್ತದೆ. ಅವರು ತೃಣಮೂಲ ಕಾಂಗ್ರೆಸಿನ(ಟಿಎಂಸಿ) ಗೂಂಡಾಗಳು ಕಾರ್ಮಿಕ ಸಂಘಗಳ ಮೇಲೆ, ಸಾಮೂಹಿಕ ಸಂಘಟನೆಗಳು ಮತ್ತು ಎಡಪಕ್ಷಗಳ ಮೇಲೆ, ನಿಜಸಂಗತಿಯೆಂದರೆ, ಎಲ್ಲ ಪ್ರಜಾಸತ್ತಾತ್ಮಕ ಸಂಸ್ಥೆಗಳ ಮೇಲೆ ಬರ್ಬರ ದಾಳಿಗಳು ಮತ್ತು ಅತ್ಯಾಚಾರಗಳನ್ನು ನಡೆಸಿ ಹರಿಯಬಿಟ್ಟಿರುವ ಬರ್ಬರ ಭಯೋತ್ಪಾದಕತೆಯನ್ನು ಅಲ್ಲಿಯ ಕಾರ್ಮಿಕ ವರ್ಗ ಮತ್ತು ಜನತೆ ಧೈರ್ಯದಿಂದ ಎದುರಿಸುತ್ತಿದ್ದಾರೆ. ಈ ದಾಳಿಗಳು ಅಲ್ಲಿನ ಟಿಎಂಸಿ ನೇತೃತ್ವದ ಸರಕಾರದ ಅಡಿಯಲ್ಲಿ ರಾಜ್ಯ ಆಡಳಿತದ ಸಕ್ರಿಯ ಬೆಂಬಲದೊಂದಿಗೆ ಮುಂದುವರೆಯುತ್ತಿವೆ. ಕಾರ್ಮಿಕ ಸಂಘಗಳ ಕಚೇರಿಗಳಿಗೆ ಬೆಂಕಿ ಹಚ್ಚಲಾಗುತ್ತಿದೆ, ಒಳನುಗ್ಗಿ ಚಲ್ಲಾಪಿಲ್ಲಿ ಮಾಡಲಾಗುತ್ತಿದೆ, ಎಡ ಬೆಂಬಲಿಗರ ಮೇಲೆ ದೈಹಿಕ ದಾಳಿ ನಡೆಸಲಾಗುತ್ತಿದೆ, ಮಹಿಳೆಯರನ್ನು, ಅಂಗನವಾಡಿ ನೌಕರರನ್ನೂ, ಪೀಡಿಸಲಾಗುತ್ತಿದೆ, ಹಿಂಸಿಸಲಾಗುತ್ತಿದೆ, ಮನೆಗಳಿಗೆ ಬೆಂಕಿ ಹಚ್ಚಲಾಗುತ್ತಿದೆ. ನಮ್ಮ ಹಲವಾರು ಸಂಗಾತಿಗಳು ಕೊಲ್ಲಲ್ಪಟ್ಟಿದ್ದಾರೆ. ಇದುವರೆಗೆ ಪ್ರಜಾಪ್ರಭುತ್ವ ಆಂದೋಲನದ 90ಕ್ಕೂ ಹೆಚ್ಚು ಪ್ರಮುಖ ಕಾರ್ಯಕರ್ತರು ಕೊಲ್ಲಲ್ಪಟ್ಟಿದ್ದಾರೆ. ಇವರಲ್ಲಿ ಆರು ಕಾರ್ಮಿಕ ಸಂಘಗಳ ಸಂಗಾತಿಗಳು; ಈ ಸಂಖ್ಯೆ ದಿನೇದಿನೇ ಏರುತ್ತಿದೆ. ಹಲವು ಪ್ರದೇಶಗಳಲ್ಲಿ ಕಾಂಟ್ರಾಕ್ಟರುಗಳೊಂದಿಗೆ ಶಾಮೀಲಾಗಿ ಸಿಐಟಿಯು ಸಂಘಗಳಿಗೆ ಸೇರಿದ ಕಾಂಟ್ರಾಕ್ಟ್ ಕಾರ್ಮಿಕರನ್ನು ಕೆಲಸದಿಂದ ಹೊರಗೆಸೆದು, ಹೊಸ ಕಾರ್ಮಿಕರನ್ನು ಕಡಿಮೆ ಕೂಲಿಗಳಿಗೆ ತೆಗೆದುಕೊಳ್ಳಲಾಗಿದೆ. ಎಡ ವಿರೋಧ ಪಕ್ಷಗಳನ್ನು ಮತ್ತು ಪ್ರಜಾಪ್ರಭುತ್ವ ಆಂದೋಲನವನ್ನು ಊನಗೊಳಿಸಲು ಭಯೋತ್ಪಾದಕ ವಾತಾವರಣವನ್ನು ನಿರ್ಮಿಸಲಾಗುತ್ತಿದೆ. ಎಲ್ಲ ರೀತಿಗಳ ಪ್ರಜಾಸತ್ತಾತ್ಮಕ ವಿರೋಧಗಳ ಬಗ್ಗೆ ಟಿಎಂಸಿ ಆಡಳಿತದ ಅಸಹನೆ ಒಂದು ದಿಗಿಲು ಹುಟ್ಟಿಸುವ ಮಟ್ಟದ ವರೆಗೆ ಹೋಗಿದೆ.

ಏಪ್ರಿಲ್ 2013ರ ಮೊದಲ ವಾರದಲ್ಲಿ ಎಸ್‌ಎಫ್‌ಐ ಸಂಘಟಿಸಿದ ಕಾನೂನುಭಂಗ ಚಳುವಳಿಯಲ್ಲಿ ಬಂಧಿಸಿದ ಒಬ್ಬ ಯುವ ವಿದ್ಯಾರ್ಥಿಯನ್ನು ಪೋಲೀಸ್ ಕಸ್ಟಡಿಯಲ್ಲಿ ಮರಣಾಂತಿಕವಾಗಿ ಥಳಿಸಿ ಸಾಯಿಸಲಾಗಿದೆ. ಇಂತಹ ಕಸ್ಟಡಿಯಲ್ಲಿನ ಸಾವಿಗೆ ದೇಶಾದ್ಯಂತ ಭುಗಿಲೆದ್ದ ವ್ಯಾಪಕ ಪ್ರತಿಭಟನೆಗೆ ಎದುರಾಗಿ ಟಿಎಂಸಿ ಗೂಂಡಾಗಳು ಎಪ್ರಿಲ್ 9, 2013ರಿಂದ ಹಿಂಸಾಚಾರ ಮತ್ತು ಅಗ್ನಿಸ್ಪರ್ಶಗಳ ಹೊಸದೊಂದು ಆವೃತ್ತಿಯನ್ನು ಆರಂಭಿಸಿದ್ದಾರೆ. ಅದು ಈಗಲೂ ಮುಂದುವರೆಯುತ್ತಿದೆ. ಟಿಎಂಸಿ ಗೂಂಡಾಗಳು ಪೋಲೀಸ್ ಪಡೆಗಳ ಸಕ್ರಿಯ ಬೆಂಬಲದಿಂದ ನಡೆಸಿದ ದಾಳಿಗಳಲ್ಲಿ ಕಾರ್ಮಿಕ ಸಂಘಗಳ, ರೈತರು, ವಿದ್ಯಾರ್ಥಿಗಳು, ಯುವಜನರು ಮತ್ತು ಮಹಿಳೆಯರ ಇತರ ಸಾಮೂಹಿಕ ಸಂಘಟನೆಗಳ, ಎಡಪಕ್ಷಗಳ ಸಾವಿರಾರು ಕಚೇರಿಗಳಿಗೆ ನುಗ್ಗಿ ಹಾಳುಗೆಡವಲಾಗಿದೆ, ಸುಟ್ಟು ಭಸ್ಮಗೊಳಿಸಲಾಗಿದೆ, ಮಹಿಳೆಯರೂ ಸೇರಿದಂತೆ ಕಾರ್ಯಕರ್ತರು ಮತ್ತು ಬೆಂಬಲಿಗರನ್ನು ತೀವ್ರವಾಗಿ ಥಳಿಸಲಾಗಿದೆ. ಹಿರಿಯ ಕಾರ್ಮಿಕ ಮುಖಂಡರೂ ಸೇರಿದಂತೆ ಅಸಂಖ್ಯ ಪ್ರಮುಖ ಕಾರ್ಯಕರ್ತರನ್ನು ಮನಬಂದಂತೆ ಬಂಧಿಸಿ ಸುಳ್ಳು ಮೊಕದ್ದಮೆಗಳನ್ನು ಹಾಕಲಾಗುತ್ತಿದೆ. ಇಂತಹ ಬರ್ಬರತನವನನು ಪ್ರತಿಭಟಿಸಿ ಕಾರ್ಮಿಕರು ಮತ್ತು ಜೀವನದ ವಿವಿಧ ರಂಗಗಳಲ್ಲಿನ ಜನಗಳು ಸಾವಿರಾರು ಸಂಖ್ಯೆಯಲ್ಲಿ ಸೇರಿ ಮೆರವಣಿಗೆಗಳನ್ನು, ಮತಪ್ರದರ್ಶನ ಇತ್ಯಾದಿಗಳನ್ನು ನಡೆಸುತ್ತಿದ್ದಾರೆ.

ಇಂತಹ ದಾಳಿಗಳು ಮತ್ತು ಭಯೋತ್ಪಾದನೆಯ ನಡುವೆಯೂ, ರಾಜ್ಯದ ಕಾರ್ಮಿಕ ವರ್ಗ ಎರಡು ದಿನಗಳ ಸಾರ್ವತ್ರಿಕ ಮುಷ್ಕರದ ಕರೆಯನ್ನು, ಟಿಎಂಸಿ ನೇತೃತ್ವದ ಸರಕಾರದ ಎಲ್ಲ ಬೆದರಿಕೆಗಳನ್ನು, ದೈಹಿಕ ಹಿಂಸಾಚಾರಗಳನ್ನು ಧೈರ್ಯದಿಂದ ಎದುರಿಸಿ ಯಶಸ್ವಿಯಾಗಿ ಜಾರಿಗೊಳಿಸಿದ್ದಾರೆ, ಮತ್ತು ಸಾರ್ವತ್ರಿಕ ಮುಷ್ಕರದ ನಂತರ ಟಿಎಂಸಿ ಗೂಂಡಾಗಳು ದ್ವೇಷ ತೀರಿಸಿಕೊಳ್ಳಲು ನಡೆಸಿದ ದಾಳಿ, ಹಿಂಸಾಚಾರಗಳನ್ನು ಧೈರ್ಯವಾಗಿ ಎದುರಿಸಿದ್ದಾರೆಂಬುದು ಹೆಮ್ಮೆಯ ಸಂಗತಿ. ಸಿಐಟಿಯು ವರ್ಗಹೋರಾಟಕ್ಕೆ ರಾಜ್ಯದ ಕಾರ್ಮಿಕ ವರ್ಗ ಮತ್ತು ಪ್ರಜಾಪ್ರಭುತ್ವವಾದಿ ಜನತೆಯ ಇಂತಹ ಬದ್ಧತೆಗೆ ನಮಿಸುತ್ತದೆ.

ಇಂತಹ ಗಲಭೆಗಳನ್ನು ಮತ್ತೆ ದಾಳಿಗಳನ್ನು ಎಡರಂಗದ ಆಳ್ವಿಕೆ ಇರುವ ತ್ರಿಪುರಾದಲ್ಲಿಯೂ ವಿಧಾನಸಭಾ ಚುನಾವಣೆಗಳ ಮೊದಲು ನಡೆಸುವ ಪ್ರಯತ್ನಗಳಾದವು. ಅಂತಿಮವಾಗಿ ಫೆಬ್ರುವರಿ 2013ರಲ್ಲಿ ಚುನಾವಣೆ ನಡೆಯಿತು. ಕಾರ್ಮಿಕ ವರ್ಗ ಮತ್ತು ಪ್ರಜಾಪ್ರಭುತ್ವ ಆಂದೋಲನದ ಇನ್ನೊಂದು ಬಲಿಷ್ಠ ನೆಲೆಯಾದ ಕೇರಳದಲ್ಲೂ ಕಳೆದ ವಿಧಾನಸಭಾ ಚುನಾವಣೆಯ ನಂತರ ಇಂತಹ ಅಪಪ್ರಚಾರದ ಅಬ್ಬರ, ಸುಳ್ಳು ಮೊಕದ್ದಮೆಗಳ ಹೇರಿಕೆ, ಆಗಾಗ ದೈಹಿಕ ದಾಳಿಗಳನ್ನು ನಡೆಸಲು ಬಲಪಂಥೀಯ ಶಕ್ತಿಗಳು ಪ್ರಯತ್ನಿಸಿವೆ.

ಈ ಮೇದಿನದಂದು, ಸಿಐಟಿಯು, ಕಾರ್ಮಿಕ ವರ್ಗ ಮತ್ತು ಪ್ರಜಾಪ್ರಭುತ್ವ ಆಂದೋಲನದ ಹುತಾತ್ಮರಿಗೆ ಕೆಂಪು ವಂದನೆ ಸಲ್ಲಿಸುತ್ತ, ದೇಶಾದ್ಯಂತ ಕಾರ್ಮಿಕ ವರ್ಗವನ್ನು, ಸದಾ ಸಮರದ ಮುಂಚೂಣಿಯಲ್ಲಿ ನಿಂತು ಕಾರ್ಮಿಕ ವರ್ಗದ ಧ್ಯೇಯಸಾಧ್ಯ ದುಡಿದಿರುವ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಶೋಷಣಾತ್ಮಕ ಆಳ್ವಿಕೆಯ ವಿರುದ್ಧ ಹೋರಾಟಕ್ಕೆ ನೇತೃತ್ವ ನೀಡಿರುವ ಪಶ್ಚಿಮ ಬಂಗಾಳದಲ್ಲಿನ, ಅದೇ ರೀತಿ ಕೇರಳ ಮತ್ತು ತ್ರಿಪುರಾದಲ್ಲಿನ, ತಮ್ಮ ಒಡನಾಡಿಗಳ ಮೇಲಿನ ಪಾಶವೀ ದಾಳಿಯ ವಿರುದ್ಧ ಒಂದಾಗಿ ಹೋರಾಡಲು ಸೈದ್ಧಾಂತಿಕವಾಗಿಯೂ, ಸಂಘಟನಾತ್ಮಕವಾಗಿಯೂ ಜಾಗೃತಗೊಳಿಸುವ ಪ್ರತಿಜ್ಞೆಯನ್ನು ಮಾಡುತ್ತದೆ.

ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯ ಸೌಹಾರ್ದತೆ ಚಿರಾಯುವಾಗಲಿ

ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗೆ ಧಿಕ್ಕಾರ

ನವ–ಉದಾರವಾದಿ ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ಧಿಕ್ಕಾರ

ಸಮಾಜವಾದ ಚಿರಾಯುವಾಗಲಿ

ವಿಶ್ವದ ಕಾರ್ಮಿಕರೇ ಒಂದಾಗಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೊನೆಗೂ ಇಬ್ಬರು ಮಂತ್ರಿಗಳ ರಾಜೀನಾಮೆ: ಯುಪಿಎ–2 ಗೋಸುಂಬೆತನದ ಪ್ರದರ್ಶನ

ಸಂಸತ್ತಿನ ಬಜೆಟ್ ಅಧಿವೇಶನದ ಉತ್ತರಾರ್ಧವನ್ನು ಸಂಪೂರ್ಣವಾಗಿ ನಿರರ್ಥಕಗೊಳಿಸಿದ ಮೇಲೆ ಯುಪಿಎ–2 ಮಂತ್ರಿಗಳಿಬ್ಬರೂ ರಾಜೀನಾಮೆ ನೀಡಿದ್ದಾರೆ, ಅಥವ ಅವರ ಅಧ್ಯಕ್ಷರು ಮತ್ತು ಪ್ರಧಾನ ಮಂತ್ರಿಗಳು ಅವರಿಂದ ರಾಜೀನಾಮೆ ಪಡೆದಿದ್ದಾರೆ–ಅಧಿವೇಶನವನ್ನು ಮುಂದೂಡುವುದನ್ನೇ ಕಾಯುತ್ತಿದ್ದರೋ ಎಂಬಂತೆ. ಆದರೂ ಕಾಂಗ್ರೆಸ್ ವಕ್ತಾರರು ಇದು ತಮ್ಮ ಪಕ್ಷದ ಹಿರಿಮೆ, ಭ್ರಷ್ಟಾಚಾರವನ್ನು ತಮ್ಮ ಪಕ್ಷ ಎಳ್ಳಷ್ಟು ಸಹಿಸುವುದಿಲ್ಲ ಎಂದು ಬೆನ್ನು ತಟ್ಟಿಕೊಂಡಿದ್ದಾರೆ! ಬಹುಶಃ ಯುಪಿಎ–2 ಸರಕಾರದ ನೇತೃತ್ವ ವಹಿಸಿರುವ ಪಕ್ಷದ ಗೋಸುಂಬೆತನಕ್ಕೆ ಮಿತಿಯೇ ಇಲ್ಲ.

ಕೆಲವೇ ದಿನಗಳ ಹಿಂದೆ, ಇದೇ ಯುಪಿಎ–2 ಪ್ರಧಾನ ಮಂತ್ರಿಗಳು ಸಿಬಿಐ ವರದಿಯಲ್ಲಿ ಹಸ್ತಕ್ಷೇಪ ನಡೆಸಿದ ಸುದ್ದಿ ದೃಢಪಟ್ಟ ಮೇಲೂ ತಮ್ಮ ಕಾನೂನು ಮಂತ್ರಿಗಳನ್ನು ಸಮರ್ಥಿಸಿಕೊಂಡಿದ್ದರು. ರೈಲ್ವೆ ಮಂಡಳಿ ನೇಮಕಕ್ಕೆ ಲಂಚದ ಪ್ರಕರಣದಲ್ಲಿ ರೈಲ್ವೆ ಮಂತ್ರಿಗಳ ಪಾತ್ರವೇನೂ ಇಲ್ಲ [illegible] ಅದೇ ಕಾಂಗ್ರೆಸ್ ವಕ್ತಾರರು ರೈಲ್ವೆ ಮಂತ್ರಿಗಳನ್ನು ಸಮರ್ಥಿಸಿಕೊಂಡಿದ್ದರು. ಈಗ ಭ್ರಷ್ಟಾಚಾರಗಳ 'ಜ್ಞಾನೋದಯ'ವಾದಂತೆ ಕಾಂಗ್ರೆಸ್ ವಕ್ತಾರರು ತಮ್ಮ ಬೆನ್ನು ತಟ್ಟಿಕೊಳ್ಳುವಾಗ ಕರ್ನಾಟಕದಲ್ಲಿ ಬಿಜೆಪಿ ಮಾಡದ್ದನ್ನು ನಾವು ಮಾಡಿದ್ದೇವೆ ಎನ್ನುತ್ತಿದ್ದಾರೆ ! ವಾಸ್ತವವಾಗಿ ಎರಡು ವಾರಗಳ ಕಾಲ ಇವೇ ಸಮರ್ಥನೆಗಳನ್ನು ಕೊಡುತ್ತ ಬಜೆಟ್ ಅಧಿವೇಶನ ಸ್ತಂಭನಗೊಳ್ಳುವಂತೆ ಅವರು 'ನೋಡಿಕೊಂಡರು', ಅಥವ ಭ್ರಷ್ಟಾಚಾರದಲ್ಲಿ ಸ್ಪರ್ಧೆಗಿಳಿದಿರುವ ಆಳುವ ಪಕ್ಷ ಮತ್ತು ಪ್ರಧಾನ ಪ್ರತಿಪಕ್ಷದ ನಡುವೆ 'ಮ್ಯಾಚ್ ಫಿಕ್ಸಿಂಗ್' ಕೂಡ ಇದ್ದಿರಬೇಕು ಎಂಬ ಕೆಲವು ವೀಕ್ಷಕರ ಅಭಿಪ್ರಾಯಗಳಲ್ಲಿ ತಥ್ಯವಿದ್ದಿರಬೇಕಲ್ಲವೇ?



ಆದರೆ ಯುಪಿಎ–2, ಅದರಲ್ಲೂ ಪ್ರಧಾನ ಮಂತ್ರಿಗಳು ತಮ್ಮ ಇಬ್ಬರು ಸಹಯೋಗಿಗಳ ರಾಜೀನಾಮೆ ಪಡೆದರೆ ಅಷ್ಟೇ ಸಾಕೇ? ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿರುವಂತೆ, ಈ ಎರಡು ಮಂತ್ರಿಗಳ ಪ್ರಸಂಗಗಳು ಈ ಯುಪಿಎ–2 ಸರಕಾರದಲ್ಲಿ ಭ್ರಷ್ಟಾಚಾರ ಹೇಗೆ ಹಾಸುಹೊಕ್ಕಾಗಿ ಬಿಟ್ಟಿದೆ, [illegible] ಅದನ್ನು ಮುಚ್ಚಿ ಹಾಕುವ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಎಂಬುದನ್ನು ಮತ್ತೊಮ್ಮೆ ಎತ್ತಿ ತೋರಿಸಿವೆ. ಸ್ವತಃ ಪ್ರಧಾನ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳ ಕಚೇರಿ ಈ ವ್ಯವಹಾರಗಳಲ್ಲಿ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ. ಕಲ್ಲಿದ್ದಲು ಗಣಿಗಳ ಹಂಚಿಕೆಯ ಸಮಯದಲ್ಲಿ ಸ್ವತಃ ಪ್ರಧಾನಿಗಳೇ ಆ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದರು. ಅಲ್ಲದೆ ಈ ಹಗರಣದ ತನಿಖೆಯ ಸ್ಥಿತಿ–ಗತಿಯ ವರದಿಯನ್ನು ಬದಲಿಸುವ ಚರ್ಚೆಗಳಲ್ಲಿ ಪ್ರಧಾನ ಮಂತ್ರಿಗಳ ಕಚೇರಿಯ ಒಬ್ಬ ಜಂಟಿ ಕಾರ್ಯದರ್ಶಿ ಭಾಗವಹಿಸಿದ್ದರು ಎಂಬುದೀಗ ಜಗಜ್ಜಾಹೀರಾಗಿದೆ.

ಪ್ರಧಾನ ಮಂತ್ರಿಗಳ ಪ್ರತಿಷ್ಠೆಗೆ ಕುಂದುಂಟಾಗಿದೆ, ಅವರು ಇಂತಹ ಭ್ರಷ್ಟ ಆಳ್ವಿಕೆಯ ಮುಖ್ಯಸ್ಥರಾಗಿದ್ದಾರೆ; ಕಲ್ಲಿದ್ದಲು ಗಣಿ ಹಂಚಿಕೆ ಮತ್ತು 2ಜಿ ತರಂಗಾಂತರ ಹಂಚಿಕೆಗಳಲ್ಲಿ ತಮ್ಮ ಮತ್ತು ತಮ್ಮ ಕಚೇರಿಯ ಪಾತ್ರವೇನಿತ್ತು ಎಂಬುದನ್ನು ಅವರು ವಿವರಿಸಬೇಕಾಗಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ.

ಈ ನಡುವೆ ಯುಪಿಎ–2 ಸರಕಾರ ಈ ಕಳಂಕವನ್ನು ಮರೆಮಾಚುವ ಪ್ರಚಾರವನ್ನು ಕೂಡ ಆರಂಭಿಸಿದೆ. ಇದು ಸಾಮಾನ್ಯ ತೆರಿಗೆದಾರರ ಖರ್ಚಿನಲ್ಲಿ ಮುಂದಿನ ಸಾರ್ವತ್ರಿಕ ಚುನಾವಣೆಗಳ ಸಿದ್ಧತೆಗಳ ಆರಂಭ ಕೂಡ ಎಂದು ಹೇಳಲಾಗಿದೆ. ತನ್ನ "9 ವರ್ಷಗಳ ಸಾಧನೆಗಳ ಬಹುಮಾಧ್ಯಮ ಪ್ರಚಾರ"ಕ್ಕೆ ಅದೀಗ ಅಣಿಯಾಗಿದೆ. ಇಂತಹ ಪ್ರಚಾರವೆಂದರೆ ಯುಪಿಎ–2 ಮಂತ್ರಿಗಳಿಗೂ ನೆನಪಾಗಿರುವುದು ಎನ್‌ಡಿಎ ಸರಕಾರದ 'ಇಂಡಿಯಾ ಶೈನಿಂಗ್' ಪ್ರಚಾರವೇ. ಅದು ನಗೆಪಾಟಲಾದಂತೆ ಇದೂ ಆಗಬಹುದು ಎಂಬ ಶಂಕೆಯಿಂದಲೋ ಏನೋ, ಮಾಹಿತಿ ಮತ್ತು ಪ್ರಸಾರ ಮಂತ್ರಿಗಳು ಇದು 'ಇಂಡಿಯಾ ಶೈನಿಂಗ' ನಂತೆಲ್ಲ, ಅದಕ್ಕಿಂತ ಭಿನ್ನವಾದ 'ನಿಜಕತೆ'ಗಳು ಎಂದಿದ್ದಾರೆ. ಈ ನಿಜಕತೆಗಳಲ್ಲಿ ಲಕ್ಷ ಕೋಟಿ ರೂ.ಗಳ ಹಗರಣಗಳ, ಅವುಗಳನ್ನು ಮುಚ್ಚಿ ಹಾಕುವ ಹಗರಣಗಳ, ದೇಶದ ಸರ್ವೋಚ್ಚ ನ್ಯಾಯಾಲಯದ ತರಾಟೆಗಳ ನಿಜವಾದ ಕತೆಗಳು ಇರುವುದಿಲ್ಲ ಎಂಬುದಂತೂ ಸ್ಪಷ್ಟ.


ಬಡತನ ಕಡಿಮೆಯಾಗುತ್ತಿದ್ದರೆ ಆಹಾರ ಮಸೂದೆಯ ಬಗ್ಗೆ ಕಾಳಜಿಯೇಕೆ?

ಯುಪಿಎ–2 ಸರಕಾರದ ಹಟಮಾರಿ ನಿಲುವಿನಿಂದ ಬಜೆಟ್ ಅಧಿವೇಶನದ ಉತ್ತರಾರ್ಧ ಸಂಪೂರ್ಣ ತೊಳೆದು ಹೋದುದರ ಒಂದು ಪರಿಣಾಮವೆಂದರೆ ಆಹಾರ ಭದ್ರತೆ–ಯ ಮಸೂದೆ, ಭೂಸ್ವಾಧೀನ ಮಸೂದೆಯಂತಹ ಕೆಲವು ಪ್ರಮುಖ ಕ್ರಮಗಳ ಬಗ್ಗೆ ಚರ್ಚೆ ನಡೆಯದಿರುವುದು. ಈ ಪ್ರಮುಖ ಮಸೂದೆಗಳಲ್ಲಿ ಹಲವು ಕೊರತೆಗಳಿದ್ದು ಆ ಬಗ್ಗೆ ಚರ್ಚೆ ನಡೆಯದೇ ಅವುಗಳು ಕಾನೂನುಗಳಾಗಲಿ ಎಂಬುದು ಯುಪಿಎ–2 ಸರಕಾರದ ಆಶಯವಾದ್ದರಿಂದಲೂ ಸರಕಾರ ಇಂತಹ ಹಟಮಾರಿ ನಿಲುವು ತಳೆದಿರಬಹುದೇ ಎಂಬ ಸಂದೇಹ ಅಧಿವೇಶನವನ್ನು ಮುಂದೂಡಿದ ಕೂಡಲೇ ಇಬ್ಬರೂ ಮಂತ್ರಿಗಳ ರಾಜೀನಾಮೆಯಿಂದ ಎದ್ದಿದೆ. ಅದರೂ ಯಥಾಪ್ರಕಾರ ಆಳುವ ಪಕ್ಷ ಈ ಬಗ್ಗೆಯೂ ಮೊಸಳೆ ಕಣ್ಣೀರು ಹಾಕಲು ಮರೆತಿಲ್ಲ.

ಅದೇನೇ ಇರಲಿ, ಆಹಾರ ಭದ್ರತೆ–ಯ ಮಸೂದೆ ಇನ್ನೂ ಮಸೂದೆಯಾಗಿಯೇ ಉಳಿದಿರುವುದು ಏನನ್ನು ಸೂಚಿಸುತ್ತದೆ? ಸಿಬಿಐ ವರದಿ, ಜೆಪಿಸಿ ವರದಿ, ರೈಲು ಹಗರಣ ಮಂತಾದವುಗಳಿಂದಾಗಿ ಈ ಬಗ್ಗೆ ಚರ್ಚೆಯೇ ನಡೆಯಲು ಸಾಧ್ಯವಾಗದಿರುವುದಕ್ಕೆ ನೊಬೆಲ್ ಪಾರಿತೋಷಕ ವಿಜೇತ ಅರ್ಥಶಾಸ್ತ್ರಜ್ಞ ಡಾ.ಅಮರ್ತ್ಯ ಸೆನ್ ಕೂಡ ಅತೀವ ಆತಂಕ ವ್ಯಕ್ತಪಡಿಸಿದ್ದಾರೆ. ಈ ಮಸೂದೆ ಪಾಸಾಗದಿದ್ದರೆ, ಇನ್ನೂ ನೂರಾರು ಮಕ್ಕಳು ಹಸಿದಿರಬೇಕಾಗುತ್ತದೆ, ಇಲ್ಲವೇ ಅಪೌಷಿಕತೆಯಿಂದ ಸಾಯುವ ಸನ್ನಿವೇಶ ಉಂಟಾಗುತ್ತದೆ ಎಂದು ಅವರು ಹೇಳಿದ್ದಾರೆ.

ಅಮರ್ತ್ಯ ಸೆನ್ ಅವರು ಕೂಡ ಒಂದು ಸಾರ್ವತ್ರಿಕ ವಿತರಣಾ ವ್ಯವಸ್ಥೆ ಇರಬೇಕು ಎಂದು ಪ್ರತಿಪಾದಿಸುವವರು. ಆದರೆ ಈ ಮಸೂದೆ 'ಸೀಮಿತ'ವಾದದ್ದು, ಕೇವಲ 67ಶೇ. ಜನಸಂಖ್ಯೆಗೆ, ಅದೂ ಆಹಾರ ಧಾನ್ಯಗಳನ್ನು ಮಾತ್ರ, ಅದು ಕೂಡ ಐಸಿಎಂಆರ್ ಲೆಕ್ಕ ಹಾಕಿದ ಕನಿಷ್ಟ 14 ಕೆ.ಜಿ.ಗಳ ಬದಲು ಕೇವಲ 5 ಕೆ.ಜಿ. ಮಾತ್ರ ಒದಗಿಸುವ ಮಾತಾಡಿದೆ. ಅಲ್ಲದೆ ಇದನ್ನು ಜಾರಿಗೆ ತರಲು ಸಮಯ ಮಿತಿಯೇನೂ ಇಲ್ಲ. ಜತೆಗೆ ಕಾಂಟ್ರಾಕ್ಟರುಗಳು ಹಾಗೂ ಇತರ ವಾಣಿಜ್ಯ ಹಿತಗಳಿಗೆ ಪ್ರವೇಶ ನೀಡುವಂತದ್ದು. ಇಂತಹ ಒಂದು ಮಸೂದೆಯ ಬಗ್ಗೆ ಅಮರ್ತ್ಯ ಸೆನ್‌ರಂತವರು ಕೂಡ ಇಷ್ಟೊಂದು ಕಾಳಜಿ ಏಕೆ ವ್ಯಕ್ತಪಡಿಸಿದ್ದಾರೆ ಎಂಬ ಪ್ರಶ್ನೆ ಪ್ರಜಾಪ್ರಭುತ್ವವಾದಿಗಳಲ್ಲೂ ಏಳಬಹುದು.

ಅಮರ್ತ್ಯ ಸೆನ್‌ರಂತಹ ಪ್ರತಿಷ್ಠಿತ ಅರ್ಥಶಾಸ್ತ್ರಜ್ಞರ ಈ



ವೇದರಾಜ ಎನ್.ಕೆ.

ಆತಂಕ ಬಹಳ ಮಹತ್ವದ್ದು ಎನ್ನುತ್ತಾರೆ ಇನ್ನೊಬ್ಬ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ಭಾರತದಲ್ಲಿನ ಬಡತನದ ಗಂಭೀರತೆಯ ಬಗ್ಗೆ ಎಡಪಂಥೀಯರು ಇದನ್ನೇ ಹೇಳುತ್ತ ಬಂದಿದ್ದಾರೆ. ಆದರೆ ಸರಕಾರಗಳು, ಅದು ಎನ್‌ಡಿಎ ಆಗಿರಲಿ, ಯುಪಿಎ ಆಗಿರಲಿ, ಭಾರತದಲ್ಲಿ ಬಡತನ ಇಳಿಯುತ್ತಿದೆ ಎಂದು ವಾದಿಸಿವೆ, ವಾದಿಸುತ್ತಿವೆ, ಅವರಿಗೆ ಬೆಂಬಲವಾಗಿ ವಿಶ್ವಬ್ಯಾಂಕ್ ಕೂಡ ಬಡತನದ ಅನುಪಾತ ಇಳಿಯುತ್ತಿದೆ ಎಂದು ಹೇಳುತ್ತಿದೆ ಎಂಬ ಸಂಗತಿಯತ್ತ ಅವರು ಗಮನ ಸೆಳೆಯುತ್ತಾರೆ.

ತೆಂಡುಲ್ಕರ್ ಸಮಿತಿಯ ಮಾನದಂಡದ ಪ್ರಕಾರ ಬಡತನದ ಪ್ರಮಾಣ 2009–10ರಲ್ಲಿ 29.8ಶೇ.; ವಿಶ್ವಬ್ಯಾಂಕ್ 32.7ಶೇ. ಎಂದು ಅಂದಾಜು ಮಾಡಿದೆ, ಜಾಗತಿಕ ಹಿಂಜರಿತ ಇಲ್ಲದಿದ್ದರೆ ಅದು 27.5 ಶೇ. ಇರುತ್ತಿತ್ತಂತೆ; ಯುಎನ್‌ಡಿಪಿ ಅಂದಾಜು ಪ್ರಕಾರ ಭಾರತದಲ್ಲಿ ಬಡತನದ ಅನುಪಾತ 29.8ಶೇ. ಇದರ ಆಧಾರದಲ್ಲಿ 1991ರಲ್ಲಿ 51ಶೇ. ಇದ್ದ ಬಡತನದ ಪ್ರಮಾಣ 2015ರ ವೇಳೆಗೆ 22ಶೇ.ಕ್ಕೆ ಇಳಿಯುತ್ತದೆ ಎಂದು ವಿಶ್ವಸಂಸ್ಥೆಯ ಲೆಕ್ಕಾಚಾರವಾದರೆ, ವಿಶ್ವಬ್ಯಾಂಕ್ ಪ್ರಕಾರ 23.8ಶೇ.ಕ್ಕೆ ಇಳಿಯುತ್ತದೆ. ನಮ್ಮ ಯೋಜನಾ ಆಯೋಗದ ಅಂದಾಜಿನ ಪ್ರಕಾರ 12ನೇ ಯೋಜನೆಯ ಅಂತ್ಯದ ವೇಳೆಗೆ ಇದು 19.8ಶೇ.ಕ್ಕೆ ಇಳಿಯುತ್ತದೆ.

ಈ ಎಲ್ಲ ಅಂಕಿ–ಅಂಶಗಳು ನಿಜವಾಗಿದ್ದರೆ, ಇನ್ನೆರಡು ವರ್ಷಗಳಲ್ಲಿ ಬಡವರ ಪ್ರಮಾಣ ಜನಸಂಖ್ಯೆಯ ಐದನೇ ಒಂದಕ್ಕೆ ಇಳಿಯುವಂತಿದ್ದರೆ, ಈ ಆಹಾರ ಭದ್ರತೆಯ ಕಾನೂನು ಅಂಗೀಕರಿಸಬೇಕಾದ ತುರ್ತಾದರೂ ಏನು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಹಾಗೆ ಕೇಳುವ, ಇಂತಹ ಒಂದು ಶಾಸನದ ಅಗತ್ಯವೇ ಇಲ್ಲ ಎನ್ನುವವರ ಸಂಖ್ಯೆಯೂ ಸಾಕಷ್ಟಿದೆ. ಆದರೆ, ನಿಜ ಸಂಗತಿಯೆಂದರೆ 1991ರ ನಂತರದ "ಆರ್ಥಿಕ ಸುಧಾರಣೆ'ಗಳ ಅವಧಿಯಲ್ಲಿ ಜಿಡಿಪಿ ದರದಲ್ಲಿ ಹೆಚ್ಚಳವೇನೋ ಆಗುತ್ತಿದೆ, ಅದರ ಜೊತೆಗೇ ಬಡತನದ ಹೆಚ್ಚಳವೂ ಆಗುತ್ತಿದೆ, ಇದಕ್ಕೆ ಸಾಕಷ್ಟು ಸಾಕ್ಷ್ಯಗಳಿವೆ ಎನ್ನುತ್ತಾರೆ ಪ್ರೊ. ಪಟ್ನಾಯಕ್.

ಕನಿಷ್ಟ ಆಹಾರದ ಪ್ರಮಾಣ ಗ್ರಾಮೀಣ ಪ್ರದೇಶಗಳಲ್ಲಿ ದಿನಕ್ಕೆ 2200 ಕ್ಯಾಲರಿ ಮತ್ತು ನಗರಪ್ರದೇಶಗಳಲ್ಲಿ 2100ಕ್ಯಾಲರಿ ಇರಬೇಕೆಂಬ ಮಾನದಂಡದಿಂದ ಲೆಕ್ಕ ಹಾಕಿದರೆ 2009–10ರ ವೇಳೆಗೆ ಈ ಕನಿಷ್ಟ ಆಹಾರ ದೊರೆಯದವರ ಪ್ರಮಾಣ ಅನುಕ್ರಮವಾಗಿ 75.5ಶೇ. ಮತ್ತು 73 ಶೇ. ಆಹಾರ ಧಾನ್ಯಗಳ ತಲಾ ಲಭ್ಯತೆ 1980ರ ದಶಕದ ಕೊನೆಯಲ್ಲಿ, ಅಂದರೆ "ಆರ್ಥಿಕ ಸುಧಾರಣೆ"ಗಳು ಆರಂಭವಾಗುವ ಮೊದಲು ಇದ್ದುದಕ್ಕಿಂತ ಕಡಿಮೆಯಾಗಿದೆ, ವಾಸ್ತವವಾಗಿ ಆಹಾರ ಪೂರೈಕೆಯ ಪ್ರಮಾಣ ಬಹಳ ಕಡಿಮೆಯಿದ್ದ ಎರಡನೇ ಮಹಯುದ್ಧದ ಮೊದಲಿದ್ದ ಮಟ್ಟಕ್ಕೆ ಇಳಿದಿದೆ ಎನ್ನುತ್ತಾರೆ ಪ್ರೊ.ಪಟ್ನಾಯಕ್.

ಇಷ್ಟೇ ಏಕೆ, 81 ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ 78ರಲ್ಲಿ 'ಜಾಗತಿಕ ಹಸಿವಿನ ಸೂಚ್ಯಂಕ' 1996–2011ರ ಅವಧಿಯಲ್ಲಿ ಇಳಿದಿದೆ. ಆದರೆ ಭಾರತ ಈ 78ರ ಪಟ್ಟಿಯಲ್ಲಿ ಇಲ್ಲ, ನೆರೆದೇಶ ಪಾಕಿಸ್ತಾನ ಇದೆ; ಈ ಸೂಚ್ಯಂಕ ಏರಿರುವ ಮೂರೇ ದೇಶಗಳಲ್ಲಿ ಭಾರತವೂ ಒಂದು!

ಹೀಗಿರುವಾಗ, ಡಾ.ಅಮರ್ತ್ಯ ಸೆನ್‌ರವರ ಆತಂಕ ಸಹಜವಾದದ್ದೇ, ಇದು, "ಪರಿಸ್ಥಿತಿಯಲ್ಲಿ ಏನೋ ಕೊಳೆತು ನಾರುತ್ತಿದೆ" ಎಂದು ಎಡಪಂಥೀಯರು ಹೇಳುತ್ತಿರುವುದರಲ್ಲಿ ತಥ್ಯವಿದೆ ಎಂಬುದರತ್ತ ಬಹಳಷ್ಟು ಜನಗಳ ಗಮನ ಸೆಳೆಯಬೇಕಾಗಿದೆ ಎನ್ನುತ್ತಾರೆ ಪ್ರಭಾತ್ ಪಟ್ನಾಯಕ್. ಹೀಗೆ ವಾಸ್ತವತೆ ಸಂಪೂರ್ಣ ಭಿನ್ನವಾಗಿರುವಾಗ ನವ–ಉದಾರವಾದಿ ಆಳ್ವಿಕೆಯಲ್ಲಿ ಭಾರತದ ಸಫಲತೆಯ ಬಗ್ಗೆ ಹಾಡಿ–ಹೊಗಳುವುದು ಹೊಲಸುತನ ಎನ್ನುತ್ತಾರೆ ಅವರು. ■

ಜಗದಗಲ

ಶರತ್‌ಚಂದ್ರ

ಬಾಂಗ್ಲಾದೇಶ ಕಮ್ಯುನಿಸ್ಟ್ ಪಕ್ಷದ ಕಚೇರಿ ಮೇಲೆ ದಾಳಿ



ಬಾಂಗ್ಲಾದೇಶದ ವಿಮೋಚನಾ ಸಮರದ ವಿರುದ್ಧ ದ್ರೋಹ ಮಾಡಿದ ಮತ್ತು ಮಿಲಿಟರಿ ಸರ್ಕಾರದ ಜತೆ ಶಾಮೀಲಾಗಿ ಜನತೆಯ ನರಮೇಧದಲ್ಲಿ ಭಾಗವಹಿಸಿದವರ ವಿರುದ್ಧ ವಿಶೇಷ ಟ್ರಿಬ್ಯುನಲ್ ವಿಚಾರಣೆ ಆರಂಭಿಸಿ ತೀರ್ಪು ಕೊಡಲು ಆರಂಭಿಸಿದೆ. ಆಗಿನಿಂದ ವಿಶೇಷ ಟ್ರಿಬ್ಯುನಲ್ ಮತ್ತು ಅದರ ತೀರ್ಪುಗಳ ವಿರುದ್ಧ ಬಲಪಂಥೀಯ ಮೂಲಭೂತವಾದಿ ಶಕ್ತಿಗಳು ಪ್ರತಿಭಟನೆ ಮತ್ತು ಹಿಂಸಾಚಾರಕ್ಕೆ ಇಳಿದಿವೆ. ಅರಾಜಕತೆ ಉಂಟು ಮಾಡಿ ಸರ್ಕಾರ ಬೀಳಿಸಲು ಯತ್ನಿಸುತ್ತಿವೆ. ಪ್ರಗತಿಪರ ಮತ್ತು ಪ್ರಜಾಸ್ತಾತ್ಮಕ ರಾಜಕೀಯ ಶಕ್ತಿಗಳು, ಸಂಘಟನೆಗಳು ಅವರ ದಾಳಿಯ ಗುರಿಯಾಗಿವೆ.

ಇದರ ಭಾಗವಾಗಿ ಇತ್ತೀಚೆಗೆ ಬಾಂಗ್ಲಾದೇಶ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಕಚೇರಿ ಮೇಲೆ ಈ ಶಕ್ತಿಗಳು ಸಶಸ್ತ್ರ ದಾಳಿ ನಡೆಸಿದವು. ಪ್ರಧಾನ ಕಾರ್ಯದರ್ಶಿ ಸೇರಿದಂತೆ ಹಲವು ಹಿರಿಯ ನಾಯಕರು ಕಚೇರಿಯಲ್ಲಿ ಉಪಸ್ಥಿತರಿದ್ದರೂ ಅವರಿಗೆ ಅದೃಷ್ಟವಶಾತ್ ಯಾವ ಸ್ಥಾ... ನೋವೂ ಆಗಿಲ್ಲ. ಈ ದಾಳಿಯ... ಸಿಪಿಐ(ಎಂ) ಸೇರಿದಂತೆ ಬಾಂಗ್ಲಾದೇಶದ ಮತ್ತು ಜಗತ್ತಿನ ಪ್ರಗತಿಪರ ಮತ್ತು ಪ್ರಜಾಸ್ತಾತ್ಮಕ ರಾಜಕೀಯ ಶಕ್ತಿಗಳು, ಸಂಘಟನೆಗಳು ತೀವ್ರವಾಗಿ ಖಂಡಿಸಿವೆ. ಈ ಖಂಡನೀಯ ಕುಕೃತ್ಯ ಎಸಗಿದ ಜಮಾತೇ ಇಸ್ಲಾಮಿ ಮತ್ತು ಹೆಫಾಜೊತೆ ಇಸ್ಲಾಂ (ಉಗ್ರವಾದಿ ಮೂಲಭೂತವಾದಿ ಸಂಘಟನೆಗಳ ಕೂಟ)ನ ಸಶಸ್ತ್ರ ಕಾರ್ಯಕರ್ತರನ್ನು ಬಂಧಿಸಿ ಶಿಕ್ಷಿಸಬೇಕು ಎಂದು ಒತ್ತಾಯಿಸಿವೆ. ಬಲಪಂಥೀಯ ಮೂಲಭೂತವಾದಿ ಶಕ್ತಿಗಳ ಈ ಸವಾಲಿಗೆ ತೀವ್ರ ಪ್ರತಿರೋಧ ಒಡ್ಡಿರುವ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಪ್ರಜಾಸತ್ತಾತ್ಮಕ ಪ್ರಗತಿಪರ ಸಂಘಟನೆಗಳು ಅದರಲ್ಲೂ ವಿಶೇಷವಾಗಿ ದೊಡ್ಡ ಸಂಖ್ಯೆ...ಲ್ಲಿ ಬೀದಿಗಿಳಿದ ಯುವಜನತೆಗೆ ಸೌಹಾರ್ದ ಬೆಂಬಲ ಸಾರಿವೆ.

ಜನಚಳುವಳಿಗಳ ಮುಂದಿರುವ...

ಪುಟ 16 ರಿಂದ

ರದ್ದು ಮಾಡಿ ಬಿಸಾಡಿತು. ಅದರಲ್ಲಿ ಒಂದಷ್ಟು ಅಕ್ರಮ ಕಾರ್ಡುಗಳೂ ಇದ್ದವೇನೋ. ಜೊತೆಗೆ ಇಲಾಖೆ ಕೇಳುವ ನಾನಾ ದಾಖಲೆ-ಅಗತ್ಯಗಳನ್ನು ಪೂರೈಸಲಾರದ ಬಡವರು ಇರಲಿಲ್ಲವಾ ? ಇದ್ದ ಒಂದು ರೇಷನ್ ಕಾರ್ಡಿನ ಆಧಾರ ಕಳೆದುಕೊಂಡ ಬಡವರ 'ಶಾಪ' ಸುಮ್ಮನೇ ಬಿಟ್ಟೀತೇ ? ಇದೊಂದು ತರ್ತು ಪ್ರಶ್ನೆ. ಹಿಂದೆ ಬಿಪಿಎಲ್ ಕಾರ್ಡು ಪಡೆದುಕೊಳ್ಳಲಾರದವರು ಹೊಸ ಸರ್ಕಾರ ಬಂದು ಹೊಸ ಘೋಷಣೆಯಾದ ಮೇಲೆ ಅದಕ್ಕಾಗಿ ಮುಗಿ ಬಿದ್ದಿದ್ದಾರೆ. ಅವರನ್ನು ಅಪರಾಧಿಗಳೆಂಬಂತೆ ನೋಡದೆ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಆಡಳಿತ ಸ್ಪಂದಿಸಬೇಕು. ಅವರು ಹಾಗೆ ಮಾಡುವ ಖಾತ್ರಿ ಇಲ್ಲ. ಜನಪರ ಸಂಘಟನೆಗಳು ಬಡಜನರ ರಕ್ಷಣೆಗೆ ಇಳಿಯಬೇಕು. ಆಮೇಲೆ ಇನ್ನು ಶಾಶ್ವತ ಕಾರ್ಡು ಸಿಗದೇ ತಾತ್ಕಾಲಿಕ ಕಾರ್ಡು ಇಟ್ಟುಕೊಂಡು ತೊಳಲಾಡುವವರು ಎಷ್ಟು ಲಕ್ಷ ಜನವೋ ? ಸ್ಲಂ ನಿವಾಸಿಗಳಿಗೂ ಎಪಿಎಲ್ ಕಾರ್ಡು ಕೊಟ್ಟ 'ಸುವರ್ಣ ಯುಗ' ಬಿಜೆಪಿ ಆಡಳಿತದ ಕಾಲಘಟ್ಟದ್ದು. ಸುಳ್ಳು ದಾಖಲೆ ತೋರಿಸಿ ನಕಲಿ ಕಾರ್ಡು ಮಾಡಿಕೊಂಡಿರುವ ಪ್ರಭಾವಿಗಳನ್ನು ಹಿಡಿದು ಮಟ್ಟ ಹಾಕುವುದು, ಕಡಿಮೆ ಬೆಲೆಯ ಅಕ್ಕಿ ಕಾಳಸಂತೆಕೋರರ ಬಕಾಸುರ ಬಾಯಿಗೆ ಬಿದ್ದು 'ಗುಳುಂ' ಆಗದಂತೆ ನೋಡಿಕೊಳ್ಳುವುದು ಮುಂತಾದ ಜವಾಬ್ದಾರಿ ಹೊಸ ಸರ್ಕಾರದ ಮೇಲಿದೆ.

ಕುಷ್ಟಗಿಯ 'ರಾಮಾಪುರ' ಮತ್ತು 'ಕೃಷ್ಣ' ಊದಿದ 'ಕೊಳಲಿ'ನ ನೆನಪು

2004 ರಲ್ಲಿ ಭೀಕರ ಬರ ರಾಜ್ಯವನ್ನು ಕಾಡುತ್ತಿತ್ತು. ಹೈಟೆಕ್ ಕೃಷ್ಣ ರಾಜ್ಯದಲ್ಲಿ ಆಡಳಿತದ ಕೊಳಲು ಊದುತ್ತಿದ್ದರು. 'ಕೂಲಿಗಾಗಿ ಕಾಳು ಯೋಜನೆ' ಜಾರಿಗಾಗಿ ಸಿಪಿಐ(ಎಂ) ಮತ್ತು ಪ್ರಗತಿಪರ ಶಕ್ತಿಗಳು ಬೊಬ್ಬೆ ಹಾಕಿ ಶಂಖ, ಜಾಗಟೆ ಬಾರಿಸಬೇಕಾಯಿತು. ಕೊನೆಕೊನೆಗೆ ಕಾಳು ಬಿಡುಗಡೆಯಾಗುವ ಹೊತ್ತಿಗೆ 'ಚುನಾವಣೆ ಎಂಬ 'ಊರಹಬ್ಬ' ಘೋಷಣೆಯಾಗಿತ್ತು. ಹುಚ್ಚಿ ಮದುವೆಯಲ್ಲಿ ಉಂಡವನೇ ಜಾಣ. ಒಂದು ಕಾಲಕ್ಕೆ ಹನಿ ಹೊತ್ತ ಮೋಡ ಎತ್ತ ಹೋದವೋ ಅಂತ ಜನ ಆಕಾಶ ನೋಡುತ್ತಿದ್ದರು. ಅಮೇಲೆ ಅಕ್ಕಿಮೂಟೆ ಹೊತ್ತ ಟ್ರಕ್ಕುಗಳು ಎತ್ತ ಹೋದವೋ ಅಂತಲೂ ಜನ ಆಕಾಶ ನೋಡಬೇಕಾದ ಪರಿಸ್ಥಿತಿ ಬಂದು ಬಿಟ್ಟಿತು.

ಅದು ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ರಾಮಾಪುರ ಎಂಬ ಗ್ರಾಮ. ಮನೆಯಲ್ಲಿ ತಿನ್ನಲು ಏನೂ ಇಲ್ಲ. ಕೊನೆಗೆ ಕಾಯಿಲೆಗೆ ಆಸ್ಪತ್ರೆಗೆ ತೋರಿಸಿಕೊಳ್ಳಲು ಬಿಡಿಗಾಸು ಇಲ್ಲದ ಪರಿಸ್ಥಿತಿ. ಆ ರೈತ ಕುಟುಂಬದ ಆರೂ ಜನ ಹೊಲಕ್ಕೆ ಹೊಡೆಯಲು ಎಂದೋ ತಂದಿಟ್ಟಿದ್ದ ಕ್ರಿಮಿನಾಶಕ ಸೇವಿಸಿ ಎಲ್ಲರೂ ಪ್ರಾಣ ಬಿಟ್ಟಿದ್ದರು.

ಸಿದ್ದರಾಮಯ್ಯನವರು ಆಗಿನ್ನೂ ಜನತಾದಳದಲ್ಲೇ ಅಂದರೆ ವಿರೋ ಧ ಪಕ್ಷದಲ್ಲೇ ಇದ್ದರು. ಅದನ್ನೆಲ್ಲ ಅವರು ಈಗ ನೆನಪಿಸಿಕೊಳ್ಳಬೇಕು. ಜನರು ಕೂಡ ಅದನ್ನೆಲ್ಲಾ ಮರೆಯುವಂತಿಲ್ಲ. ಕಳೆದ ವರ್ಷ 123 ತಾಲ್ಲೂಕುಗಳನ್ನು ಭೀಕರ ಬರ ಆಳಿದೆ. ಅದಕ್ಕೆ ಸರ್ಕಾರ ಏನು ಪರಿಹಾರ ಸೂಚಿಸಲಿದೆ ? ಬರೀ ಮಳೆ ಮೋಡವನ್ನು ನಂಬಿ ಕೂರುವುದೇ ? ಜನಚಳುವಳಿ ಕೇಳಬೇಕು.

ಮನೆ ನಿವೇಶನ

ವಸತಿ ಯೋಜನೆಯ ಸಹಾಯಧನವನ್ನು 75 ಸಾವಿರದಿಂದ 1.20 ಲಕ್ಷಕ್ಕೆ ಏರಿಸಿ ತೀರ್ಮಾನ ಕೈಗೊಳ್ಳಲಾಗಿದೆ ಎಂದು ವರದಿಯಾಗಿದೆ. ಇದು ಸ್ವಾಗತಾರ್ಹವಾದ ವಿಷಯವೇ. ಆದರೆ ವಸತಿ ವಿಷಯದಲ್ಲಿ ಜನರು ಅನುಭವಿಸುತ್ತಿರುವ ಸಮಸ್ಯೆಗಳು ಇನ್ನೂ ಹಲವು ಇವೆ. ಅವು ಗಂಭೀರವಾಗಿವೆ. ದುಡಿಮೆಯ ದೊಡ್ಡ ಭಾಗವನ್ನು ಬರೀ ಮನೆ ಬಾಡಿಗೆಗೆ ಕಟ್ಟುತ್ತಾ ಕಂಗಾಲಾಗಿರುವ ಲಕ್ಷಾಂತರ ಬಡ ಕುಟುಂಬಗಳು ಸ್ವಂತ ಮನೆಯ ಕನಸು ಹೊತ್ತುಕೊಂಡು ದುರ್ಬರ ಬದುಕು ಸಾಗಿಸುತ್ತಿವೆ.

ಕಾಗದದ ಮೇಲೆ ಉಚಿತ ಅಂತ ದಾಖಲಾಗುವ ಈ 'ಆಶ್ರಯ', 'ರಾಜೀವ ಗಾಂಧಿ ವಸತಿ ಯೋಜನೆ' ಮುಂತಾದ ಯೋಜನೆಗಳ ಬಹುತೇಕ ನಿವೇಶನಗಳು, ಮನೆಗಳು ನಿಜವಾದ ಅರ್ಹ ಬಡವರಿಗೆ ಸಿಕ್ಕುವುದೇ ಇಲ್ಲ. ಆಳುವ ಪಕ್ಷದ ನೇತಾರರು, ಅವರ ಹತ್ತಿರ ಬಂಧುಗಳು, ಸ್ನೇಹಿತರು, ಹಿಂಬಾಲಕರಿಗೆ ಅಥವಾ ಊರಿನ ಮುಖಂಡರು, ಪ್ರಭಾವಿಗಳಿಗೆ ಅವು 'ಕೋಟಾ' ಪ್ರಕಾರ ಹಂಚಿಕೆಯಾಗುತ್ತವೆ. ಒಂದೊಮ್ಮೆ ಹಂಚಿಕೆಯಾದವರಲ್ಲಿ ಬಡವರು, ಅರ್ಹರು ಇದ್ದರೆ ಅವರಿಂದಲೂ ಸಾಕಷ್ಟು 'ಶುಲ್ಕ'ವನ್ನು ಕಕ್ಕಿಸಿಲಾಗಿರುತ್ತದೆ. ಇದು ಜಗಜ್ಜಾಹಿರಾಗಿರುವ ಎಲ್ಲರೂ ಬಲ್ಲ ಬಹಿರಂಗ ರಹಸ್ಯ. ಇಂತಹ ಸಮಸ್ಯೆಯ ಕಡೆ ಸಿದ್ದರಾಮಯ್ಯ ಸರ್ಕಾರ ಗಮನ ಹರಿಸುತ್ತದೆಯಾ? ಬಡ ಜನರಿಗೆ ಈ ವಿಷಯದಲ್ಲಿ ನ್ಯಾಯ ಒದಗಿಸುತ್ತದೆಯಾ? ಚುನಾವಣೆಗೆ ಮುಂಚೆ ಕಾಂಗ್ರೆಸ್ ಕಚೇರಿಯ ಮುಂದೆ ಟಿಕೇಟ್‌ಗಾಗಿ ಯಾಕೆ ಅಷ್ಟೊಂದು ತಳ್ಳಾಟ ನಡೆಯಿತು ಅಂತ ಸಿದ್ದರಾಮಯ್ಯನವರಿಗೆ ಚೆನ್ನಾಗಿ ಗೊತ್ತಿದೆ. ಈಗವರು ಏನು ಮಾಡುತ್ತಾರೆ ? ಅದು ಇನ್ನೂ ಕಾದು ನೋಡಬೇಕಾದ ಪ್ರಶ್ನೆಯಾಗಿದೆ.

ಸಿಪಿಐ(ಎಂ) ಪಕ್ಷ, ಕರ್ನಾಟಕ ಪ್ರಾಂತ ರೈತ ಸಂಘ, ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘಟನೆ, ಡಿವೈಎಫ್ಐ ಮುಂತಾದ ಸಂಘಟನೆಗಳು ರಾಜ್ಯದ ನಾನಾ ಭಾಗಗಳಲ್ಲಿ ನಿವೇಶನ ರಹಿತರ ಸಮಾವೇಶಗಳನ್ನು ಸಂಘಟಿಸಿ, ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ ನಾನಾ ಹಂತಗಳ ಚಳುವಳಿ ನಡೆಸುತ್ತಾ ಬಂದಿವೆ. ರಾಜ್ಯ ಸರ್ಕಾರಕ್ಕೆ ಎಷ್ಟೋ ಬೇಡಿಕೆ ಪಟ್ಟಿ ಕೊಟ್ಟು ಮಾತುಕತೆ ನಡೆಸಿವೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 4–5 ಸಾವಿರ ನಿವೇಶನ ಹಂಚಿಕೆಯಾಗಬೇಕೆಂಬ ತೀರ್ಮಾನವೇನೋ ಆಯಿತು. ಬಡವರಿಗೆ ನಿಜಕ್ಕೂ ಸಿಕ್ಕದ್ದೆಷ್ಟು ಎಂದು ಪರಿಶೀಲಿಸಬೇಕಿದೆ. ಬಡವರಾದರೇನು ಬದುಕಿನ ಕನಿಷ್ಟ ಅಗತ್ಯಗಳು ಎಲ್ಲರಿಗೂ ಒಂದೇ. 20*30 ಅಡಿ ಅಳತೆ ನಿವೇಶನದ ಬದಲಿಗೆ 30*40 ಅಡಿ ನಿವೇಶನ ಕೊಡಿ. ನಿವೇಶನ ನೀಡಲು ಸರ್ಕಾರಿ ಭೂಮಿ ಇಲ್ಲದ ಕಡೆ ಜಿಲ್ಲಾಡಳಿತ ಅದನ್ನು ಖರೀದಿ ಮಾಡಿಕೊಡಲು ಗ್ರಾಮೀಣ ಪ್ರದೇಶದಲ್ಲಿ ಎಕರೆಗೆ 3 ಲಕ್ಷಕ್ಕೆ, ನಗರ ಪ್ರದೇಶದಲ್ಲಿ 9 ಲಕ್ಷಕ್ಕೆ ಜಮೀನು ಸಿಗುವುದು ಕಷ್ಟ. ಅದರ ಮಿತಿ ಹೆಚ್ಚಿಸಿ ಎಂದು ಒತ್ತಾಯಿಸಿದ್ದವು. ಐದು ವರ್ಷಗಳ ಬಿಜೆಪಿ ಸರ್ಕಾರದ ಕಾಲದಲ್ಲಿ ವಿರೋಧ ಪಕ್ಷದ ಮುಖಂಡ ಅನಿಸಿಕೊಂಡ ಸಿದ್ದರಾಮಯ್ಯನವರು ಕನಿಷ್ಟ ಈ ಅಂಶಗಳನ್ನು ಗಮನಿಸಿರಲೇ ಬೇಕು. ಇಲ್ಲವಾದರೇ ಈಗಲಾದರೂ ಗಮನಿಸಬೇಕು. ಜನ ಚಳುವಳಿಯು ಸರ್ಕಾರ ಈ ಅಂಶಗಳನ್ನು ಗಮನಿಸುವಂತೆ ಮಾಡಬೇಕಿದೆ.

ಗುಡಿಸಲು ಮುಕ್ತ ರಾಜ್ಯ ?

ವರ್ಷಕ್ಕೆ 2 ಲಕ್ಷ ಮನೆಗಳನ್ನು ಕಟ್ಟಿಕೊಡುವುದಾಗಿ ಬಿಜೆಪಿ ಸರ್ಕಾರ ಭರವಸೆ ನೀಡಿತ್ತು. ಮೂರುವರೆ ವರ್ಷ ಕಳೆದರೂ ಪ್ರವಾಹದಲ್ಲಿ ಮನೆ ಮಾರು ಕಳೆದುಕೊಂಡ ಉತ್ತರ ಕರ್ನಾಟಕದ ಜನರಿಗೆ ಮನೆ ಕಟ್ಟಿಸಿಕೊಡಲು ಬಿಜೆಪಿ ಸರ್ಕಾರದ ನೇತಾರರಿಗೆ ಪುರುಸೊತ್ತು ಸಿಗಲಿಲ್ಲ. ದಕ್ಷಿಣ ಭಾರತದಲ್ಲಿ ಪ್ರಪ್ರಥಮ ಬಾರಿಗೆ ಅಧಿಕಾರಕ್ಕೆ ಬಂದ ಬಿಜೆಪಿಯ ಯೋಗ್ಯತೆ ಜಗತ್ತಿಗೆ ಬಟಾಬಯಲಾಯಿತು. ಸಿದ್ದರಾಮಯ್ಯನವರು ಈಗೇನೋ ವರ್ಷಕ್ಕೆ 2 ಲಕ್ಷ ಮನೆ... ಐದು ವರ್ಷದ ಅವಧಿಯಲ್ಲಿ 10ಲಕ್ಷ ಮನೆಗಳನ್ನು ಕಟ್ಟಿಕೊಡಲಾಗುವುದು.

ರಾಜ್ಯವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡಲಾಗುವುದು ಎಂದು ಹೇಳಿದ್ದಾರೆ. ಬೇರೆ ಮನೆ ಾಡಲು ಅಗತ್ಯವಾದ ಹಣಬಲವಿಲ್ಲದೇ ಂದೇ ಮನೆಯಲ್ಲಿ ಇಕ್ಕಟ್ಟಿನಲ್ಲಿ ಎರಡು ಮೂರು ಸಾರಗಳನ್ನು ನಡೆಸುತ್ತಿರುವುವವರು, ಯಾಗಿ ಸಂಸಾರವನ್ನೇ ನಡೆಸಲು ಗದೇ ಸಂಕಟಪಡುತ್ತಿರುವವರು ಲಕ್ಷಾಂತರ ಂಖ್ಯೆಯಲ್ಲಿ ಇದ್ದಾರೆ. ಈ ವಸ್ತುಸ್ಥಿತಿಯನ್ನು ಮನಿಸಿದರೆ ಜನರ ಮನೆ ನಿವೇಶನ- ಂನೆಗಳ ಅಗತ್ಯ 2018 ರಲ್ಲಿ 10 ಲಕ್ಷ ಗಿರುವುದಿಲ್ಲ, ಇನ್ನೂ ತುಂಬಾ ಹೆಚ್ಚಿರುತ್ತದೆ. ಂನೆ ನಿವೇಶನಗಳ ಅಗತ್ಯ ಈಗ ಎಷ್ಟಿದೆ? ಗ ಎಷ್ಟಿರುತ್ತದೆ ? ಎಂದು ಸರಿಯಾಗಿ ಂದಾಜು ಮಾಡಿ ಸರ್ಕಾರ ಯೋಜನೆ ೂಪಿಸಬೇಕಾಗುತ್ತದೆ. ಈ ವಿಷಯದಲ್ಲಿ ರ್ಕಾರದ ಕಡೆಯಿಂದ ತುರ್ತು ಕ್ರಮ ಗತ್ಯವಾಗಿದೆ. ಕಾಂಗ್ರೆಸ್ ಸರ್ಕಾರ ತಾನೇ ಾನಾಗಿ ಈ ಎಲ್ಲವನ್ನೂ ಮಾಡಿಬಿಡುತ್ತದೆ ಂಬ ಭ್ರಮೆಯನ್ನೂ ಜನಚಳುವಳಿ ಟ್ಟುಕೊಳ್ಳಬೇಕಿಲ್ಲ. ತನ್ನ ಕರ್ತವ್ಯದ ೆ ಗಮನ ಕೊಡಬೇಕಿದೆ.

ಹುಕುಂ ಮತ್ತು ಅರಣ್ಯ ಭೂಮಿ ್ರಶ್ನೆ

ಕರ್ನಾಟಕ ರಾಜ್ಯದಲ್ಲಿ ಸು. 25 ಕ್ಷಕ್ಕೂ ಅಧಿಕ ಕುಟುಂಬಗಳು ಸಾಗುವಳಿ ಾಡುತ್ತಿರುವ ಸುಮಾರು 70 ಲಕ್ಷ ಎಕ- 'ಬಗರ್ ಹುಕುಂ' ಎನ್ನುವ ವ್ಯವಸಾಯ ೂಮಿಗೆ ಸಂಬಂಧಿಸಿದ ಪ್ರಶ್ನೆ ನಿಜವಾಗಿಯೂ ಡಜನರ ಬದುಕಿನಲ್ಲಿ ಸಾಕಷ್ಟು ಬದಲಾವಣೆ ರಬಲ್ಲ ಒಂದು ಪ್ರಮುಖ ಪ್ರಶ್ನೆಯಾಗಿದೆ. ಈ ಪ್ರಶ್ನೆಯನ್ನು ಇತ್ಯರ್ಥ ಪಡಿಸಲು ರ್ಕಾರಕ್ಕೆ ಖಜಾನೆಯಿಂದ ಯಾವುದೇ ರ್ಚು ಆಗುವುದಿಲ್ಲ. ಬಡವರು ಹತ್ತಾರು ರ್ಷಗಳಿಂದ ಉಳುಮೆ ಮಾಡುತ್ತಿರುವ ುಂಡು ಸರ್ಕಾರಿ ಭೂಮಿಯನ್ನು ಅದು ಮದೇ ಅಂತ ಹಕ್ಕು ಪತ್ರ ಕೊಟ್ಟರೆ ಅಷ್ಟೆ ಾಕು. ಎಷ್ಟೋ ಚಳುವಳಿಗಳನ್ನು ನಡೆಸಿ ತ್ತಡ ಹಾಕಿದರೂ ಬಿಜೆಪಿ ಸರ್ಕಾರ ಈ ಗೆಗೆ ಇಚ್ಛಾಶಕ್ತಿ ತೋರಲಿಲ್ಲ. ಬದಲಿಗೆ ಬಡರೈತರನ್ನು ಒಕ್ಕಲೆಬ್ಬಿಸಲು ಬುಲ್ಡೋಜರ್ ತಂದಿತು. ಅದರ 'ತಾಪತ್ರಯ'ಗಳು ಅದರ 'ಚಿಂತೆ'ಗಳು, 'ಬೇನೆ'ಗಳು ಬೇರೆ ಏನೋ ಇದ್ದವು.

ಇದುವರೆಗೆ ಬಗರ್ ಹುಕುಂ ಸಕ್ರಮ ಕೋರಿ ಅರ್ಜಿ ನಮೂನೆ 50, 53 ಅಡಿಯಲ್ಲಿ ಸಲ್ಲಿಸಲಾಗಿರುವ ಅರ್ಜಿಗಳಲ್ಲಿ 12,35,380 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಮೇ 2013 ರ ಹೊತ್ತಿಗೆ ಈ ವಿಷಯದಲ್ಲಿ 4,26,411 ಅರ್ಜಿಗಳು ಇತ್ಯರ್ಥವಾಗದೇ ಬಾಕಿ ಇದ್ದವು. ತಿರಸ್ಕೃತ ಅರ್ಜಿಗಳನ್ನು ಸರ್ಕಾರ ಮರುಪರಿಶೀಲಿಸುವ ವ್ಯವಸ್ಥೆ ಮಾಡಬೇಕು. ಮಹಾನಗರ, ನಗರ ಸಭೆ, ಪಟ್ಟಣಗಳ ಆಚೆ



ನಿರ್ಧಿಷ್ಟ ಸುತ್ತಳತೆಯೊಳಗೆ ಬಗರ್ ಹುಕುಂ ಭೂಮಿಗೆ ಸಂಬಂಧಿಸಿದ ಅರ್ಜಿಗಳನ್ನಂತೂ ಸರ್ಕಾರ ಪರಿಗಣಿಸುವುದೇ ಇಲ್ಲ ಎಂಬ ನೀತಿ ಇದೆ. ಇದು ಬದಲಾಗ ಬೇಕು.

ಅರಣ್ಯ ಭೂಮಿ ಪ್ರಶ್ನೆ

ಅದೇ ರೀತಿ ಅರಣ್ಯ ಭೂಮಿಯ ಪ್ರಶ್ನೆ. ಎಡಪಕ್ಷಗಳು, ಎಡಶಕ್ತಿಗಳ ಒತ್ತಡದಿಂದ ಅರಣ್ಯ ಹಕ್ಕು ಕಾಯ್ದೆ–2006 ಜಾರಿಗೆ ಬಂದರೂ ರಾಜ್ಯದಲ್ಲಿ ಅದರ ಲಾಭವು ಬಡಕೃಷಿಕರು ಮತ್ತು ಬುಡಕಟ್ಟು ಜನರು, ಆದಿವಾಸಿಗಳಿಗೆ ದಕ್ಕಲು ರಾಜ್ಯ ಬಿಜೆಪಿ ಸರ್ಕಾರ ಬಿಡಲೇ ಇಲ್ಲ. ಎಡಶಕ್ತಿಗಳ ಮೇ–2013 ರ ಚಳುವಳಿ ಹೊತ್ತಿನಲ್ಲಿ ಇದ್ದ ಸ್ಥಿತಿ ಇದು. ಸಾಗುವಳಿ ಮಾಡಲಾದ ಬಹುತೇಕ ಗ್ರಾಮಗಳ ಅಂಚಿನ ಅರಣ್ಯ ಭೂಮಿ ಸಕ್ರಮಕ್ಕೆ ಸಲ್ಲಿಸಲಾದ 1,63,115 ಅರ್ಜಿಗಳಲ್ಲಿ 1,04,087 ಅರ್ಜಿಗಳನ್ನು ತಿರಸ್ಕರಿಸಲಾಗಿತ್ತು. ಇತ್ಯರ್ಥವಾಗಿದ್ದದ್ದು 6,073 ಅರ್ಜಿಗಳು ಮಾತ್ರ. ಮಂಜೂರಾಗಿದ್ದದ್ದು 8,503 ಎಕರೆ ಭೂಮಿ ಮಾತ್ರ. ಕಾನೂನು, ಅರಣ್ಯವಾಸಿ ಬುಡಕಟ್ಟು ಜನರು ಮತ್ತು ಇತ–ರೆ ಅರಣ್ಯವಾಸಿಗಳು ಇಬ್ಬರಿಗೂ ಸಾಗುವಳಿ ಮಾಡಲಾದ ಅರಣ್ಯ ಭೂಮಿಯ ಸಂಬಂಧ ಹಕ್ಕು ನೀಡಿದ್ದರೂ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಅದಕ್ಕೆ ಯಾವ ಬೆಲೆಯೂ ಸಿಕ್ಕಲಿಲ್ಲ.

ಸಾಮಾಜಿಕ ನ್ಯಾಯ ?!

ಈಗ ಸಾಮಾಜಿಕ ನ್ಯಾಯದ ಕುರಿತು ಬಹಳ ದೊಡ್ಡ ದೊಡ್ಡ ಮಾತುಗಳು ಕೇಳಿ ಬರುತ್ತಿವೆ. ಕರ್ನಾಟಕ ರಾಜ್ಯದ ಲಕ್ಷಾಂತರ ದಲಿತ, ಹಿಂದುಳಿದ ಸಮುದಾಯಗಳಿಗೆ ಸೇರಿದ ಬಡಜನರ, ಬಡರೈತರ ಬದುಕಿನ ಗಂಭೀರ ಪ್ರಶ್ನೆ–ಈ ಬಗರ್ ಹುಕುಂ ಮತ್ತು ಅರಣ್ಯ ಭೂಮಿ ಸಕ್ರಮದ ಪ್ರಶ್ನೆ. ಈ ಪ್ರಶ್ನೆ ನ್ಯಾಯಯುತವಾಗಿ ಇತ್ಯರ್ಥವಾದರೆ ಅದು ಸಾಮಾಜಿಕ ನ್ಯಾಯ ನೀಡುವ ಒಂದು ದೊಡ್ಡ ಹೆಜ್ಜೆಯೇ ಆಗುತ್ತದೆ. ಬಹುತೇಕ ಸಮಾಜದ ಅವಕಾಶ ವಂಚಿತ ಸಮುದಾಯಗಳಿಗೆ ಸೇರಿದ ಈ ಜನರು ತಮ್ಮದು ಎಂಬ ಸ್ವಂತದ ಜಮೀನು ಪಡೆದು–ಕೊಂಡರೆ ಸ್ವಾವಲಂಬನೆಯ, ಸ್ವಾಭಿಮಾನದ ಬದುಕು ನಡೆಸಲು ಅವಕಾಶವಾಗುತ್ತದೆ. ಬಡತನ ನಿವಾರಣೆಯ ನಿಜವಾದ ಕ್ರಮಕ್ಕೂ ಮತ್ತು ನಾಡು ನಿಜವಾದ ಜನಪರ ಅಭಿವೃದ್ದಿಯ ಹಾದಿಯಲ್ಲೂ ಸಾಗುವುದಕ್ಕೂ ಅನುವು ಮಾಡಿಕೊಟ್ಟಂತಾಗುತ್ತದೆ.

ಜಾಗತೀಕರಣದ ಚೌಕಟ್ಟು

ಕಾಂಗ್ರೆಸ್ ಪಕ್ಷವು ತನ್ನ ಆರ್ಥಿಕ ನೀತಿಗಳಿಗೆ ಹಾಕಿಕೊಂಡಿರುವ ಉದಾರೀಕರಣ, ಜಾಗತೀಕರಣ, ಖಾಸಗೀಕರಣ ನೀತಿಗಳ ಚೌಕಟ್ಟು ಮೇಲೆ ಸೂಚಿಸುವ ಎಲ್ಲ ಪರಿಹಾರಗಳನ್ನು ತಿರಸ್ಕರಿಸುತ್ತದೆ ಮತ್ತು ನಿರ್ಲಕ್ಷಿಸುತ್ತದೆ. ಇತ್ತ ಕಣ್ಣು ಹಾಯಿಸದಂತೆ ಆಳುವವರನ್ನು ನಿರ್ಬಂಧಿಸುತ್ತದೆ. ಬಂಡವಾಳಗಾರರ, ಶ್ರೀಮಂತರ ಸೇವೆಯೇ ಸರ್ಕಾರದ ಆದ್ಯತೆ. ಅದೇ ಸರ್ಕಾರಗಳ ನಿಜವಾದ ಕಾರ್ಯಸೂಚಿ, ಈ ವರ್ಗಗಳ ಸಂತೃಪ್ತಿಯ ಬೆನ್ನ ಹಿಂದೆ 'ಅಭಿವೃದ್ಧಿ' ಎನ್ನುವುದು ಅನುಸರಿಸಿಕೊಂಡು ಬರುತ್ತದೆ ಎಂದು ಹೇಳುತ್ತದೆ. ಅದಕ್ಕೆ ತಕ್ಕಂತೆ ಆಳುವ ಸರ್ಕಾರಗಳ ಆದ್ಯತೆಗಳನ್ನು ನಿಗದಿ ಮಾಡುತ್ತದೆ. ಈ ಚೌಕಟ್ಟು ಮೀರಿ ಸಿದ್ದರಾಮ್ಯನವರ ಸರ್ಕಾರ ಇಂತಹ ಜನಪರ ಕ್ರಮ ವಹಿಸಲು ಮುಂದಾಗುತ್ತದಾ ? ಪ್ರಖರ, ಪ್ರಭಾವಶಾಲಿ ಜನಚಳುವಳಿಗಳು ಸಿಡಿದೆದ್ದು ಬಂದರೆ ಯಾವ ಪಕ್ಷದ ಸರ್ಕಾರವಾದರೂ ಸರಿಯೇ. ಯಾರಾದರೂ ಸರಿಯೆ. ತಲೆಬಾಗಲೇ ಬೇಕು. ವೆನುಜುವೆಲಾ, ಬೊಲಿವಿಯಾಗಳಲ್ಲಿ ಆಗಿದ್ದು ಭಾರತದಲ್ಲಿ ಯಾಕಾಗಲಾರದು. ಭಾರತದಲ್ಲಿ ಕರ್ನಾಟಕವೂ ಇಂತಹ ಒಂದು ಯುಗ ಪಲ್ಲಟಕ್ಕೆ–ಬದಲಾವಣೆಗೆ ಯಾಕೆ ನಾಂದಿ ಹಾಡಬಾರದು.

ದಲಿತರ ಮೇಲಿನ ದೌರ್ಜನ್ಯ, ಕೊಲೆಗಳು, ಜಾತಿ ತಾರತಮ್ಯ, ಅಸ್ಪೃಶ್ಯತೆ, ಕೋಮುವಾದಿ ಶಕ್ತಿಗಳ ಉಪಟಳ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿನ ಅಕ್ರಮ ಭ್ರಷ್ಟಾಚಾರ, ನಿರುದ್ಯೋಗಿಗಳ ಬವಣೆಗಳು, ಶಿಕ್ಷಣ ವ್ಯಾಪಾರೀಕರಣದ ಸವಾಲುಗಳು, ಮಹಿಳೆಯರ ಸಂಕಷ್ಟಗಳು, ಕೃಷಿಯ ಕಂಪನೀಕರಣ, ಭೂಸುಧಾರಣೆಯ ಪ್ರಶ್ನೆಯ ಘೋರ ನಿರ್ಲಕ್ಷ್ಯ, ಕಾರ್ಮಿಕ ಕಾಯ್ದೆಗಳ ನಿರ್ಲಜ್ಜ ಉಲ್ಲಂಘನೆ, ಕನಿಷ್ಟ ಕೂಲಿಯೂ ಜಾರಿಯಾಗದ ದುರ್ಬರ ಸ್ಥಿತಿ ....ಗಣಿ ಲೂಟಿ, ಭೂಕಬಳಿಕೆ, ಬ್ರಷ್ಟಾಚರದ ಪ್ರಕರಣಗಳು ಮುಂತಾಗಿ ಎಷ್ಟೋ ಪ್ರಶ್ನೆಗಳು ಕಾದಿವೆ. ಎಡಪಕ್ಷಗಳಿಗೆ ಈ ಸಾರಿಯೂ ವಿಧಾನ ಸಭೆಯಲ್ಲಿ ಪ್ರಾತಿನಿಧ್ಯ ಇಲ್ಲ. ಜನಚಳುವಳಿಗಳ ಮುಂದಿರುವ ಸವಾಲು ಬಹಳ ದೊಡ್ಡದಾಗಿದೆ. ಮುಂಚೆಗಿಂತ ಇನ್ನೂ ಜೋರಾಗಿ ಕೂಗು ಹಾಕಬೇಕಿದೆ. ದೈತ್ಯ ಸವಾಲು. ಹಿಂದೆ ಮುಂದೆ ನೋಡದೆ ಕೈಗೆ ಎತ್ತಿಕೊಳ್ಳಬೇಕಿದೆ.

...ಜ್ಯ ಲೂಟಿ... ದೇಶ ಲೂಟಿ...

ಪುಟ 8 ರಿಂದ

ಮುಖ್ಯಮಂತ್ರಿಯಾಗಿ ನಿಯೋಜಿತನೆಂದು ಘೋಷಿಸಿದ ಕೂಡಲೇ ಚಾಮುಂಡಿ ಬೆಟ್ಟಕ್ಕೆ ಹೋಗಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ್ದು, ಆಸ್ತಿಕತೆಯೊ? ನಾಸ್ತಿಕತೆಯೊ? ಅವರೇ ಹೇಳಬೇಕು? ನಾಸ್ತಿಕನು ಅಲ್ಲದ, ಆಸ್ತಿಕನೂ ಅಲ್ಲದ ಇನ್ನೊಂದು ಸಿದ್ಧಾಂತ ಜಗತ್ತಿನಲ್ಲಿ ಯಾವುದಾದರು ಇದೆಯೋ ಎಂಬುದನ್ನು, ಅವರು ಯಾವಾಗ ಸಂಶೋಧನೆ ಮಾಡಿದರೋ, ಅವರೇ ಸ್ಪಷ್ಟಪಡಿಸಬೇಕು. ಎಲ್ಲಾ ಮುಖ್ಯಮಂತ್ರಿಗಳ ಹಾಗೆ ಇವರು ಪೂಜೆ ಸಲ್ಲಿಸಿ ತನ್ನ ಕಛೇರಿಗೆ ಹೋಗಿದ್ದು, ಮೂಢನಂಬಿಕೆ ಹೇಗೆ ಅಲ್ಲ ಎಂದು ಅವರೇ ಹೇಳಬೇಕು. ಇದು ನನ್ನ ಕಡೆಯ ಚುನಾವಣೆ, ನಾನು ಇನ್ನು ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಹೇಳಿ ಅದಕ್ಕೆ ಅವರು ಕೊಟ್ಟಿರುವ ಕಾ... ಚುನಾವಣಾ ವ್ಯವಸ್ಥೆ ಭ್ರಷ್ಟವಾಗಿದೆ, ಜಾತಿ–ಹಣದ ಪ್ರಭಾವ ಹೆಚ್ಚಾಗಿದೆ ಎಂದು. ಆದರೆ ಅವರ ಸಂದರ್ಶನದಲ್ಲಿ ಜಾತಿವಾದಿ ಶಕ್ತಿಗಳನ್ನು ನಿಗ್ರಹಿಸಲು ಯಾವುದೇ ಕ್ರಮವನ್ನು ಅವರು ಪ್ರಸ್ತಾಪ ಮಾಡಲಿಲ್ಲ. ಚುನಾವಣೆಯಲ್ಲಿ ಹಣದ ಪ್ರಭಾವವನ್ನು ತಡೆಯಲು ಏನು ಕ್ರಮ ತೆಗೆದುಕೊಳ್ಳಲಾಗುವುದೆಂಬುದರ ಬಗ್ಗೆ ಸೂಚನೆಯೂ ಇಲ್ಲ. ಇನ್ನು ಸಿದ್ದರಾಮಯ್ಯನವರ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ರಾಜ್ಯದ ಮೂಲೆಮೂಲೆಗಳಿಂದ ಎಲ್ಲಾ ಪಕ್ಷಗಳಿಗೆ ಸೇರಿದ ಒಂದು ನಿರ್ಧಿಷ್ಟ ಸಮುದಾಯದವರು ಮಾತ್ರವೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು, ಯಾವುದರ ಸೂಚಕವೊ ಸಿದ್ದರಾಮಯ್ಯನವರೇ ಹೇಳಬೇಕು. ಈ ಎಲ್ಲಾ ದ್ವಂದ್ವಗಳು ವೈರುಧ್ಯಗಳು ಲೋಹಿಯಾವಾದದ ಲಕ್ಷಣಗಳೆ? ಯಾಕೆ–ಂದರೆ ಮುಖ್ಯಮಂತ್ರಿಯಾದವರು ದ್ವಂದ್ವಗಳು ಮತ್ತು ವೈರುಧ್ಯಗಳಲ್ಲಿ ಸಿಕ್ಕಿಹಾಕಿಕೊಂಡರೆ ಆದು ರಾಜ್ಯಕ್ಕೆ ಅಪಾಯಕಾರಿ.

ಇಲ್ಲಿ ಬಹಳ ಮುಖ್ಯವಾದ ಎರಡು ಪ್ರಶ್ನೆಗಳಿವೆ. ಒಂದು ಕಾಂಗ್ರೆಸ್ಸಿನ ಹುಟ್ಟು ಗುಣವಾಗಿರುವ ಭಿನ್ನಮತ, ಈಗಾಗಲೇ ಅದು ಮುಖ್ಯಮಂತ್ರಿ ಆಯ್ಕೆ ಆಗುವ ಸಂದರ್ಭದಲ್ಲಿ ವ್ಯಕ್ತವಾಗಿದೆ (ಖರ್ಗೆಪರ ಪ್ರತಿಭಟನೆ). ಎರಡನೇಯದು ಮೂಲತಃ ಸಿದ್ದರಾಮಯ್ಯ ಕಾಂಗ್ರೆಸ್ಸಿನವರಲ್ಲ ಹಾಗೂ ಕಾಂಗ್ರೆಸ್ಸಿನ ಸಿದ್ಧಾಂತದಲ್ಲಿ ಬೆಳೆದವರು ಅಲ್ಲ, ಸಿದ್ದರಾಮಯ್ಯನವರು ಮೂಲತಃ ಲೋಹಿಯವಾದಿಗಳು. ಕುರುಡು ಕಾಂಗ್ರೆಸ್ ವಿರೋಧಿ ರಾಜಕೀಯದಲ್ಲೇ ಬೆಳೆದು ಬಂದವರು. ರಾಜಕೀಯ ಸ್ವಹಿತಾಸಕ್ತಿಗಳ ಅನಿವಾರ್ಯತೆಯಿಂದ ಕಾಂಗ್ರೆಸ್ಸಿಗೆ ಬಂದವರು ಇಲ್ಲಿ ಸೈದ್ಧಾಂತಿಕ ವೈರುಧ್ಯಗಳ ಮೂಲಕ ಕಾಂಗ್ರೆಸ್ಸಿಗರು ಮತ್ತು ವಲಸೆ ಕಾಂಗ್ರೆಸ್ಸಿಗರೆಂಬ ಹೊಸ ಭಿನ್ನಮತ ಪ್ರಾರಂಭವಾಗುವುದರಲ್ಲಿ ಅನುಮಾನಗಳಿಲ್ಲ. ಇನ್ನೊಂದು ಕಡೆ ರಾಜ್ಯದ ಎರಡು ಪ್ರಮುಖ ರಾಜಕೀಯ ಶಕ್ತಿಗಳಾದಂತಹ ಒಕ್ಕಲಿಗರು ಮತ್ತು ಲಿಂಗಾಯಿತ ಜನಾಂಗದ ಒತ್ತಡಗಳನ್ನು ಇವರು ಹೇಗೆ ನಿಭಾಯಿಸುತ್ತಾರೆ. ಇವರ "ಅಹಿಂದ" ರಾಜಕಾರಣವನ್ನು ಏನು ಮಾಡುತ್ತಾರೆ? ಅದರ ಭವಿಷ್ಯವೇನು? ಈ ಎಲ್ಲಾ ಸವಾಲುಗಳು, ವೈರುಧ್ಯಗಳು ಮತ್ತು ದ್ವಂದ್ವಗಳ ಮಧ್ಯೆ ರಾಜ್ಯದ ಭವಿಷ್ಯವೇನು? ರಾಜ್ಯದ ಆರು ಕೋಟಿ ಜನರ ಸಮಸ್ಯೆಗಳ ಗತಿ ಏನು?

ಇನ್ನು "ರಾಷ್ಟ್ರೀಯ ಪಕ್ಷಗಳನ್ನು ಧಿಕ್ಕರಿಸಿ, ಪ್ರಾದೇಶಿಕ ಪಕ್ಷಗಳನ್ನು ಬೆಂಬಲಿಸಿ" ಎಂದು ಕರ್ನಾಟಕದ ಜನತೆಗೆ ಕರೆಕೊಟ್ಟ ಜೆಡಿ(ಎಸ್) ಕೆಜೆಪಿ ಮತ್ತು ಬಿಎಸ್‌ಆರ್ ಪಕ್ಷಗಳನ್ನು ಜನತೆ ತಿರಸ್ಕರಿಸಿದ್ದಾರೆ. ಜೆಡಿ(ಎಸ್) ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಬಿಜೆಪಿ ಮತ್ತು ಕಾಂಗ್ರೆಸ್ಸಿಗೆ ರಾಜ್ಯದಲ್ಲಿ ತಾನೇ ನಿಜವಾದ ಪರ್ಯಾಯವೆಂದು ಜನತೆಯ ಮುಂದೆ ಅಟಾಟೋಪವನ್ನು ಪ್ರದರ್ಶಿಸಿದ ಜೆಡಿ(ಎಸ್) ತನ್ನ ಇತಿಮಿತಿಗಳಿಂದ ಮೇಲೆ ಬರಲು ಸಾಧ್ಯವೇ ಆಗಲಿಲ್ಲ ಎಂಬುದನ್ನು ಆ ಪಕ್ಷ ಅರಿಯಬೇಕು. ಇಂತಹ ಸಂದರ್ಭದಲ್ಲಿ ಈ ಚುನಾವಣೆಯಲ್ಲಿ ಎಡಪಕ್ಷಗಳ ಪರಾಭವ ಗಮನಾರ್ಹವಾಗಿದೆ. ಹಾಗಾಗಿ ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ನಿಜವಾದ ಜನಪರ ರಾಜಕೀಯ ಪರ್ಯಾಯವನ್ನು ಬೆಳೆಸುವ ಹೊಣೆ ಸಿಪಿಐ(ಎಂ) ಪಕ್ಷದ ಮೇಲಿದೆ. ಜನಪರ ಹೋರಾಟಗಳ ಮುಖಾಂತರ ಜನಪರ ಪರ್ಯಾಯ ರಾಜಕೀಯ ಶಕ್ತಿಗಳನ್ನು ಬಲಪಡಿಸಬೇಕಾಗಿದೆ.


ಕಾಂಗ್ರೆಸ್ ಸರ್ಕಾರದ ಪದಗ್ರಹಣ ಮತ್ತು ಜನಚಳುವಳಿಗಳ ಮುಂದಿರುವ ಸವಾಲುಗಳು

ಆಹಾರ ಧಾನ್ಯ -ರೇಷನ್ ಕಾರ್ಡು, ಮನೆ ನಿವೇಶನಗಳ ಜೊತೆಗೆ ಬಗರ್ ಹುಕುಂ ಸಾಗುವಳಿದಾರರು, ಅರಣ್ಯ ಭೂಮಿಯ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಿ ರಾಜ್ಯದ ಲಕ್ಷಾಂತರ ಭೂಹೀನ ಬಡ ರೈತರನ್ನು ಸ್ವಾವಲಂಬನೆಯ ಸ್ವಾಭಿಮಾನದ ಬದುಕಿನತ್ತ ಕರೆದುಕೊಂಡು ಹೋಗುವುದೇ ಒಂದು ದೊಡ್ಡ ಸಾಮಾಜಿಕ ನ್ಯಾಯದ ಕ್ರಮವಾಗುತ್ತದೆ. ಅದು ಬಿಟ್ಟು ಸಾಮಾಜಿಕ ನ್ಯಾಯದ ಬಗೆಗೆ ಏನೇ ಮಾತಾಡಿದರೂ ಅದು ಬರಿ ಮಾತಷ್ಟೇ ಆಗುತ್ತದೆ.

- ಆರ್. ರಾಮಕೃಷ್ಣ.

'ಪ್ರಜಾವಾಣಿ' ಪತ್ರಿಕೆಯ ಬರಹಗಾರರಾದ ಪದ್ಮರಾಜ ದಂಡಾವತೆಯವರು ಇತ್ತೀಚೆಗೆ ಒಂದು ಲೇಖನ ಬರೆದಿದ್ದರು. ಬಡವರಿಗೆ ಕೆ.ಜಿ.ಗೆ ಒಂದು ರೂಪಾಯಿ, ಎರಡು ರೂಪಾಯಿ ಬೆಲೆಯಲ್ಲಿ ಅಕ್ಕಿ ಕೊಡುವ ರಾಜಕೀಯ ಪಕ್ಷಗಳ ಭರವಸೆಯ ಬಗೆಗೆ ಅವರು ಅಲ್ಲಿ ಅಲವತ್ತುಕೊಂಡಿದ್ದರು. ಈ ರೀತಿ ಅಗ್ಗದ ಬೆಲೆಯಲ್ಲಿ ಆಹಾರ ಧಾನ್ಯ ಕೊಡುವ ಕ್ರಮ ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತಿದೆ. ರೈತರು ಕಷ್ಟಪಟ್ಟು ಮೈ ಬಗ್ಗಿಸಿ ದುಡಿಯುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಸ್ವಾಭಿಮಾನವನ್ನು ಕಳೆದುಕೊಂಡು ಸರ್ಕಾರ ಕೊಡುವುದಕ್ಕೆ ಕೈಚಾಚಿ ನಿಲ್ಲುವ ಸ್ಥಿತಿಗೆ ಬಂದಿದ್ದಾರೆ ಎನ್ನುವುದು ಅವರ ಹಳಹಳಿಕೆ.

ಕರ್ನಾಟಕ ರಾಜ್ಯದಲ್ಲಿರುವ ಒಟ್ಟು 1.10 ಕೋಟಿ ಕುಟುಂಬಗಳಲ್ಲಿ ಸುಮಾರು 36 ಲಕ್ಷ ಕುಟುಂಬಗಳಿಗೆ ತಮ್ಮದು ಎಂಬ ಒಂದು ಗುಂಟೆ ತುಂಡು ಜಮೀನು ಕೂಡ ಇಲ್ಲ. ಪರರ ಜಮೀನಿನಲ್ಲಿ ಕೂಲಿ. ಅದು ಕೂಲಿ ಇದ್ದರೆ, ಕೊಟ್ಟರೆ ಮಾತ್ರ ಎನ್ನುವ ಸತ್ಯ, ಪಾಪ ದಂಡಾವತೆಯವರಂತಹ ಹಿರಿಯ ಪತ್ರಕರ್ತರಿಗೇ ನೆನಪಿಲ್ಲವೆಂದ ಮೇಲೆ ರಾಜ್ಯದ ರಾಜಧಾನಿಯಲ್ಲಿ ವಿಧಾನಸೌಧದ ಬಹು ಮಹಡಿಗಳ ದಂತ ಗೋಪುರಗಳಲ್ಲಿ ಕುಳಿತ ಉನ್ನಾಧಿಕಾರಿಗಳಿಗೆ ಹೇಗೆ ನೆನಪಿನಲ್ಲಿರಲು ಸಾಧ್ಯ ? ಕರ್ನಾಟಕದಲ್ಲಿ ರೈತರು ಅಂದಾಕ್ಷಣ ಅವರೆಲ್ಲರೂ ಹತ್ತಾರು ಎಕರೆ ಜಮೀನು, ನೀರಾವರಿ ಸೌಕರ್ಯ ಇರುವ ರೈತರು ಎಂದು ದಂಡಾವತೆಯವರಾದರೂ ಹೇಗೆ ಭಾವಿಸಿದರೋ !! ಜಮೀನಿದ್ದ ರೈತರೆಲ್ಲ ಅಕ್ಕಿ, ಜೋಳವನ್ನೇ ಬೆಳೆಯುವ ಅನುಕೂಲ ಇರುವ ರೈತರಲ್ಲ ಅನ್ನುವ ಸತ್ಯವು ದಂಡಾವತೆಯವರಿಗೆ ಹೊಳೆಯಲಿಲ್ಲ. ಏನೋ ಇರುವ ಒಂದು, ಒಂದುವರೆ, ಎರಡೆಕರೆ ತುಂಡು ಜಮೀನಿನಲ್ಲಿ ಬರೀ ಅನ್ನದ ಕಾಳು ಬೆಳೆದುಕೊಂಡರೆ ಅಡುಗೆಗೆ ಬೇಕಾದ ಉಪ್ಪು, ಮೆಣಸಿನ ಕಾಯಿ, ಬೇಳೆ, ಎಣ್ಣೆ, ಸಕ್ಕರೆಗೇನು ಮಾಡುವುದು? ಮನೆ ಮಂದಿ ಯಾರಾದರೂ ಕಾಯಿಲೆ ಬಿದ್ದ-ರೆ ಔಷಧಿಯ ಖರ್ಚಿಗೆ ದುಡ್ಡು ಎಲ್ಲಿಂದ ತರಬೇಕು ? ಹಬ್ಬ ಹರಿದಿನಗಳಿಗೆ ಒಂದು ಹೊಸ ಸೀರೆ-ರವಿಕೆ, ಪಂಚೆ-ಅಂಗಿಯನ್ನಾದರೂ ಕೊಂಡುಕೊಳ್ಳುವುದು ಬೇಡವೇ? ಶಾಲಾ ಕಾಲೇಜುಗಳ ಮಕ್ಕಳ ಫೀಸು ಕಟ್ಟುವವರು ಯಾರು ? ಚಿಂತೆ ಕಾಡಲಿಲ್ಲ.



ಇರಲಿ. ದಂಡಾವತಿಯವರು ಎಲ್ಲಿಂಯಾದರೂ ಮಳೆಮೋಡವನ್ನು ಕಂಡ ನವಿಲು ಗರಿಬಿಚ್ಚಿ ಕುಣಿಯುವುದನ್ನು ನೋಡಿರಬಹುದು. ಆದರೆ ರಾಜ್ಯದ ಸಾವಿರ ಸಾವಿರ ದಲಿತ ಕೇರಿಗಳಲ್ಲಿ ಬದುಕು ಸವೆಸುತ್ತಿರುವವರನ್ನು ಹಸಿವು ಎಂಬ ರಣಹದ್ದು ಯಾವ ಪರಿ ನಿರ್ದಯವಾಗಿ ಕುಕ್ಕಿ ಕುಕ್ಕಿ ತಿನ್ನುತ್ತಿದೆ ಎಂದು ಪಾಪ ಅವರು ನೋಡಿಲ್ಲದಿರಬಹುದು. ರಾಜ್ಯದ ಮಹಿಳೆಯರು, ಮಕ್ಕಳ ಅಪೌಷ್ಟಿಕತೆ ಕುರಿತ ಅಧ್ಯಯನ ವರದಿಗಳನ್ನು ಓದಲು ಸಹ ಅವರಿಗೆ ಬಿಡುವು ಸಿಕ್ಕಿಲ್ಲದಿರಬಹುದು. 500 ರೂಪಾಯಿ 600 ರೂಪಾಯಿ ಸಂಬಳಕ್ಕೆ ಬಿಸಿಯೂಟ ನೌಕರರನ್ನು, 1300-1400 ರೂಪಾಯಿಗಳ ಸಂಬಳಕ್ಕೆ ಅಂಗನವಾಡಿ ನೌಕರರನ್ನು ಆಳುವ ಸರ್ಕಾರಗಳೇ ತಿಂಗಳಿಡೀ ದುಡಿಸುತ್ತಿವೆ ಎಂಬುದೂ ಪಾಪ ಅವರ ಗಮನಕ್ಕೆ ಬಂದಿಲ್ಲದಿರಬಹುದು.

ಇನ್ನು ಅಧಿಕಾರಿಗಳೋ- ಅಗ್ಗದ ಅಕ್ಕಿ ನೀಡಿಕೆ ಮಾತು ಆಗ-ಹೋಗದ ಮಾತು, ಖಜಾನೆಗಂತೂ ಘಾತು ಅಂತಲೇ ಅವರು ಮುಖ್ಯಮಂತ್ರಿಯ ಕಿವಿ ಕಚ್ಚಲು ನೋಡುತ್ತಾ-ರೆ. ವಿಶ್ವ ಬ್ಯಾಂಕಿನ ಶಂಖ ಹರಿಸಿದ ತೀರ್ಥ. ಕಣ್ಮುಚ್ಚಿ ನಮಿಸಿ ಕುಡಿಯಲೇ ಬೇಕು.

ಲೋಕಸಭಾ ಚುನಾವಣೆಯ ವಾಸನೆ

ಲೋಕಸಭಾ ಚುನಾವಣೆ ಹತ್ತಿರ ಬರುತ್ತಿದೆ. ದಕ್ಷಿಣ ಭಾರತದಲ್ಲಿ 'ಕೈ'ಗೆ ಸೀಟು ದಕ್ಕಬೇಕಾದರೂ ಎಲ್ಲಿಂದ ? ಕರ್ನಾಟಕದಿಂದ ಗರಿಷ್ಟ ಸೀಟು ಗೆಲ್ಲಬೇಕು. ಬೇರೆ ದಾರಿಯಿಲ್ಲ. ಅಂತೂ ರಾಜ್ಯದ ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದಲ್ಲಿ ಜಾರಿಯಲ್ಲಿದ್ದ ಯೂನಿಟ್ ಪದ್ಧತಿ ರದ್ದು ಮಾಡಿ ಬಿಪಿಎಲ್ ಕುಟುಂಬವೊಂದಕ್ಕೆ ತಿಂಗಳಿಗೆ 30 ಕೆ.ಜಿ. ಅಕ್ಕಿ ನೀಡುವ ತೀರ್ಮಾನ ಘೋಷಿಸಿದ್ದಾರೆ. ಘೋಷಣೆಯೇನೋ ಆಗಿದೆ. ಆದರೆ ತೀರ್ಮಾನ ಜಾರಿಗೆ ಬಂದು ಬಡಕುಟುಂಬಗಳ ಚೀಲದೊಳಕ್ಕೆ ಅಕ್ಕಿ ಬೀಳುವುದರ ಒಳಗೆ ಎಷ್ಟೊಂದು ಅಡ್ಡಿಗಳು, ಆತಂಕಗಳನ್ನು ಎದುರಿಸಬೇಕಾಗಿದೆಯೋ ಏನೋ ? ಆ ಮೇಲೆ ಹಾಲು ಉತ್ಪಾದಕರಿಗೆ ಲೀಟರ್ ಹಾಲಿಗೆ 2. ರೂ ಸಹಾಯಧನ ಹೆಚ್ಚಳ, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಹಿಂದುಳಿದವರಿಗೆ ಮತ್ತು ದಲಿತ ಸಮುದಾಯದವರಿಗೆ ನೀಡಲಾಗಿದ್ದ ಸಾಲಗಳ ಮನ್ನಾ...ಎಲ್ಲ ಸ್ವಾಗತಾರ್ಹ ಕ್ರಮಗಳೇ.

30 ಕೆ.ಜಿ. ಅಕ್ಕಿ ಸಾಕಾ ?

ಇಷ್ಟೇ ಆಯಿತು. 30 ಕೆ.ಜಿ. ಬದ
35 ಕೆ.ಜಿ. ಅಕ್ಕಿ ಯಾಕೆ ಕೊಡಬಾರ
ಯಾಕೆಂದರೆ 35 ಕೆ.ಜಿ. ಅನ್ನುವ
ಒಂದು ವೈಜ್ಞಾನಿಕ ಲೆಕ್ಕಾಚಾರದ ಹಿ
ಇದೆ. ಬೆಲೆ ಏರಿಕೆಯ ಬೆಂಕಿಯ
ಸುಟ್ಟು ಕರಕಲಾಗುತ್ತಿರುವ ಜನರ ಬದು
ಅಗತ್ಯಗಳು ಇನ್ನೂ ಏನೇನೋ ಇವೆ. ಕೇ
ಸರ್ಕಾರದ ಮೇಲೂ ಒತ್ತಡ ಹಾಕಿ ಯ
ರಾಜ್ಯ ಸರ್ಕಾರ ಅಕ್ಕಿಯ ಜೊತೆ ಬೇಳೆ-ಕಾ
ಸಾಬೂನು, ಎಣ್ಣೆ, ಸಕ್ಕರೆ ಅಗತ್ಯವಿರುವ
ಕೊಡುವುದಕ್ಕೆ ಪ್ರಯತ್ನಿಸಬಾರದು ? ಕೇ
ರಾಜ್ಯದಲ್ಲಿ 14 ಅವಶ್ಯಕ ವಸ್ತುಗಳನ್ನು ಕಡಿ
ಬೆಲೆಗೆ ಕೊಡುವಂತೆ.

ರೇಷನ್ ಕಾರ್ಡ್ ಮೂಲಕ ಅಕ್ಕಿ ಮ
ಕೊಡುವುದಾ ? ಕಡಿಮೆ ದರದಲ್ಲಿ ಒಂದ
ರಾಗಿ-ಜೋಳ ಕೊಡುವ ಬಗ್ಗೆ ಯ
ಕೆ ಕ್ರಮವಹಿಸಬಾರದು? ರಾಜ್ಯದ
ಜನರಿಗೂ ಅಕ್ಕಿಯೇ ಮುಖ್ಯ ಆಹಾರ
? ಅಲ್ಲವಲ್ಲ. ಸುಗ್ಗಿಯ ಕಾಲದಲ್ಲಿ
ಕುಸಿಯುವಂತೆ ಮಾಡುವ ಖದಿ
ಶಕ್ತಿಗಳಿಂದ ರಾಗಿ, ಜೋಳ ಬೆಳೆಯ
ರೈತರಿಗೆ ಕೊಂಚ ಬಿಡುಗಡೆಯ
ಸಿಗಬಹುದು.

ಒಂದು ಬಿಪಿಎಲ್ ರೇಷನ್ ಕಾರ್ಡ್
ಸ್ಪರ್ಶಕ್ಕೆ ಕಾದುಕುಳಿತಿರುವ 'ಅಹಲ್ಯೆ'ಯ


ಬಿಪಿಎಲ್ ಕಾರ್ಡು ಸಿಗಬೇ
ಎಷ್ಟೋ ಲಕ್ಷಾಂತರ ಜನರಿಗೆ ಆ ಕಾ
ಸಿಕ್ಕಿಲ್ಲ. ಬಿಜೆಪಿ ಸರ್ಕಾರ ಏಕಾಏಕಿ 40
ರೇಷನ್ ಕಾರ್ಡುಗಳನ್ನು ಒಂದೇ ಸಾ

ಪುಟ 14

ಮನಕಲಕುವ ಢಾಕಾ ದುರಂತ

ಇತ್ತೀಚೆಗೆ ಬಾಂಗ್ಲಾದೇಶದ ರಾಜ ಧಾನಿ ಢಾಕಾದಲ್ಲಿ ಬಹುಮಹಡಿ ಕಟ್ಟ ಕುಸಿದು ಸಾವಿರಕು ಹೆಚ್ಚು ಮಂದಿ ಪ್ರಾ ಕಳೆದುಕೊಂಡಿದ್ದಾ ಅದೊಂದು ಸಿದ್ಧ ಉಡುಪು ಕಾರ್ಖಾನೆಯಾಗಿ ಸಾವಿರಾರು ಜನ ಕಾರ್ಮಿಕರು ಅದರಲ್ಲಿ ದುಡಿಯುತ್ತಿದ್ದರು. ಈ ದುರಂತದಲ್ಲಿ ಮಡಿದ ಶ್ರಮಿಕ ಬಂಧುಗಳ ಪರವ 'ಜನಶಕ್ತಿ' ಕಂಬನಿ ಮಿಡಿಯುತ್ತದೆ.


1. ಕುಸಿದ ಕಟ್ಟಡ


2. ಪ್ರಾಣ ಕಳೆದುಕೊಂಡವರ ದಾರುಣ ಚಿತ್ರ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI